ದೆಹಲಿ ಕರ್ನಾಟಕ ಸಂಘದ

# ಅಭಿಮತ

75
ಅಮೃತ ಮಹೋತ್ಸವ ವರ್ಷ
(1948-2022)

ಮಾರ್ಚ್ 2022
ಬೆಲೆ ರೂ. 1




ಪ್ರಶಸ್ತಿ ಪುರಸ್ಕೃತರಾದ ಸಾಣೇಹಳ್ಳಿ
**ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹಾಗೂ ಡಾ. ಪುರುಷೋತ್ತಮ ಬಿಳಿಮಲೆ ಅವರೊಂದಿಗೆ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ಹಾಗೂ ಸದಸ್ಯರು**



ದೆಹಲಿ ಕರ್ನಾಟಕ ಸಂಘದ 2021–22 ನೇ ಸಾಲಿನ ವಿದ್ಯಾರ್ಥಿ ವೇತನ ಪಡೆದ ಮಕ್ಕಳು




ಡಾ. ಕೆ. ರಾಮೇಶ್ವರಪ್ಪ ಅವರ ಜಾನಪದ ಜೀವಧ್ವನಿ ತಂಡದ ಸದಸ್ಯರೊಂದಿಗೆ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು




ಸೇವಾ ನಿವೃತ್ತಿ ಹೊಂದಿ ತಾಯ್ನಾಡಿಗೆ ತೆರಳುತ್ತಿರುವ ಶ್ರೀ ಎಸ್.ಆರ್. ರಾಜಪ್ಪ ದಂಪತಿಗಳಿಗೆ ಆತ್ಮೀಯ ಬೀಳ್ಕೊಡುಗೆ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 । ಸಂಚಿಕೆ 6
ಮಾರ್ಚ್ 2022

ಪ್ರಧಾನ ಸಂಪಾದಕ
ಚಂದ್ರಶೇಖರ ಎನ್.ಪಿ.

ಸಂಪಾದಕ ಮಂಡಳಿ ಸದಸ್ಯರು
ಕೆ.ಎಸ್. ಮೂರ್ತಿ
ಅಮರೇಶ ದೊಡಮನಿ
ಯಲ್ಲಾಲಿಂಗ ಕೊಪ್ಪದ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ

ಅಧ್ಯಕ್ಷರು
ಸಿ.ಎಂ. ನಾಗರಾಜ

ಉಪಾಧ್ಯಕ್ಷರು
ಡಾ. ಎಂ.ಎಸ್. ಶಶಿ ಕುಮಾರ್
ಪೂಜಾ ಪಿ. ರಾವ್

ಪ್ರಧಾನ ಕಾರ್ಯದರ್ಶಿ
ಆರ್. ರೇಣುಕುಮಾರ್

ಕೋಶಾಧಿಕಾರಿ
ರಾಧಾಕೃಷ್ಣ

ಜಂಟಿ ಕಾರ್ಯದರ್ಶಿಗಳು
ಬಿ. ನಾರಾಯಣ
ಸುಮಿತಾ ಮುರಗೋಡ

ಸಮಿತಿ ಸದಸ್ಯರು
ಪ್ರಭಾಕರ ಮಡ್ಡಿತೋಟ್
ಶಿವಪ್ಪ ಎಂ
ಎ.ಟಿ. ಶ್ರೀನಿವಾಸ
ಮಾಲಿನಿ ಪ್ರಹ್ಲಾದ್
ಕೆ.ಎಸ್. ಮೂರ್ತಿ
ನವೀನ್ ಕುಮಾರ್ ವಿ.
ಸವಿತಾ ನೆಲ್ಲಿ
ಅಶ್ವಿನಿ ಬಿ.ಎಸ್.
ಸಂತೋಷ ಜೆ
ಚಂದ್ರಶೇಖರ ಎನ್.ಪಿ.

ಕಾವಲು ಸಮಿತಿ
ಅನಂತರಾಮ ಅರಳಿ
ಡಿ.ವಿ.ಎಸ್. ಮೂರ್ತಿ
ಈಶ್ವರ ಮಡಿವಾಳ



## ಸಂಪಾದಕೀಯ

### "ಕಲ್ಲಿನಲ್ಲಿ ಕೆತ್ತಿ ಕನ್ನಡವನ್ನು ಬೆಳೆಸಿದ ನಮ್ಮ ಪೂರ್ವಜರ ಭಾಷಾಪ್ರೇಮ ನಮಗೆ ಮಾದರಿಯಾಗಬೇಕು"

**ಬಂಧುಗಳೇ ನಮಸ್ಕಾರ. ತಮಗೆಲ್ಲರಿಗೂ ವಿಶ್ವ ತಾಯ್ನುಡಿ ದಿನಾಚರಣೆಯ ಶುಭಾಶಯಗಳು.**

**ಮೊದಲು ತಾಯ ಹಾಲ ಕುಡಿದು, ಲಲ್ಲೆಯಿಂದ ತೊದಲಿ ನುಡಿದು, ಕೆಳೆಯರೊಂದಿಗೆ ಬೆಳೆದು ಬಂದ ಮಾತದಾವುದು–ನಲ್ಲೆಯೊಲವ ತೆರೆದು ತಂದ ಮಾತದಾವುದು–ಕನ್ನಡದ ಕಣ್ವ ಬಿ.ಎಂ. ಶ್ರೀಕಂಠಯ್ಯ** ಅವರ ಕವನದ ಸಾಲುಗಳಲ್ಲಿ ಮನಸ್ಸಿನ ಭಾವನೆಗಳನ್ನು, ಅಂತರಂಗದ ಸಂವೇದನೆಗಳನ್ನು ಅಭಿವ್ಯಕ್ತಿ ಪಡಿಸಲು ತಾಯ್ನುಡಿ ಎಷ್ಟೊಂದು ಸಶಕ್ತ ಮಾಧ್ಯಮ ಎಂದು ಮನಗಾಣಬಹುದು. ಭಾಷೆ ಬರೀ ಅಕ್ಷರಗಳನ್ನು ಜೋಡಿಸಿ ಆಡುವ ಮಾತಷ್ಟೇ ಅಲ್ಲ. ಒಂದೊಂದು ಭಾಷೆಗೂ ಅದರದೇ ಆದ ಬದುಕಿನ ಕ್ರಮ, ಆರೋಗ್ಯ, ಕರಕುಶಲ ಕಲೆ, ಪುರಾಣ, ನಂಬಿಕೆ, ಸಂಗೀತ, ಹೀಗೆ ಶತ ಶತಮಾನಗಳಿಂದ ಹರಿದು ಬಂದ ಜ್ಞಾನ ಪರಂಪರೆಯ ಹಿನ್ನೆಲೆಯಿದೆ. ಆ ಭಾಷಿಕ ಸಂಸ್ಕೃತಿಯ ಜೀವಂತ ಸಂಸ್ಕೃತಿಯ ಸೆಲೆ ಇದೆ. ಹೀಗಿರುವಾಗ ಒಂದು ಭಾಷೆ ಅವನತಿ ಹೊಂದಿದರೆ ಅದರಿಂದ ಅನೇಕ ಶತಮಾನಗಳ ಜ್ಞಾನದ, ತಿಳುವಳಿಕೆಯ ಅವಸಾನವಾದಂತಾಗುತ್ತದೆ. ಸುಮಾರು ಏಳು ಸಾವಿರ ಭಾಷೆಗಳನ್ನು ಜಗತ್ತಿನಾದ್ಯಂತ ಜನರು ಬಳಸುತ್ತಿದ್ದಾರೆ. ಒಂದು ಅಂದಾಜಿನ ಪ್ರಕಾರ ಜಗತ್ತಿನ ಶೇಕಡ ಎಂಭತ್ತರಷ್ಟು ಪ್ರದೇಶಗಳಲ್ಲಿ ಈಗಾಗಲೇ ಪ್ರಬಲವಾಗಿರುವ 83 ಭಾಷೆಗಳನ್ನು ಬಳಸುತ್ತಾರೆ. ಸುಮಾರು ಮೂರುವರೆ ಸಾವಿರ ಭಾಷೆಗಳನ್ನು ಶೇಕಡಾ 02 ರಷ್ಟು ಪ್ರದೇಶಗಳ ಜನರು ಮಾತ್ರ ಬಳಸುತ್ತಾರೆ. ಇದನ್ನು ಮನಗಂಡು ಯುನೆಸ್ಕೋ 2019 ನೇ ವರ್ಷವನ್ನು ದೇಸೀ ಭಾಷೆಗಳ ಅಂತರರಾಷ್ಟ್ರೀಯ ವರ್ಷವಾಗಿ ಆಚರಿಸಲು ನಿರ್ಧರಿಸಿದ ನಂತರ ಸ್ಥಳೀಯ ಭಾಷೆಗಳ ವ್ಯಾಪಕ ಬಳಕೆಯನ್ನು ಉತ್ತೇಜಿಸುವ ಅಭಿಯಾನ–ಪ್ರಪಂಚದಾದ್ಯಂತ ಬಹಳ ತೀವ್ರಗತಿಯಲ್ಲಿ ನಡೆಯುತ್ತಿದೆ.

ಇನ್ನು ಭಾರತದ ಮಟ್ಟಿಗೆ ಹೇಳುವುದಾದರೆ, ಈಗಾಗಲೇ ಹಲವು ವರದಿಗಳು ಹೇಳುವಂತೆ 1961 ರ ಜನಗಣತಿಯ ಪ್ರಕಾರ, ಭಾರತದಲ್ಲಿ ಸುಮಾರು 1652 ಭಾಷೆಗಳಿದ್ದವು. ಆದರೆ 1971 ರ ಜನಗಣತಿ ಹೊತ್ತಿಗೆ ಸರ್ಕಾರ ಹತ್ತು ಸಾವಿರ ಜನರಿಗಿಂತಲೂ ಕಡಿಮೆ ಜನರು ಬಳಸುವ ಭಾಷೆಗಳನ್ನು ಪಟ್ಟಿ ಮಾಡಬಾರದೆಂಬ ನಿಯಮ ತಂದಿದ್ದರಿಂದ ಆ ವರ್ಷ ನಡೆದ ಜನಗಣತಿಯಲ್ಲಿ 808 ಭಾಷೆಗಳು ಮಾತ್ರ ದಾಖಲಾಗಿವೆ. ಪೀಪಲ್ಸ್ ಲಿಂಗ್ವಿಸ್ಟಿಕ್ ಸರ್ವೆ ಆಫ್ ಇಂಡಿಯಾ ಸಂಸ್ಥೆಯು ಭಾರತದ ಒಳನಾಡಿನಲ್ಲಿರುವ ಕೆಲವು ಬುಡಕಟ್ಟು ಭಾಷೆಗಳು ಬೆಳವಣಿಗೆಯನ್ನು ದಾಖಲಿಸಿದ್ದು ಅದರಂತೆ 780 ಭಾಷೆಗಳನ್ನು ಗುರುತಿಸಲಾಗಿದೆ. 780 ಭಾಷೆಗಳಲ್ಲಿ 400 ಭಾರತದ ಭಾಷೆಗಳು ಅಳಿವಿನಂಚಿನಲ್ಲಿವೆ. ಇವು ಮುಂದಿನ 50 ವರ್ಷಗಳಲ್ಲಿ ನಶಿಸಿ ಹೋಗುವ ಅಪಾಯ ಎದುರಿಸುತ್ತಿವೆ' ಎಂದು ಭಾಷಾ ಶಾಸ್ತ್ರಜ್ಞ ಗಣೇಶ್ ಎನ್. ದೇವಿ ಅವರು ಅಭಿಪ್ರಾಯ ಪಡುತ್ತಾರೆ.

ಇನ್ನು ಕನ್ನಡ ಭಾಷೆಯ ಸ್ಥಿತಿಗತಿ ಕುರಿತು ಅವಲೋಕಿಸಿದಾಗ, ಇತ್ತೀಚೆಗೆ ನಡೆದ ಸಮೀಕ್ಷೆಯ ಪ್ರಕಾರ ದೇಶದಲ್ಲಿ ಕನ್ನಡ 8ನೇ ಸ್ಥಾನದಲ್ಲಿದೆ. 2001 ರಿಂದ 2011ರವರೆಗೆ ಕನ್ನಡ ಭಾಷೆ ಮಾತನಾಡುವವರ ಸಂಖ್ಯೆ 4,37,06,512. ಭಾರತದ ಜನಸಂಖ್ಯೆಯ ಶೇ. 3.37 ರಷ್ಟು ಇದೆ. ಈ ಒಂದು ದಶಕದಲ್ಲಿ ಜನಸಂಖ್ಯೆಯಲ್ಲಿ ಅನೇಕ ಪಟ್ಟು ಹೆಚ್ಚಿದೆಯಾದರೂ ಕನ್ನಡ ಮಾತನಾಡುವವರ ಸಂಖ್ಯೆಯಲ್ಲಿ ಶೇಕಡಾವಾರು ಪ್ರಮಾಣ ಇಳಿಮುಖವಾಗಿದೆ. 2001–2011ರ ನಡುವೆ ಕನ್ನಡ ಭಾಷೆಯನ್ನು ಮಾತನಾಡುವವರ ಸಂಖ್ಯೆಯಲ್ಲಿ ಹೆಚ್ಚಳವಾಗಿಲ್ಲ ಅಂದರೆ ಹೊಸ ತಲೆಮಾರಿನವರಲ್ಲಿ ಕನ್ನಡ ಕಲಿಯುವವರ ಸಂಖ್ಯೆ ಕಡಿಮೆಯಾಗಿದೆ ಎಂದರ್ಥ. ಇನ್ನು ಹೊರನಾಡಿನಲ್ಲಿರುವ ಕನ್ನಡಿಗರ ಮನೆ ಮತ್ತು ಮನಗಳಲ್ಲಿ ಕನ್ನಡದ ಸ್ಥಿತಿಯನ್ನು ಕುರಿತು ಹೇಳುವುದಾದರೆ ನಾವು ಮನೆಯಲ್ಲಿ ಬಳಸುವ ಭಾಷೆ, ಕಚೇರಿಯಲ್ಲಿ ವ್ಯವರಿಸುವ ಭಾಷೆ, ಮಾರುಕಟ್ಟೆಯಲ್ಲಿ ಸಂವಹನಕ್ಕೆ ಬಳಸುವ ಭಾಷೆ ಎಲ್ಲವೂ ಬೇರೆಯೇ ಇರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ತಾಯ್ನುಡಿಯನ್ನು ಉಳಿಸಿಕೊಂಡು ನಮ್ಮ ಮುಂದಿನ ಪೀಳಿಗೆಗೆ ಸಾಗಿಸುವ ಕೆಲಸ ಸವಾಲಿನದ್ದೇ ಆಗಿದೆ ಎಂದರೆ ತಪ್ಪಾಗಲಾರದು.

ಇಂತಹ ಸವಾಲುಗಳು ನಮ್ಮ ದೇಸೀಯ ಭಾಷೆಗಳಿಗೆ ಹಲವಾರು ಇವೆ. ಉದಾಹರಣೆಗೆ ನಮ್ಮ ಹಿರಿಯ ತಲೆಮಾರಿನ ವಿದ್ವಾಂಸರು ಪಂಪ, ಕುಮಾರವ್ಯಾಸರಂತಹ ಕವಿಗಳ ಸುದೀರ್ಘ ಪದ್ಯಗಳನ್ನು ಕೂಡ ಬಾಯಿಪಾಠ ಮಾಡಿಕೊಂಡು ಉದಾಹರಿಸುವ ವಿದ್ವತ್ ಜನರೂ ವಿರಳವಾಗಿದ್ದಾರೆ. ವಸಾಹತುಶಾಹಿ ಪ್ರಭಾವದಿಂದಾಗಿ ಕನ್ನಡ ಕಲಿಯುವವರು, ಕಲಿತವರಲ್ಲೂ ಸ್ಪಷ್ಟವಾಗಿ ಕನ್ನಡ ಉಚ್ಚರಿಸಬಲ್ಲವರೂ ಕಡಿಮೆಯಾಗುತ್ತಿದ್ದಾರೆ. ಇಂತಹ ಹಲವು ಆತಂಕಗಳ ನಡುವೆ ನಮ್ಮ ದೇಸೀ ಭಾಷೆಗಳನ್ನು ನಮ್ಮ ಹೊಸ ಪೀಳಿಗೆಗೆ ಕಲಿಸುವ ಹೊಸ ಹೊಸ ಮಾರ್ಗಗಳನ್ನು ನಾವು ಕಂಡುಕೊಳ್ಳಬೇಕಿದೆ.

ಆಡು ಭಾಷೆಯಾಗಿದ್ದ ಕನ್ನಡವನ್ನು ಅನೇಕ ರಾಜ ಮಹಾರಾಜರು ರಾಜಮರ್ಯಾದೆಯಿಂದ ಗೌರವಿಸಿ ಆಡಳಿತದಲ್ಲಿ ಬಳಸಿ ಬೆಳೆಸಿ ಉಳಿಸಿದ್ದಾರೆ. ಕನ್ನಡವನ್ನು ಬಂಡೆಗಲ್ಲಿನ ಮೇಲೆ ಕೊರೆಯುವಾಗ ತಾಳೆಯ ಗರಿಗಳ ಮತ್ತು ತಾಮ್ರ ಪಟಗಳ ಮೇಲೆ ಬರೆಯುವಾಗ ನಮ್ಮ ಹಿಂದಿನ ತಲೆಮಾರಿನ ಕನ್ನಡಿಗರು ಪಟ್ಟಿರುವ ಶ್ರಮ, ಅವರು ತೋರುತ್ತಿದ್ದ ಮುತುವರ್ಜಿಯನ್ನು ಅರ್ಥ ಮಾಡಿಕೊಂಡು ಈಗಿನ ನಮ್ಮ ಸಮಕಾಲೀನ ಕನ್ನಡಿಗರು, ಸಾಮಾಜಿಕ ಜಾಲತಾಣ, ಇಮೇಲ್ ಮತ್ತು ದೂರವಾಣಿ ಸಂದೇಶಗಳನ್ನು ಕನ್ನಡ ತಂತ್ರಾಂಶಗಳನ್ನು ಬಳಸಿ ಕನ್ನಡ ಲಿಪಿಯಲ್ಲಿ ಬರೆಯುವ ಔದಾರ್ಯ ತೋರಿದರೆ ನಿಜಕ್ಕೂ ಕನ್ನಡ ತಾಯಿ ಭುವನೇಶ್ವರಿಗೆ ಅದು ಕನ್ನಡಿಗರಾದ ನಾವು ಸಲ್ಲಿಸುವ ದೊಡ್ಡ ಕಾಣಿಕೆ. ನಾವು ನಮ್ಮ ಭಾಷೆಯನ್ನಾಡುವ ಜನರ ಸಂಖ್ಯೆಯನ್ನು ಕಳೆದುಕೊಳ್ಳುತ್ತಿದ್ದೇವೆ. ಆದರೆ ಮುಂದೊಂದು ದಿನ ನಮ್ಮ ಲಿಪಿಯನ್ನು ಕಳೆದುಕೊಳ್ಳಬಾರದು. ಪರಿವರ್ತನೆ ನಿಸರ್ಗದ ನಿಯಮ, ಹಾಗೆಂದು ನಾವೆಲ್ಲ ನಮ್ಮತನವನ್ನು ಕಳೆದುಕೊಳ್ಳಬಾರದು. ಟೈಮ್ಸ್ ಇಂಟರ್‌ನೆಟ್ ನಡೆಸಿದ ಸರ್ವೆಯಲ್ಲಿ ಭಾರತೀಯ ಭಾಷೆಗಳನ್ನು ಮೊಬೈಲ್‌ಗಳಲ್ಲಿ ಬಳಕೆ ಮಾಡುತ್ತಿರುವ ವಿವಿಧ ಭಾಷಿಕರ ಅಂಕಿ ಸಂಖ್ಯೆಗಳನ್ನು ಪ್ರಕಟಿಸಿರುವ ಪ್ರಕಾರ ಕನ್ನಡದ ಬಳಕೆ ಶೇಕಡ 61.8 ರಷ್ಟಿದ್ದರೆ, ಹಿಂದಿ ಬಳಕೆ 69.7 ರಷ್ಟಿದೆ. ಕನ್ನಡ ಭಾಷೆ ಮತ್ತು ಲಿಪಿಗಳ ಬಳಕೆಯಲ್ಲೂ ನಾವು ಎಲ್ಲರಿಗಿಂತ 'ಮೊದಲ' ಸ್ಥಾನದಲ್ಲಿ ನಿಲ್ಲುವುದಕ್ಕೆ ಏಕೆ ಪ್ರಯತ್ನಿಸಬಾರದು.?

ಬಂಧುಗಳೇ, ಈ ನಿಟ್ಟಿನಲ್ಲಿ ನಾವೆಲ್ಲರೂ ತಂತ್ರಾಂಶದ ನೆರವಿನಿಂದ ಕನ್ನಡ ಲಿಪಿಯನ್ನು ಬಳಸೋಣ. ಆ ಮೂಲಕ ಅಂತರ್ಜಾಲ ಬಳಕೆಯಲ್ಲಿ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ಪ್ರತಿಯೊಬ್ಬರೂ ಮೊದಲಿಗರಾಗೋಣ. ಕನ್ನಡವನ್ನು ಇಂಗ್ಲಿಷ್ ಲಿಪಿಯಲ್ಲಿ ಬರೆಯುವುದರಿಂದ ಸುಲಭವಾಗಿ ಓದಲಾಗದೆ ಕಿರಿಕಿರಿ ಎನಿಸುವುದನ್ನು ತಪ್ಪಿಸೋಣ ಎಂದು ಪಣ ತೊಟ್ಟು ನಮ್ಮ ಭಾಷೆಯನ್ನು ಉಳಿಸಿ ಬೆಳೆಸೋಣ. ವಿಶ್ವಲಿಪಿಗಳಲ್ಲೇ ಸುಂದರವಾದ ಲಿಪಿ ಕನ್ನಡ ಎಂಬ ಹೆಗ್ಗಳಿಕೆಯನ್ನು ಹೊತ್ತಿರುವ ನಮ್ಮ ತಾಯಿನುಡಿ ಕನ್ನಡದ ಕೀರ್ತಿಯನ್ನು ಮುಗಿಲೆತ್ತರಕ್ಕೆ ಕೊಂಡೊಯ್ಯೋಣ." ಎಂಬ ಆಶಯದೊಂದಿಗೆ ಈ ಸಂಚಿಕೆಯಲ್ಲಿ ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿ ಪ್ರಧಾನ ಸಮಾರಂಭವೂ ಸೇರಿದಂತೆ ಹಲವು ಕಾರ್ಯಕ್ರಮಗಳ ವರದಿಯೊಂದಿಗೆ ಅಭಿಮತವನ್ನು ನಿಮ್ಮ ಕೈಗಿಡುತ್ತಿದ್ದೇವೆ. ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

**ಯುಗಾದಿ ವಿಶೇಷ ಸಂಚಿಕೆಗೆ ಸೃಜನಾತ್ಮಕ ಲೇಖನ, ಕವನ, ಸಣ್ಣ ಕತೆ ಇತ್ಯಾದಿ ಬರಹಗಳನ್ನು ಬರೆಯಲಿಚ್ಛಿಸುವ ದೆಹಲಿ ಕರ್ನಾಟಕ ಸಂಘದ ಸದಸ್ಯರು ತಮ್ಮ ಬರಹಗಳನ್ನು ಸಂಘದ ಕಚೇರಿಗೆ ತಲುಪಿಸಲು ಕೋರಲಾಗಿದೆ.**
**ಸಂಪಾದಕರು**

ಅಮೃತ ಮಹೋತ್ಸವ ವರ್ಷ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 ಸಂಚಿಕೆ–6
ಮಾರ್ಚ್–2022, ಬೆಲೆ ರೂ. 1

## ಅಧ್ಯಕ್ಷರ ನುಡಿ

ಆತ್ಮೀಯ ಸದಸ್ಯರೇ,

ಕೊರೊನ ನಂತರ ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳು ಶುಭಾರಂಭ ಆಗಿವೆ. ಮೊದಲಿಗೆ ವಿಶ್ವ ಮಾತೃಭಾಷಾ ದಿನಾಚರಣೆ ಅಂಗವಾಗಿ ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ಆಯೋಜಿಸಿದ ಮಾತೃಭಾಷೆ ಮತ್ತು ಸೋದರ ಭಾಷೆಗಳಿಗಿರುವ ಸಂಬಂಧ ಕುರಿತ ಕಾರ್ಯಕ್ರಮವು ಅರ್ಥಪೂರ್ಣವಾಗಿ ನಡೆಯಿತು. ಕನ್ನಡ ಮತ್ತು ಸೋದರ ಭಾಷೆಗಳಾದ ತೆಲುಗು, ತಮಿಳು, ಮಲೆಯಾಳಂ, ಬ್ಯಾರಿ, ತುಳು, ಕೊಂಕಣಿ, ಮರಾಠಿ, ಅರೆಭಾಷೆ ಹಾಗೂ ಕೊಡವ ಈ ಎಲ್ಲಾ ಭಾಷೆಗಳೊಂದಿಗೆ ಕನ್ನಡಕ್ಕೆ ಇರುವ ಸಂಬಂಧಗಳ ವಿಷಯದಲ್ಲಿ ಮಾತನಾಡಿದ ಶ್ರೀಮತಿ ನಂದಿನಿ ಮಲ್ಯ, ಶ್ರೀಮತಿ ಸರೋಜ ಮಾಧವ, ಶ್ರೀಮತಿ ಮೈಥಿಲಿ ಅಟ್ಟಾವರ್, ಶ್ರೀಮತಿ ನಿರ್ಮಲಾ ನಾಗೇಶ್, ಶ್ರೀಮತಿ ರಾಜೇಶ್ವರಿ ಭಟ್, ಶ್ರೀ ಕೆ.ಟಿ. ಗಣೇಶ್, ಶ್ರೀ ಚಂದ್ರಶೇಖರ್ ಜೋಳದರಾಶಿ, ಶ್ರೀ ಮಹಮ್ಮದ್ ಇಸ್ಮಾಯಿಲ್ ಈ ಎಲ್ಲಾ ಸದಸ್ಯರು, ಕನ್ನಡ ಮತ್ತು ಸೋದರ ಭಾಷೆಗಳಿಗೆ ನೀಡಿರುವ ಮಹತ್ವದ ಬಗ್ಗೆ ತುಂಬ ಸೊಗಸಾಗಿ ವಿಷಯ ಮಂಡಿಸಿದರು. ಈ ಕಾರ್ಯಕ್ರಮ ಎರಡೂವರೆ ಗಂಟೆಗಳವರೆಗೆ ನಡೆಯಿತು. ಇನ್ನೂ ಸುಮಾರು ಐದು ಗಂಟೆಗಳು ಮುಂದುವರಿಯುವಷ್ಟು ಉತ್ಸಾಹಭರಿತ ದೆಹಲಿ ಕನ್ನಡಿಗರು / ಪ್ರೇಕ್ಷಕರಿದ್ದ ಅರ್ಥಪೂರ್ಣ ಕಾರ್ಯಕ್ರಮವಿದು. ಈ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಹಿರಿಯ ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ, ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ ವಿಶ್ವನಾಥ ಮತ್ತು ನವದೆಹಲಿಯ ಗುರುಗೋವಿಂದ್ ಸಿಂಗ್ ಇಂದ್ರಪ್ರಸ್ಥ ಯೂನಿವರ್ಸಿಟಿಯ ಪರೀಕ್ಷಾ ನಿಯಂತ್ರಕರಾದ ಡಾ. ಎಸ್.ಎಲ್. ಭಂಡಾರ್‌ಕರ್ ಇವರುಗಳು ಮಾತೃಭಾಷೆಯ ಸಂಬಂಧಗಳ ಬಗ್ಗೆ ಅರ್ಥಪೂರ್ಣ ಹಾಗೂ ವಿದ್ವತ್ಪೂರ್ಣವಾಗಿ ಮಾತನಾಡಿದರು. ಮಾತೃ ಭಾಷಾ ದಿನಾಚರಣೆಯ ಅಂಗವಾಗಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಹಾಗು ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕವೂ ಸಹ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

ಎರಡು ಸಾವಿರ ವರ್ಷಗಳಿಗೂ ಹೆಚ್ಚಿನ ಇತಿಹಾಸ ಕನ್ನಡ ಭಾಷೆಗಿದೆ. ಕೇಂದ್ರ ಸರ್ಕಾರದಿಂದ ಕನ್ನಡಕ್ಕೆ ಶಾಸ್ತ್ರೀಯ ಭಾಷಾ ಸ್ಥಾನಮಾನ ದೊರಕುವ ಸಮಯದಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ಹಿರಿಯ ಸಾಹಿತಿಗಳೊಂದಿಗೆ ಚರ್ಚಿಸಲಾಗಿತ್ತು. ನಂತರ ದೆಹಲಿ ಕರ್ನಾಟಕ ಸಂಘದಲ್ಲಿ ಭಾಷೆಯ ಬಗೆಗಿನ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆದಿದೆ. ಈ ವರ್ಷ ದೆಹಲಿ ಕರ್ನಾಟಕ ಸಂಘಕ್ಕೆ ಅಮೃತ ಮಹೋತ್ಸವ ವರ್ಷವಾಗಿದ್ದು, ಬರುವ ದಿನಗಳಲ್ಲಿ ಸಾಹಿತ್ಯಿಕ ಹಾಗು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು. ಇದೇ ಮಾರ್ಚ್ ಹನ್ನೆರಡನೇ ತಾರೀಕು ಕಜಕಿಸ್ತಾನ್ ದೇಶದ ಅಂತಾರಾಷ್ಟ್ರೀಯ ಕಲಾವಿದರು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ನಮ್ಮ ಶಾಸ್ತ್ರೀಯ ನೃತ್ಯ ಪ್ರದರ್ಶನ ಮಾಡಲಿದ್ದಾರೆ. ಇಸ್ಲಾಮಿಕ್ ರಾಷ್ಟ್ರ ಕಜಕಿಸ್ತಾನ್ ದೇಶದ ಕಲಾವಿದರು ನಮ್ಮ ದೇಶದ ಶಾಸ್ತ್ರೀಯ ನೃತ್ಯವನ್ನು ನೀಡುತ್ತಿರುವುದು ಪ್ರಶಂಸನೀಯ.

ಪ್ರತಿ ಎರಡು ವರ್ಷಕ್ಕೊಮ್ಮೆ ನೀಡಲಾಗುವ ಡಾ. ಶಿವರಾಮ ಕಾರಂತ ಪ್ರಶಸ್ತಿ, ಪ್ರತಿ ವರ್ಷವೂ ಪ್ರದಾನ ಮಾಡಲಾಗುವ ಡಾ. ಸರೋಜಿನಿ ಮಹಿಷಿ ಹಾಗೂ ದೆಹಲಿ ಕರ್ನಾಟಕ ಸಂಘದ ಕನ್ನಡ ಭಾರತಿ ರಂಗ ಪ್ರಶಸ್ತಿ ಈ ಮೂರು ಪ್ರತಿಷ್ಠಿತ ಪ್ರಶಸ್ತಿಗಳನ್ನು ದೆಹಲಿ ಕರ್ನಾಟಕ ಸಂಘವು ನೀಡುತ್ತಾ ಬರುತ್ತಿದೆ. ಪ್ರತಿ ವರ್ಷದಂತೆ ಈ ವರ್ಷವೂ ಸಹ ಪ್ರಶಸ್ತಿ ಆಯ್ಕೆ ಸಮಿತಿಯನ್ನು ರಚಿಸಲಾಗಿತ್ತು. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಟಿ.ಎಸ್. ನಾಗಾಭರಣ, ಕವಿ ಮತ್ತು ನಾಟಕಕಾರರಾದ ಪ್ರೊ. ಎಚ್. ಎಸ್. ಶಿವಪ್ರಕಾಶ್ ಹಾಗೂ ಹಿರಿಯ ರಂಗಕರ್ಮಿ ಶ್ರೀ ಶ್ರೀನಿವಾಸ್ ಜಿ. ಕಪ್ಪಣ್ಣ ಇವರನ್ನೊಳಗೊಂಡ ಸಮಿತಿ ಮೂರು ಉತ್ತಮ ಸಾಧಕರನ್ನು ಆಯ್ಕೆ ಮಾಡಿದೆ. ಅವರ ಆಯ್ಕೆಯನ್ನು ಪರಿಗಣಿಸಿ ದೆಹಲಿ ಕರ್ನಾಟಕ ಸಂಘ ಈ ಬಾರಿ ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ಸಾಣೇಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರಿಗೆ ಪ್ರದಾನ ಮಾಡಿದೆ. ಹಾಗು ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಹಿರಿಯ ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ನೀಡಿ ಗೌರವಿಸಲಾಗಿದೆ. ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ಹೆಗ್ಗೋಡಿನ ಅಕ್ಷರ ಪ್ರಕಾಶನದ ಶ್ರೀ ಅಕ್ಷರ ಅವರಿಗೆ ನೀಡುತ್ತಿದ್ದೇವೆ. ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ ಈ ಮೂರೂ ಮಹನೀಯರ ಸೂಕ್ತ ಆಯ್ಕೆ ಎಂದು ಭಾವಿಸಿದ್ದೇವೆ. ಫೆಬ್ರವರಿ 26 ರಂದು ನಡೆದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪೂಜ್ಯ ಸಾಣೇಹಳ್ಳಿ ಶ್ರೀಗಳು ಹಾಗೂ ಡಾ. ಬಿಳಿಮಲೆಯವರು ಪ್ರಶಸ್ತಿಗಳನ್ನು ಸ್ವೀಕರಿಸಿ ದೆಹಲಿ ಕರ್ನಾಟಕ ಸಂಘದ ಗೌರವವನ್ನು ಹೆಚ್ಚಿಸಿದ್ದಾರೆ. ಕಾರಣಾಂತರದಿಂದ ಕಾರ್ಯಕ್ರಮಕ್ಕೆ ಆಗಮಿಸಲಾಗದ ಶ್ರೀ ಅಕ್ಷರರವರಿಗೆ ಮುಂಬರುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಇದೇ ಸಂದರ್ಭದಲ್ಲಿ ಪ್ರತಿ ವರ್ಷದಂತೆ ಈ ವರ್ಷದ ವಿದ್ಯಾರ್ಥಿ ವೇತನವನ್ನೂ ಸಹ ನೀಡಿದ್ದೇವೆ. ಅರ್ಹತೆ ಆಧಾರದ ಮೇಲೆ ಹದಿನಾರು ಮಕ್ಕಳಿಗೆ ಹಾಗು ಅಗತ್ಯ ಇರುವ ಮೂವತ್ತೊಂದು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಿದ್ದೇವೆ. ಮಾರಕ ರೋಗ ಕೊರೊನ ಇದ್ದ ಕಾರಣದ ಹಿನ್ನೆಲೆಯಲ್ಲಿ ಈ ಸಾಲಿನಲ್ಲಿ ಅಗತ್ಯ ಇರುವ ಹದಿನೈದು ಮಕ್ಕಳಿಗೆ ಹೆಚ್ಚುವರಿಯಾಗಿ ವಿದ್ಯಾರ್ಥಿ ವೇತನ ವಿತರಣೆ ಮಾಡಿದ್ದೇವೆ.

ಆತ್ಮೀಯ ಕನ್ನಡಿಗರೇ, ಬರುವ ಏಪ್ರಿಲ್ ತಿಂಗಳಲ್ಲಿ ಅಮೃತ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಸಾಂಸ್ಕೃತಿಕ ಕಲೆ ಹಾಗೂ ಕಲಾವಿದರನ್ನು ಗುರುತಿಸುವ ನಿಟ್ಟಿನಲ್ಲಿ ಜಿಲ್ಲಾ ಹಾಗೂ ಪ್ರಾಂತ್ಯವಾರು ಆಧಾರದ ಮೇಲೆ ಮೊದಲಿಗೆ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವವನ್ನು ಆಚರಣೆ ಮಾಡುತ್ತಿದ್ದೇವೆ. ಈ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ತಾವೆಲ್ಲರೂ ಯಶಸ್ವಿಗೊಳಿಸಬೇಕೆಂದು ಮನವಿ.

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಸಂದರ್ಭದಲ್ಲಿ ಎಲ್ಲಾ ಜಿಲ್ಲೆಗಳಿಗೆ ಅವಕಾಶ ನೀಡುವ ಉದ್ದೇಶದ ಮೇರೆಗೆ "ಕಲ್ಯಾಣ ಕರ್ನಾಟಕ ಉತ್ಸವ" ಕಾರ್ಯಕ್ರಮಗಳ ನಿಟ್ಟಿನಲ್ಲಿ ಕಲಬುರಗಿಗೆ ಮಾರ್ಚ್ 6,7 ರಂದು ಪ್ರವಾಸ ಕೈಗೊಂಡಿದ್ದೆ. ಮಾಜಿ ರಾಜ್ಯ ಸಭಾ ಸಂಸದರೂ, ಪ್ರಸ್ತುತ ಕಲ್ಯಾಣ ಕರ್ನಾಟಕದ ಕೃಷಿ, ಮಾನವ ಸಂಪನ್ಮೂಲ ಸಾಂಸ್ಕೃತಿಕ ಸಂಘದ ಅಧ್ಯಕ್ಷರೂ ಆದ ಶ್ರೀ ಬಸವರಾಜ ಪಾಟೀಲ್ ಸೇಡಂ ಇವರನ್ನು ಭೇಟಿ ಮಾಡಿ ಕಾರ್ಯಕ್ರಮಕ್ಕೆ ಆಗಮಿಸಲು ಮತ್ತು ಆರ್ಥಿಕವಾಗಿ ಸಹಾಯ ನೀಡಬೇಕೆಂದು ಕೇಳಿಕೊಂಡಿದ್ದೇನೆ ನಮ್ಮ ಕಾರ್ಯಕ್ರಮಕ್ಕೆ ಬರಲು ಅವರು ಒಪ್ಪಿಕೊಂಡಿದ್ದಾರೆ.

ಬಂಧುಗಳೇ, ನನ್ನ ಆತ್ಮೀಯ ಮಿತ್ರರಾದ ಹಾಗು ಜನಪ್ರಿಯ ಶಾಸಕರುಗಳಾದ ಶ್ರೀ ಬಸವರಾಜ್ ಮತ್ತಿಮೂಡ್ (ಗುಲ್ಬರ್ಗಾ ಗ್ರಾಮೀಣ), ಶ್ರೀ ಅಪ್ಪುಗೌಡ ಪಾಟೀಲ್, (ಗುಲ್ಬರ್ಗಾ ನಗರ), ಶ್ರೀ ಹರ್ಷ ಸುಭಾಷ್ ಗುತ್ತೇದಾರ್ (ಅಳಂದ, ಗುಲ್ಬರ್ಗಾ) ಹಾಗು ಜನಪ್ರಿಯ ಕಲಬುರಗಿ ಲೋಕಸಭಾ ಸದಸ್ಯರಾದ ಮಾನ್ಯ ಡಾ. ಶ್ರೀ ಉಮೇಶ್ ಜಾಧವ್‌ರವರನ್ನು ಮತ್ತು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರನ್ನು ಸಹ ಈ ಕಾರ್ಯಕ್ರಮಕ್ಕೆ ಆಮಂತ್ರಿಸುತ್ತಿದ್ದೇವೆ, ಮುಖ್ಯವಾಗಿ ರಂಗಾಯಣ ಕಲಬುರಗಿ ನಿರ್ದೇಶಕರಾದ ಶ್ರೀ ಪ್ರಭಾಕರ್ ಜೋಶಿರವರನ್ನು ಭೇಟಿ ಮಾಡಿ ಕಾರ್ಯಕ್ರಮದ ರೂಪರೇಷೆಯ ಬಗ್ಗೆ ಚರ್ಚೆ ಮಾಡಲಾಯಿತು. ಆಕಾಶವಾಣಿ ಕಲಬುರಗಿ ನಿರ್ದೇಶಕರಾದ ಶ್ರೀ ಸದಾನಂದ ಪೆರ್ಲರವರನ್ನು ಸಹ ಭೇಟಿ ಮಾಡಿ ಕಾರ್ಯಕ್ರಮಕ್ಕೆ ಸಹಕಾರವನ್ನು ಕೇಳಿಕೊಂಡಿದ್ದೇನೆ. ಅನೇಕ ಗಣ್ಯಾತಿ ಗಣ್ಯರನ್ನು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಮತ್ತು ಸಹಕಾರ ನೀಡಲು ಕೇಳಿಕೊಂಡಾಗ ಪ್ರೀತಿಯಿಂದ ಅವರೆಲ್ಲರೂ ಬರಲು ಒಪ್ಪಿಕೊಂಡಿದ್ದಾರೆ. ಜುಲೈ ತಿಂಗಳಲ್ಲಿ ಕಲ್ಯಾಣ ಕರ್ನಾಟಕ ಉತ್ಸವವನ್ನು ಮಾಡಲು ತೀರ್ಮಾನಿಸುತ್ತಿದ್ದೇವೆ. ಈ ಕಾರ್ಯಕ್ರಮದಲ್ಲಿ ಸಂಪೂರ್ಣ ಕಲ್ಯಾಣ ಕರ್ನಾಟಕದ ಕಲಾವಿದರು ಭಾಗವಹಿಸಲಿದ್ದು ರಾಷ್ಟ್ರ ರಾಜಧಾನಿಯಲ್ಲಿ ಕನ್ನಡವನ್ನು, ಕಲ್ಯಾಣ ಕರ್ನಾಟಕದ ಸಂಸ್ಕೃತಿಯನ್ನು ಪಸರಿಸಲಿದ್ದಾರೆ.

ನಮ್ಮ ಎಲ್ಲಾ ಗೌರವಾನ್ವಿತ ಮಹಿಳೆಯರಿಗೆ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

*ಸಿ.ಎಂ. ನಾಗರಾಜ*
*ಅಧ್ಯಕ್ಷರು*

## ಮುನ್ನೋಟ

ಆತ್ಮೀಯರೇ,

ದೆಹಲಿಯ ಚಳಿ ಹಾಗೂ ಕೊರೊನಾದ ದಿಗ್ಬಂಧನದಿಂದ ಹೊರ ಬಂದ ದೆಹಲಿಗರಿಗೆ ಮನಸ್ಸಿಗೆ ಮುದ ನೀಡುತ್ತಿರುವ ಸುಂದರವಾದ ಹವಾಗುಣ, ಕಣ್ಣನಗಳಿಗೆ ಬಣ್ಣವೆರಚಿದಂತೆ ಅಹ್ಲಾದಕರ ವಾತಾವರಣವನ್ನು ಸೃಷ್ಟಿಸುತ್ತಿರುವ ಬಣ್ಣ ಬಣ್ಣದ ಹೂಗಳು ಮುಂಬರುವ ಒಳ್ಳೆಯ ದಿನಗಳ ಸಂಕೇತ. ದೆಹಲಿಯ ಎಲ್ಲಾ ಪ್ರಮುಖ ರಸ್ತೆ ಬದಿ, ಪಾರ್ಕುಗಳು ಎಲ್ಲೆಡೆ ಬಣ್ಣ ಬಣ್ಣದ ಹೂಗಳು. ರಾಷ್ಟ್ರಪತಿ ಭವನದ ಮುಘಲ್ ಗಾರ್ಡನ್‌ನಿಂದ ಹಿಡಿದು ಮನೆ ಪಕ್ಕದ ಪುಟ್ಟ ಪಾರ್ಕ್‌ನಲ್ಲಿಯೂ ಈ ಅಂದದ ಹೂಗಳ ಅಬ್ಬರ.

ಇನ್ನು ಶಾಲೆಗಳು ಪ್ರಾರಂಭವಾಗಿವೆ. ಮಕ್ಕಳು ತಮ್ಮ ಜಡತ್ವದಿಂದ ಹೊರ ಬಂದು ಉಲ್ಲಾಸಭರಿತ ಶಾಲಾ ಜೀವನದತ್ತ ಸಂತಸದಿಂದ ಹೊರಡುತ್ತಿದ್ದಾರೆ. ಜೊತೆ ಜೊತೆಗೆ ಪರೀಕ್ಷೆಗಳ ತಯಾರಿಯೂ ಜೋರಾಗಿ ನಡೆಯುತ್ತಿದೆ. ಎಲ್ಲಾ ನನ್ನ ವಿದ್ಯಾರ್ಥಿ ವೃಂದದವರಿಗೆ ಶುಭ ಕಾಮನೆಗಳು.

ಸಂಘದ ಚಟುವಟಿಕೆಗಳು ಸಹ ಗರಿಕೆದರಿವೆ. ಮುಂದಿನ ದಿನಗಳಲ್ಲಿ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜನೆಗೊಳ್ಳಲಿದ್ದು ತಮ್ಮಗಳ ಮನರಂಜನೆಗೆ ಸಿದ್ಧವಾಗಿದೆ.

ದಯವಿಟ್ಟು ಮನೆಯಿಂದ ಹೊರಬಂದು ತೆರೆದ ಮನಸ್ಸಿನಿಂದ ನಮ್ಮ ಸಂಘದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಪ್ರೋತ್ಸಾಹಿಸಿ. ತಮ್ಮ ಪ್ರೋತ್ಸಾಹ ನಮಗೆ ಸ್ಪೂರ್ತಿ.

*ಆರ್. ರೇಣುಕುಮಾರ್*
*ಪ್ರಧಾನ ಕಾರ್ಯದರ್ಶಿ*

## ಸಂಘದ ಮುಂಬರುವ ಕಾರ್ಯಕ್ರಮಗಳು

**12** ಮಾರ್ಚ್ 2022 ಸಂಜೆ 6.30 ಗಂಟೆಗೆ

**ಕಜಕೀಸ್ತಾನ ಕಲಾವಿದರಿಂದ ನೃತ್ಯ ಕಾರ್ಯಕ್ರಮ**

**20** ಮಾರ್ಚ್ 2022

**ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸ್ಥಳೀಯ ಕಲಾವಿದರಿಂದ ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ**

**26, 27** ಮಾರ್ಚ್ 2022

**ಕ್ರಿಕೆಟ್ ಪಂದ್ಯಾವಳಿ–ತಾಲ್ಕತೋರಾ ಕ್ರಿಕೆಟ್ ಮೈದಾನದಲ್ಲಿ**

**16** ಏಪ್ರಿಲ್ 2022

**ಅಮೃತ ಮಹೋತ್ಸವ ಆಚರಣೆ ಉದ್ಘಾಟನಾ ಸಮಾರಂಭ**
**ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮ**

**17** ಏಪ್ರಿಲ್ 2022

**ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವ ಸಾಂಸ್ಕೃತಿಕ ಕಾರ್ಯಕ್ರಮ**

## ಮಹಿಳಾ ದಿನಾಚರಣೆ

ದೆಹಲಿ ಕರ್ನಾಟಕ ಸಂಘವು ಇದೇ ಮಾರ್ಚ್ 20, 2022ರಂದು ವಿಶ್ವ ಮಹಿಳಾ ದಿನಾಚರಣೆಯ ಅಂಗವಾಗಿ "**ಮಹಿಳಾ ಸಬಲೀಕರಣ ಹಾಗೂ ಸಮಾಜದ ಅಭಿವೃದ್ಧಿಗೆ ಮಹಿಳೆಯ ಪಾತ್ರ**" ಕುರಿತಂತೆ ವಿಚಾರ ಸಂಕಿರಣ ಹಾಗೂ ಸ್ಥಳೀಯರಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ವಿಚಾರ ಸಂಕಿರಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು ಈ ಕೆಳಕಂಡವರನ್ನು ಸಂಪರ್ಕಿಸಬೇಕಾಗಿ ವಿನಂತಿ.

**ಸಂಘದ ಕಚೇರಿ–26109615/26104818** ಉಪಾಧ್ಯಕ್ಷೆ ಶ್ರೀಮತಿ ಪೂಜಾ ಪಿ. ರಾವ್–9810882498

ಪ್ರಧಾನ ಕಾರ್ಯದರ್ಶಿ

## ಕ್ರಿಕೆಟ್ ಪಂದ್ಯಾವಳಿ -2021-22



ದೆಹಲಿ ಕರ್ನಾಟಕ ಸಂಘವು ಕ್ರಿಕೆಟ್ ಪಂದ್ಯಾವಳಿಯನ್ನು ಮಾರ್ಚ್ 26 ಮತ್ತು 27, 2022 ರಂದು ತಾಲ್ಕತೋರಾ ಮೈದಾನದಲ್ಲಿ ಆಯೋಜಿಸಿದೆ. ಸಂಘದ ಸದಸ್ಯರು ಮಾತ್ರ ಪಂದ್ಯಾವಳಿಯಲ್ಲಿ ಭಾಗವಹಿಸಬಹುದು. ತಂಡದ ಹೆಸರುಗಳನ್ನು ನೀಡಲು 22.03.2022 ಕೊನೆಯ ದಿನಾಂಕವಾಗಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್–9868393953 ಕ್ರೀಡಾ ಸಮಿತಿ ಅಧ್ಯಕ್ಷ–ಡಾ. ಎಂ.ಎಸ್. ಶಶಿಕುಮಾರ್–98116 89337 ಮತ್ತು ಕ್ರೀಡಾ ಸಮಿತಿ ಸಂಚಾಲಕಿ ಶ್ರೀಮತಿ ಮಾಲಿನಿ ಪ್ರಹ್ಲಾದ್–99102 69085

ಪ್ರಧಾನ ಕಾರ್ಯದರ್ಶಿ

# ಭಾರತೀಯ ಭಾಷೆಗಳು ಉಳಿಯಬೇಕಾದರೆ ದೇಶಕ್ಕೆ ಒಂದು ಪ್ರಬುದ್ಧ ಹಾಗೂ ಸಮರ್ಪಕ ಭಾಷಾ ನೀತಿ ಬೇಕು-ಡಾ. ಪುರುಷೋತ್ತಮ ಬಿಳಿಮಲೆ



"ಅಂತರರಾಷ್ಟ್ರೀಯ ಮಾತೃಭಾಷಾ" ದಿನದ ಅಂಗವಾಗಿ ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಭವನದಲ್ಲಿ ದಿನಾಂಕ 21.02.2022 ರಂದು ನಡೆದ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಹಿರಿಯ ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ ದೇಶದಲ್ಲಿರುವ ಎಲ್ಲ ಮಾತೃಭಾಷೆಗಳು ಬೆಳೆದು, ಉಳಿಯಬೇಕಾದರೆ ದೇಶಕ್ಕೆ ಒಂದು ಪ್ರಬುದ್ಧವಾದಂತಹ, ಸಮರ್ಪಕವಾದಂತಹ ರಾಷ್ಟ್ರೀಯ ಭಾಷಾ ನೀತಿ ಬೇಕಾಗಿದೆ ಎಂದರು.

ದೊಡ್ಡ ದೊಡ್ಡ ಭಾಷೆಗಳು ಬೃಹತ್ ಯಂತ್ರಗಳ ಹಾಗೆ ರಾಜಕೀಯ ಶಕ್ತಿ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದಾಗಿ ಬೃಹದಾಕಾರವಾಗಿ ಬೆಳೆಯುತ್ತಿವೆ. ಆದರೆ ಚಿಕ್ಕ ಚಿಕ್ಕ ಭಾಷೆಗಳು ಮಾತ್ರ ಈ ಮಟ್ಟದಲ್ಲಿ ಬೆಳೆಯುತ್ತಿಲ್ಲ ಹಾಗೂ ಈ ಭಾಷೆಗಳು ನಾಶವಾಗಿ ಹೋಗಬಾರದೆಂಬ ಕಳಕಳಿ ವ್ಯಕ್ತಪಡಿಸಿದರು.ಆಧುನಿಕ ಜೀವನ ಶೈಲಿಯ ಬದಲಾವಣೆಯಿಂದಾಗಿ ಮಾತೃ ಭಾಷೆ ಮರೀಚಿಕೆಯಾಗುತ್ತಿದೆ. ನಾವು ಮಾತನಾಡುವ ಭಾಷೆಯನ್ನು ನಮ್ಮ ಮಕ್ಕಳಿಗೂ ಕಲಿಸುವ ಅಗತ್ಯವಿದೆ. ಕೆಲವು ಚಿಕ್ಕಪುಟ್ಟ ಭಾಷೆಗಳು ಕೂಡ ಬೆಳವಣಿಗೆಯಾಗುವುದಕ್ಕೆ ಕಾರಣ ಆ ಭಾಷೆಯಲ್ಲಿ ಇರುವಂತಹ ರಾಜಕೀಯ ಪ್ರಾಬಲ್ಯಗಳಾಗಿವೆ. ಕೇವಲ ಒಂದು ಭಾಷೆಗೆ ಸೀಮಿತವಾಗಿರದೆ ಎಲ್ಲ ಮಾತೃಭಾಷೆಗಳು ಕೂಡ ಸಮಾನಾಂತರವಾಗಿ ಬೆಳವಣಿಗೆಯಾಗಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಗೌರವ ಉಪಸ್ಥಿತಿ ವಹಿಸಿದ್ದ ಜೆ.ಎನ್.ಯು.ನ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ವಿಶ್ವನಾಥ ಅವರು ಮಾತನಾಡಿ ಮೊಬೈಲ್ ಎಂಬ ಆಧುನಿಕ ತಂತ್ರಜ್ಞಾನ ಬೆಳೆದ ಮೇಲೆ ನಾವು ಆರೋಗ್ಯ ಮತ್ತು ನೆಮ್ಮದಿಯನ್ನು ಬಿಟ್ಟು ಎಲ್ಲವನ್ನೂ ಸಂಪಾದಿಸಿದ್ದೇವೆ. ಈಗಿನ ಕಾಲದಲ್ಲಿ ಪರಿವಾರದ ನಡುವೆ ಹಾಗೂ ಸಂಬಂಧಗಳ ನಡುವೆ ಊಟ ಆಯ್ತಾ? ತಿಂಡಿ ಆಯ್ತಾ? ಮಲಗಿದಿಯಾ? ನಿದ್ರೆ ಬಂತಾ? ಎನ್ನುವ ಪ್ರತಿಯೊಂದು ಮಾತುಗಳೂ ಕೂಡ ಮೊಬೈಲ್ ಸಂಭಾಷಣೆಯ ಮೂಲಕ ನಡೆಯುತ್ತಿವೆ. ಆದರೆ ಹಿಂದಿನ ಕಾಲದಲ್ಲಿ ನಮ್ಮ ಜಾನಪದ ಸೊಗಡಿನಲ್ಲಿ ವಯಸ್ಸಿಗೆ ಬಂದಂತಹ ಹುಡುಗ ಹುಡುಗಿಯರ ಪ್ರೇಮ ಬೆಳೆಯುತ್ತಿದ್ದದ್ದು ಊರಾಚೆಯ ಕಟ್ಟೆಯಲ್ಲಿ "ನೀರಿಗಂತ ನಾನು ಬರ್ತೀನಿ, ಏರಿಗಂತ ನೀನು ಬಾ ಕುಂತು ನಿಂತು ಮಾತನಾಡೋಣ." ಎನ್ನುವ ಪ್ರೇಮದ ಆಹ್ವಾನಗಳು ಕವನದ ಮೂಲಕ, ಜಾನಪದ ಸಂಗೀತದ ಮೂಲಕ ಹೊರಹೊಮ್ಮುತ್ತಿದ್ದವು. ಇದನ್ನು ನಮ್ಮ ಮಾತೃಭಾಷೆ ಕಲಿಸಿಕೊಡುತ್ತದೆ. ನಮ್ಮ ಮಾತೃಭಾಷೆಯಲ್ಲಿ ಪ್ರೇಮ, ಸಂಗೀತ, ಸಾಹಿತ್ಯ, ಜಾನಪದ ಮತ್ತು ಸಂಬಂಧಗಳಿಗಿರುವಂತಹ ಜೀವನದ ಪ್ರತಿಯೊಂದು ಹಂತವೂ ಕೂಡ ಕಂಡು ಬರುತ್ತದೆ. ಆ ಕಾಲದಲ್ಲಿ ನಡೆಯುತ್ತಿದ್ದ ಹಲವಾರು ಮೌಢ್ಯ, ಅನ್ಯಾಯ ಹಾಗೂ ಶೋಷಣೆಗಳನ್ನು ತೊಡೆದು ಹಾಕಲು ಕೀರ್ತನೆಕಾರರು, ದಾಸರು, ವಚನಕಾರರು ತಮ್ಮ ಕೀರ್ತನೆಗಳು, ಆಡು ಭಾಷೆಯ ಕನ್ನಡ ಪದಗಳು, ವಚನ ಮತ್ತು ಜಾನಪದ ಸಾಹಿತ್ಯದ ಮೂಲಕ ಹಲವಾರು ಸಂದೇಶಗಳನ್ನು ಕೊಟ್ಟು ಸಮಾಜದ ಸಮಾನತೆಗಾಗಿ ಅಂಕು ಡೊಂಕುಗಳನ್ನು ತಿದ್ದಿ ಹೋಗಿದ್ದಾರೆ. ಇದನ್ನು ನಾವು ಬೆಳೆಸಿಕೊಂಡು ಹೋಗಬೇಕಾಗಿದೆ ಎಂದು ಹಲವಾರು ದೃಷ್ಟಾಂತ ಕಥೆಗಳು, ವಚನಗಳು ಮತ್ತು ಒಗಟುಗಳನ್ನು ಹೇಳುವ ಮೂಲಕ ಬಹಳ ಸ್ವಾರಸ್ಯಕರವಾಗಿ, ಮಾರ್ಮಿಕವಾಗಿ ತಮ್ಮ ವಿಚಾರಗಳನ್ನು ಮಂಡಿಸಿದರು.

ನವದೆಹಲಿಯ ಗುರುಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಪರೀಕ್ಷಾ ನಿಯಂತ್ರಕರಾದ ಡಾ. ಎಸ್.ಎಲ್. ಭಂಡಾರ್‌ಕರ್ ಅವರು ಮಾತನಾಡಿ ನಾವು ಬೇರೆ ಬೇರೆ ವಿಷಯಗಳನ್ನು ಓದಿದ್ದೇವೆಯಾದರೂ ನಮ್ಮ ಮಾತೃಭಾಷೆ ಕನ್ನಡ ನಮಗೆ ವಿಭಿನ್ನ ವಿಷಯಗಳನ್ನು ಅರ್ಥೈಸಿದಷ್ಟು ಇಂಗ್ಲಿಷ್ ಯಾವತ್ತೂ ಅರ್ಥೈಸಲಿಲ್ಲ. ನಾವು ಬೇರೆ ಭಾಷೆಯ ಯಾವುದೇ ವಿಷಯಗಳನ್ನು ಅರ್ಥ ಮಾಡಿಕೊಳ್ಳಲು ಆ ಭಾಷೆಯ ಸಾರಾಂಶವನ್ನು ಮೊದಲು ನಮ್ಮ ತಾಯ್ನುಡಿಗೆ ಮನಸ್ಸಿನಲ್ಲಿಯೇ ಭಾಷಾಂತರ ಮಾಡಿಕೊಂಡು ತಿಳಿದುಕೊಳ್ಳುತ್ತೇವೆ. ನಮಗೆ ಯಾವುದಾದರು ವಿಷಯದ ಬಗ್ಗೆ ಹಿಂದಿ ಭಾಷೆಯಲ್ಲಿ ಹೇಳಿದರೆ ಅದು ಅರ್ಥೈಸಲಾಗದೇ ಇರಬಹುದು ತಾಯ್ನುಡಿ ಭಾಷೆಯಲ್ಲಿ ಹೇಳಿದರೆ ತಕ್ಷಣ ತಿಳಿದುಕೊಳ್ಳುತ್ತೇವೆ. ದೇಶದ ಶಿಕ್ಷಣದ ಬೆಳವಣಿಗೆಗೆ ಸಹಕರಿಸುವ ಉನ್ನತ ಆಡಳಿತ ಸಂಸ್ಥೆಗಳು ಎಂಜಿನಿಯರಿಂಗ್ ಮತ್ತು ವೈದ್ಯಕೀಯ ವೃತ್ತಿಪರ ಶಿಕ್ಷಣವನ್ನು ದೇಶದ ಆಯಾ ರಾಜ್ಯಗಳ ತಾಯಿ ಭಾಷೆಯಲ್ಲಿಯೇ ಮಕ್ಕಳಿಗೆ ಕಲಿಸಿದಾಗ ಹೆಚ್ಚು ಅರ್ಥವಾಗುತ್ತದೆ ಎನ್ನುವ ಪ್ರಯತ್ನದಲ್ಲಿ ಸಾಗಿವೆ. ಕನ್ನಡ ಮತ್ತು ಮರಾಠಿ ಭಾಷೆ ಸಾಹಿತ್ಯಕ ಸಂಬಂಧ ಕುರಿತು ಈ ಎರಡು ಭಾಷೆಗಳು ಹಲವು ಸಾಮ್ಯತೆ ಹೊಂದಿವೆ. ಕನ್ನಡ ಅತಿ ಪ್ರಾಚೀನ ಭಾಷೆಯಾಗಿದ್ದು, ಮರಾಠಿ ಭಾಷೆ ಹನ್ನೆರಡನೇಯ ಶತಮಾನದಿಂದೀಚೆಗೆ ಪ್ರಚಲಿತದಲ್ಲಿದೆ. ಕನ್ನಡ ಭಾಷೆಯ ಇತಿಹಾಸ, ಸಾಹಿತ್ಯ, ಛಂದಸ್ಸು ಅಲಂಕಾರ ಹೀಗೆ ಹಲವಾರು ರೀತಿಯಲ್ಲಿ ಪ್ರಾಚೀನತೆ ಪಡೆದು ತನ್ನದೇಯಾದ ವೈಭವದ ಮೂಲಕ ಇವತ್ತಿನವರೆಗೂ ಬೃಹತ್ ಭಾಷೆಯಾಗಿ ಸಾಗಿಬಂದಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ ಅವರು ಮಾತನಾಡಿ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡ ಭಾಷೆಯನ್ನು ಬೆಳೆಸುವುದಕ್ಕಾಗಿ ನವದೆಹಲಿಯ ಜೆ.ಎನ್. ಯು. ನಲ್ಲಿ ಕನ್ನಡ ಅಧ್ಯಯನ ಪೀಠವನ್ನು ಪ್ರಾರಂಭಿಸಲು ದೆಹಲಿ ಕರ್ನಾಟಕ ಸಂಘದ ಕೊಡುಗೆ ಮಹತ್ತರವಾದದ್ದು. ಇವತ್ತಿನ ಕಾರ್ಯಕ್ರಮದಲ್ಲೆ ಉಪಸ್ಥಿತರಿರುವ ಜೆ.ಎನ್. ಯು. ಕನ್ನಡ ಅಧ್ಯಯನ ಪೀಠದ ಪ್ರಥಮ ಮುಖ್ಯಸ್ಥರಾಗಿದ್ದ ಡಾ. ಪುರುಷೋತ್ತಮ ಬಿಳಿಮಲೆ ಹಾಗು ಪ್ರಸ್ತುತ ಮುಖ್ಯಸ್ಥರಾದ

ಡಾ. ವಿಶ್ವನಾಥ ಅವರು ನಮ್ಮ ಮಾತೃ ಭಾಷೆ ಕನ್ನಡವನ್ನು ಬೆಳೆಸಲು ಸಾಕಷ್ಟು ಶ್ರಮಿಸುತ್ತಿದ್ದಾರೆ. ಈ ದಿನ ಅನೇಕರು ಮಾತೃ ಭಾಷೆ ಬಗ್ಗೆ ಮಾತನಾಡಿರುವುದು ಸಂತೋಷದ ವಿಚಾರ. ಮುಂದಿನ ದಿನಗಳಲ್ಲಿ ಸಂಘದ ವತಿಯಿಂದ ಇನ್ನೂ ದೊಡ್ಡಮಟ್ಟದ ವಿಚಾರ ಗೋಷ್ಠಿಯನ್ನು ಹಮ್ಮಿಕೊಳ್ಳುವುದಾಗಿ ಹೇಳಿದರು. ಕರ್ನಾಟಕದ 6.5 ಕೋಟಿ ಜನರಲ್ಲಿ 35 ಲಕ್ಷ ಕನ್ನಡಿಗರು ಕೊಂಕಣಿ ಮಾತನಾಡುತ್ತಾರೆ, ಆರು ಲಕ್ಷ ಜನ ಕನ್ನಡಿಗರು ಅರೆಭಾಷೆ ಮಾತನಾಡುತ್ತಾರೆಯೆಂದರೆ ಅದು ನಮ್ಮ ಭಾಷೆಯಲ್ಲಿರುವ ಸೌಂದರ್ಯತೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಆರ್. ರೇಣುಕುಮಾರ್ ಅವರು ಅತಿಥಿಗಳನ್ನು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿ ಮಾತೃಭಾಷೆಯನ್ನು ಬೆಳೆಸುವುದಕ್ಕಾಗಿಯೇ ಮತ್ತು ಭಾಷೆಯ ಪರವಾಗಿ ದೆಹಲಿಯಲ್ಲಿರುವ ಎರಡೂ ಕನ್ನಡ ಸಂಸ್ಥೆಗಳಾದ ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಾಲೆಗಳು ಸತತವಾಗಿ ಹೋರಾಟ ಮಾಡುತ್ತಾ ಬರುತ್ತಿವೆ. ಮುಂದೆಯೂ ಸಹ ಈ ಪ್ರಯತ್ನಕ್ಕೆ ದೆಹಲಿ ಕನ್ನಡಿಗರೆಲ್ಲರ ಸಹಕಾರ, ಪ್ರೀತಿ ವಿಶ್ವಾಸ ಇರಲೆಂದು ವಿನಂತಿಸಿಕೊಂಡರು.

ಕನ್ನಡ ಮಾತೃ ಭಾಷೆ ಹಾಗೂ ಸೋದರ ಭಾಷಾ ಸಂಬಂಧಗಳ ಕುರಿತಾಗಿ ಆಯಾ ಭಾಷೆಯನ್ನು ಮಾತನಾಡುವ ದೆಹಲಿ ಕನ್ನಡಿಗರು ತಮ್ಮ ತಮ್ಮ ಮಾತೃಭಾಷೆಯ ಬಗ್ಗೆ ಆಸಕ್ತಿದಾಯಕ ವಿಷಯಗಳನ್ನು ಹಂಚಿಕೊಂಡರು.

ಶ್ರೀಮತಿ ನಂದಿನಿ ಮಲ್ಯ ಅವರು ಕೊಂಕಣಿ, ಶ್ರೀಮತಿ ನಿರ್ಮಲಾ ನಾಗೇಶ್ ಅವರು ತುಳು, ಶ್ರೀ ಕೆ.ಟಿ. ಗಣೇಶ್ ಅವರು ಕೊಡವ, ಶ್ರೀ ಚಂದ್ರಶೇಖರ್ ಜೋಳದರಾಶಿ–ತೆಲುಗು, ಶ್ರೀ ಮೊಹಮ್ಮದ್ ಇಸ್ಮಾಯಿಲ್ ಬ್ಯಾರಿ ಭಾಷೆ, ಶ್ರೀಮತಿ ಸುನಿತಾ ನಾಯಕ್ ಅವರು ಮರಾಠಿ, ಶ್ರೀಮತಿ ಸರೋಜಾ ಮಾಧವ ಅವರು ಅರೆಭಾಷೆ, ಶ್ರೀಮತಿ ಮೈಥಿಲಿ ಅಟ್ಟಾವರ್ ಅವರು ತಮಿಳು ಮತ್ತು ಶ್ರೀಮತಿ ರಾಜೇಶ್ವರಿ ಭಟ್ ಅವರು ಮಲಯಾಳಿ ಭಾಷೆಗಳ ಕುರಿತು ಮಾತನಾಡಿದರು.

ನೂರಾರು ಪ್ರೇಕ್ಷಕರ ಸಮ್ಮುಖದಲ್ಲಿ ಜರುಗಿದ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯೆ ಶ್ರೀಮತಿ ಸವಿತಾ ನೆಲ್ಲಿಯವರು ಸುಂದರವಾಗಿ ನಿರೂಪಿಸಿದರು. ಕು. ಸುದಿತಿ ಅಂಬಳೆ ಕನ್ನಡ ಗಾಯನ ಪ್ರಸ್ತುತಿಪಡಿಸಿದರು. ಸಮಿತಿಯ ಸದಸ್ಯೆ ಶ್ರೀಮತಿ ಮಾಲಿನಿ ಪ್ರಹ್ಲಾದ್ ಅವರು ಎಲ್ಲರನ್ನು ವಂದಿಸಿದರು. □

***ಅಭಿಮತ ವರದಿ***

# ದೆಹಲಿ ಕನ್ನಡ ಶಾಲೆಯಲ್ಲಿ 'ವಿಶ್ವ ತಾಯಿಭಾಷಾ ದಿನಾಚರಣೆ'

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಫೆಬ್ರವರಿ 21, 2022 ರಂದು ಆಯೋಜಿಸಿದ್ದ ವಿಶ್ವ ತಾಯಿ ಭಾಷಾ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಮಾತನಾಡುತ್ತ ಜೆ.ಎನ್.ಯು. ವಿಜ್ಞಾನ ನೀತಿ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕಿ ಡಾ. ರೀಟಾ ಸೋನಿ ಅವರು ಭಾಷೆ ನಮ್ಮ ಪರಂಪರೆ ಹಾಗು ಸಂಸ್ಕೃತಿಯ ಸಂಕೇತ. ಅದು ನಮ್ಮ ಗುರುತು, ಅಸ್ತಿತ್ವವೂ ಹೌದು ಎಂಬುದಾಗಿ ಅಭಿಪ್ರಾಯಪಟ್ಟರು. ಭಾಷಾ ಅಲ್ಪ ಸಂಖ್ಯಾತ ಶಿಕ್ಷಣ ಸಂಸ್ಥೆಯಲ್ಲಿ ಈ ರೀತಿಯ ಕಾರ್ಯಕ್ರಮಗಳಿಂದ ದೇಶದ ವಿವಿಧ ಭಾಷೆಗಳನ್ನು ಮುನ್ನೆಲೆಗೆ ತರುತ್ತಿರುವುದು ನಿಜಕ್ಕೂ ಅಭಿನಂದನೀಯ ಎಂದು ಪ್ರಶಂಸಿಸಿದರು.

ಸಾಧನೆಗೆ ಆತ್ಮವಿಶ್ವಾಸ ಬೇಕು. ಈ ಆತ್ಮವಿಶ್ವಾಸವನ್ನು ನೀಡುವುದೇ ಮಾತೃಭಾಷೆ. ಮಾತೃಭಾಷೆಯ ವಿಚಾರ ಬಂದಾಗ ನಾವೆಲ್ಲರೂ ಭಾವಜೀವಿಗಳಾಗುತ್ತೇವೆ. ಯುನೆಸ್ಕೊ ಪ್ರಕಾರ ನಮ್ಮ ದೇಶದಲ್ಲಿ 19,500 ಉಪಭಾಷೆಗಳಿವೆ. ಇದರಲ್ಲಿ 50% ಭಾಷೆಗಳು ಅವಸಾನದ ಅಂಚಿನಲ್ಲಿವೆ. ಓದಲು–ಬರೆಯಲು ಸಾಧ್ಯವಿರುವ ಒಟ್ಟು 448 ಭಾಷೆಗಳು ನಮ್ಮ ದೇಶದಲ್ಲಿವೆ. ವಿಶ್ವವಿದ್ಯಾಲಯದಲ್ಲಿ ಇಂದು ಹಲವಾರು ಭಾಷೆಗಳನ್ನು ಕಲಿಸಲಾಗುತ್ತಿದೆ. ಅದರ ಹೊರತಾಗಿಯೂ ಇನ್ನೆಷ್ಟೋ ಭಾಷೆಗಳು ಹೊರಗಿವೆ. ಇಂತಹ ಭಾಷೆಗಳನ್ನು ಉಳಿಸಿ ಬೆಳೆಸುವುದಕ್ಕಾಗಿಯೇ ಯುನೆಸ್ಕೊ ವಿಶ್ವ ತಾಯಿಭಾಷಾ ದಿನಾಚರಣೆಯನ್ನು ಆಚರಿಸುತ್ತಿದೆ. ಭಾಷೆ ನಮ್ಮ ಬದುಕು, ಗುರುತು, ಬೇರು, ಸಂಸ್ಕೃತಿ, ಪರಂಪರೆ, ಇತಿಹಾಸ. ಭಾಷೆ ಉಳಿದರೆ ನಮ್ಮ ಸಂಸ್ಕೃತಿಯು ಉಳಿಯುವುದು ಎಂದರು.

ಕಾರ್ಯಕ್ರಮದಲ್ಲಿ ಮಕ್ಕಳು ತಮ್ಮ ಮಾತೃಭಾಷೆಗಳಾದ ಕನ್ನಡದಲ್ಲಿ ಆಶಾ ಆರ್., ನಿಂಗವ್ವ, ಭಾಗ್ಯಶ್ರೀ, ಸಂಸ್ಕೃತದಲ್ಲಿ ಕೀರ್ತಿ ಶರ್ಮಾ, ಖ್ವಾಯಿಷ್, ತಮಿಳಿನಲ್ಲಿ ಗ್ನಾನಸ್ಮಿತಾ, ತೆಲುಗಿನಲ್ಲಿ ಹರ್ಷಿತ್, ಮರಾಠಿಯಲ್ಲಿ ನಂದಿತಾ ಉಭಾಳೆ, ಮಲಯಾಳಂನಲ್ಲಿ ಹರ್ಷಿತಾ ಉಭಾಳೆ, ಹಿಂದಿಯಲ್ಲಿ ದಿಶಾ, ಝುಹರಾ ಮಿರ್ಜಾ, ಉರ್ದುವಿನಲ್ಲಿ ಜೈನಬ್, ಮೊಹಮ್ಮದ್ ಸಾಹಿಲ್, ತುಳುನಲ್ಲಿ ಸನ್ವಿತ್ ಸುವರ್ಣ, ನೀಕ್ಷಿತ್ ಕೆ., ರಾಜಸ್ಥಾನಿಯಲ್ಲಿ ಮುಕೇಶ್ ಚೌಧರಿ, ಪಂಜಾಬಿಯಲ್ಲಿ ಕಿರಣ್ ಪ್ರೀತ್, ಒಡಿಯಾದಲ್ಲಿ ರಿಮ್‌ಜಿಮ್, ಕಾವ್ಯಾಂಶ್, ಗಡ್‌ವಾಲಿಯಲ್ಲಿ ಮೊಹಮ್ಮದ್ ಆದಿಲ್, ಭೂಮಿ ಜೋಷಿ ಮುಂತಾದ ವಿದ್ಯಾಥಿಗಳು ತಮ್ಮ ಮಾತೃಭಾಷೆಯ ಸೊಗಡನ್ನು ಬಹಳ ವೈಶಿಷ್ಟ್ಯಪೂರ್ಣವಾಗಿ ಪ್ರಸ್ತುತ ಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಭಾಷೆಗಳು ಕೇವಲ ಸಂಪರ್ಕ, ಜ್ಞಾನ ಸಾಧನಗಳಲ್ಲ. ಅವು ಬದುಕನ್ನು ಬೆಸೆಯುವಂತಹದ್ದು, ಭಾವಗಳನ್ನು ಅರಳಿಸುವಂತಹದ್ದು. ಮನುಷ್ಯ ಎಷ್ಟೇ ಎತ್ತರಕ್ಕೆ ಬೆಳೆದರೂ ಆತನ ಚಿಂತನೆಗಳು, ಯೋಚನೆಗಳು ಮಾತೃಭಾಷೆಯಲ್ಲಿಯೇ ಇರುತ್ತವೆ. ತನ್ನ ಭಾಷೆಯನ್ನು, ಭಾಷಿಕರನ್ನು ಪ್ರೀತಿಸಿ ಗೌರವಿಸುವುದರ ಜೊತೆಗೆ ಅನ್ಯ ಭಾಷೆಯನ್ನು, ಭಾಷಿಕರನ್ನು ಪ್ರೀತಿಸಿ, ಗೌರವಿಸುವುದರ ಮೂಲಕ ಭಾಷಾಭಿಮಾನವನ್ನು ವ್ಯಕ್ತಪಡಿಸಬೇಕೆಂದು ಹೇಳಿದರು.

ಕಾರ್ಯಕ್ರಮದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಎನ್. ಪಿ. ಚಂದ್ರಶೇಖರ್, ಗೌರವ ಖಜಾಂಚಿ ಟಿ. ಪಿ. ಬೆಳ್ಳಿಯಪ್ಪ ಶಾಲಾ ಶಿಕ್ಷಕ – ಶಿಕ್ಷಕೇತರ ವೃಂದ, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು. ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ವೈಷ್ಣವಿ, ಅಭಿಷೇಕ ಉಭಾಳೆ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮವನ್ನು ಫೇಸ್‌ಬುಕ್ ಲೈವ್‌ನಲ್ಲಿ ಪ್ರಸಾರಿಸಲಾಗಿತ್ತು. □

***ಅರವಿಂದ ಬಿಜೈ***



# ಕವಿ ನಾಡೋಜ ಕಣವಿ ಅವರಿಗೆ ಭಾವಪೂರ್ಣ ನುಡಿನಮನ



ಸಮನ್ವಯ ಕವಿ ಚೆನ್ನವೀರ ಕಣವಿ ಹಾಗೂ ಅವರ ಧರ್ಮಪತ್ನಿ ಶಾಂತಾದೇವಿ ಕಣವಿ ಅವರೊಂದಿಗೆ ಡಾ. ಬಿಳಿಮಲೆ ಅವರು



ಅಗಲಿದ ಕವಿ ಡಾ. ಚೆನ್ನವೀರ ಕಣವಿ ಅವರಿಗೆ ಸಂಘದಿಂದ ನುಡಿನಮನ

ಭಾವ ಜೀವಿ, ಸಮನ್ವಯ ಕವಿ ಎಂದೇ ಖ್ಯಾತಿ ಗಳಿಸಿದ್ದ ನಾಡೋಜ ಡಾ. ಚೆನ್ನವೀರ ಕಣವಿ ಅವರು ದಿನಾಂಕ 16.02.2022ರಂದು ನಿಧನ ಹೊಂದಿರುತ್ತಾರೆ. ದೆಹಲಿ ಕರ್ನಾಟಕ ಸಂಘವು ದಿನಾಂಕ 21.02.2022ರಂದು ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ನಾಡೋಜ ಕಣವಿ ಅವರು 2008ರ ಏಪ್ರಿಲ್ 13ರಂದು ದೆಹಲಿ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಾಗ ಅವರದೇ ದನಿಯಲ್ಲಿ ಅವರ ಕವನಗಳನ್ನು ಆಸ್ವಾದಿಸುವ ಸುಂದರ ಕ್ಷಣಗಳು ದೆಹಲಿ ಕನ್ನಡಿಗರಿಗೆ ಒದಗಿ ಬಂದಿದ್ದವು. ಆ ದಿನ ನಡೆಯಬೇಕಿದ್ದ ಕನ್ನಡ ಜಾತ್ರೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಬಂದಿದ್ದ ಚೆನ್ನವೀರ ಕಣವಿ ಅವರು 'ಕನ್ನಡ ಜಾತ್ರೆ' ರದ್ದಾದರೂ ಸಂಘದ ಕಾರ್ಯಕ್ರಮದಲ್ಲಿ ಕಾವ್ಯದ ಹೊನಲನ್ನು ಹನಿಸಿದರು. ಹೊಸ ಪೀಳಿಗೆಯ ಬಗೆಗೆ ವಿಶೇಷ ಕಾಳಜಿ ಹೊಂದಿದ್ದ ಅವರು ಕನ್ನಡ ಮಾಧ್ಯಮದ ಬಗ್ಗೆ ಒತ್ತು ನೀಡಿದ್ದರು.

ದೆಹಲಿ ಕರ್ನಾಟಕ ಸಂಘದ ಬೃಹತ್ ಸಾಂಸ್ಕೃತಿಕ ಸಮುಚ್ಚಯವನ್ನು ಪ್ರಶಂಸಿಸಿದ ಕಣವಿರವರ ಉಪಸ್ಥಿತಿ ಸ್ಮರಣೀಯವಾದುದು. ಅದೇ ಸಂದರ್ಭದಲ್ಲಿ ಕನ್ನಡದ ಖ್ಯಾತ ಕತೆಗಾರ್ತಿ ಹಾಗೂ ಚೆನ್ನವೀರ ಕಣವಿ ಅವರ ಧರ್ಮಪತ್ನಿ ಶಾಂತಾದೇವಿ ಕಣವಿ ಅವರು ಉಪಸ್ಥಿತರಿದ್ದರು.

ಸಾಹಿತ್ಯ ಕ್ಷೇತ್ರದಲ್ಲಿ ಇವರ ಗಣನೀಯ ಸೇವೆಯನ್ನು ಗುರುತಿಸಿದ ಹಂಪಿ ವಿಶ್ವವಿದ್ಯಾಲಯವು ಪ್ರತಿಷ್ಠಿತ 'ನಾಡೋಜ' ಪದವಿಯನ್ನು ನೀಡಿ ಗೌರವಿಸಿದರೆ, ಶ್ರೀಯುತರಿಗೆ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.

ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದಿವಂಗತ ಕಣವಿಯವರಿಗೆ ಗೌರವಪೂರ್ವಕ ನಮನಗಳು. ◻

***ಅಭಿಮತ ವರದಿ***

# ಚೆಂಬೆಳಕಿನ ಕವಿ ಚೆನ್ನವೀರ ಕಣವಿ (1928-2022)

ಸಾಹಿತ್ಯ, ಅದರಲ್ಲೂ ಕವಿತೆ ತಂದುಕೊಡಬಹುದಾದ ಉದಾತ್ತ ವ್ಯಕ್ತಿತ್ವಕ್ಕೆ ಚೆನ್ನವೀರ ಕಣವಿಯವರು ಒಳ್ಳೆಯ ಉದಾಹರಣೆಯಾಗಿದ್ದರು. ಅವರ ಮುಗ್ಧ ವ್ಯಕ್ತಿತ್ವದೊಳಗೊಂದು ಕವಿತೆ ಸದಾ ಸುಳಿದಾಡುತ್ತಿತ್ತು. ಕಾರಣಾಂತರಗಳಿಂದ ಸಿಟ್ಟು ಮಾಡಿಕೊಂಡು ಬೈದರೂ ಅದು ಪಾರಿಜಾತದ ಹೂವು ಅರಳಿದಂತಿರುತ್ತಿತ್ತು. ಅವರ ಹತ್ತಿರ ಕುಳಿತು ಹರಟಿದರೆ ನಮ್ಮ ಶಕ್ತಿ ಹೆಚ್ಚುತ್ತಿತ್ತು. ಕನ್ನಡ ವಿವಿಯ ಆರಂಭದ ದಿನಗಳಲ್ಲಿ ಸಿಂಡಿಕೇಟ್ ಸದಸ್ಯರಾಗಿದ್ದ ಅವರೊಡನೆ ಕಳೆದ ಮೂರು ವರ್ಷಗಳು (1992–95) ನನ್ನ ಬದುಕಿನ ಭಾಗ್ಯಗಳಲ್ಲೊಂದು.



1980ರ ದಶಕದಲ್ಲಿ ಕಣವಿಯರ 'ಚಿರಂತನ ದಾಹ' (ಅವರ ಆಯ್ದ ಕವಿತೆಗಳ ಸಂಕಲನ) ಪದವಿ ತರಗತಿಗಳಿಗೆ ಪಠ್ಯ ಪುಸ್ತಕವಾಗಿತ್ತು. ಪಾಠ ಮಾಡುತ್ತಾ ಮಾಡುತ್ತಾ ಅವರ ಹೆಚ್ಚಿನ ಕವಿತೆಗಳು ಬಾಯಿಪಾಠ ಆಗಿದ್ದವು. ಅವರು ಸಿಕ್ಕಾಗೆಲ್ಲ ಯಾವುದಾದರೂ ಕವಿತೆಯ ಒಂದೆರಡು ಸಾಲುಗಳನ್ನು ಹೇಳುತ್ತಿದ್ದೆ. ಅದನ್ನು ಮಕ್ಕಳ ಹಾಗೆ ಕೇಳಿಸಿಕೊಳ್ಳುತ್ತಿದ್ದರು, ಮತ್ತು ಆ ಕವಿತೆಯ ಹಿಂದಿನ ಕತೆ ಹೇಳುತ್ತಿದ್ದರು. 'ನವೋದಯ, ನವ್ಯ ಮತ್ತು ದಲಿತ' ಬಂಡಾಯ ಸಾಹಿತ್ಯ ಚಳುವಳಿಗಳ ಕಾಲದಲ್ಲಿ ಎಲ್ಲವನ್ನೂ ನೋಡುತ್ತಾ, ಅತ್ಯುತ್ತಮವಾದದ್ದನ್ನು ಕೊಂಡಾಡುತ್ತಾ, ಆದರೆ ತನ್ನ ಹಾದಿ ಬಿಡದೆ ಮುಂದೆ ಸಾಗಿದ ಕಣವಿಯವರು ತನ್ನದೇ ಆದ ಕಾವ್ಯ ಮಾರ್ಗವನ್ನು ಕಂಡುಕೊಂಡರು. 16 ಕವನ ಸಂಕಲನಗಳನ್ನು ಪ್ರಕಟಿಸಿದರು. ಅವರ ವಿಮರ್ಶೆಯೂ ಕೂಡಾ ಕಾವ್ಯದ ಹಾದಿಯನ್ನೇ ಹಿಡಿದಿತ್ತು. ಅದನ್ನು 'ಸಮನ್ವಯ ಮಾರ್ಗ' ಎಂದು ವಿಮರ್ಶಕರು ಕರೆದದ್ದುಂಟು, ಆದರೆ ಕಣವಿಯವರಿಗೆ ಅದು ಸಮ್ಮತವಾಗಿರಲಿಲ್ಲ. 'ನಾನು ಕವಿ ಅಷ್ಟೇ' ಎಂದು ಹೇಳುತ್ತಾ ಅವರು ನಕ್ಕು ಬಿಡುತ್ತಿದ್ದರು.

ಕಾವ್ಯಾಕ್ಷಿ (1949), ಭಾವಜೀವಿ (1950), ಆಕಾಶಬುಟ್ಟಿ (1953), ಮಧುಚಂದ್ರ (1954), ದೀಪಧಾರಿ (1956), ಮಣ್ಣಿನ ಮೆರವಣಿಗೆ (1960), ಎರಡು ದಡ, ನೆಲಮುಗಿಲು (1965), ನಗರದಲ್ಲಿ ನೆರಳು (1974), ಜೀವಧ್ವನಿ (1980), ಕಾರ್ತಿಕಮೋಡ (1986), ಜೀನಿಯಾ (1989), ಹೊಂಬೆಳಕು, ಶಿಶಿರದಲ್ಲಿ ಬಂದ ಸ್ನೇಹಿತ (1994), ಹಕ್ಕಿಪುಚ್ಚ (1985), ಹೂವು ಹೊರಳುವವು ಹೂವಿನ ಕಡೆಗೆ ಇವರ ಮುಖ್ಯ ಕವಿತಾ ಸಂಕಲನಗಳು. ಸಾಹಿತ್ಯ ಚಿಂತನ, ಕಾವ್ಯಾನುಸಂಧಾನ, ಸಮಾಹಿತ, ಸಮತೋಲನ, ಮಧುರಚೆನ್ನ, ಶುಭನುಡಿಯೆ ಹಕ್ಕಿ ಮುಖ್ಯ ವಿಮರ್ಶಾ ಕೃತಿಗಳು.

ಸುಮಧುರವಾದ ಸಾನೆಟ್ ಅಥವಾ ಸುನೀತಗಳ ವ್ಯಾಪಕ ಬಳಕೆ, ಬೆಳಕಿಗಾಗಿ ನಿರಂತರ ತುಡಿತ, ಮೃದು ಮಾತಿನಲ್ಲಿ ಬರೆಯುವುದು–ಕಣವಿಯರ ಕಾವ್ಯ ವಿಶೇಷತೆಗಳಲ್ಲಿ ಕೆಲವು. ಕಳೆದ ವರ್ಷದ ಕೊರೋನಾದಲ್ಲಿ ಸ್ವಲ್ಪ ಕಷ್ಟ ಆಗಿತ್ತು ಅವರಿಗೆ. ಈಗ ಆ ತುಂಬಿದ ಜೀವ ಕೊನೆಯ ಹಾಡ ಹೇಳಿ ಹೊರಟು ಬಿಟ್ಟಿದೆ. ಧಾರವಾಡದ ಇನ್ನೊಂದು ಬೆಳಕು ನಂದಿತು.

**'ಮಾಡಿ ಉಂಡಿದ್ದೇವೆ ನಮ ನಮಗೆ ಸೇರಿದ ಅಡಿಗೆ**
**ಇರಬಹುದು ಇದರಲ್ಲಿ ಕೆಲ ಭಾಗ ಜೀವನ ಸತ್ವ ಕಡಿಮೆ**
**ಇದ್ದ ಶಕ್ತಿಯಲ್ಲಿ ತುಸು ದೂರ ನಡೆದಿದ್ದೇವೆ**
**ರೂಢಿಯಾಗಿದೆ ಒಬ್ಬೊಬ್ಬರಿಗೂ ಒಂದೊಂದು ಬಗೆಯ ನಡಿಗೆ**
**ಮುಖ್ಯ ಬೇಕಾದದ್ದು ಜೀವಂತ ಗತಿ, ಹೊಸ ನೆತ್ತರಿನ ಕೊಡುಗೆ'**

**ನಿಮ್ಮೊಡನೆ ಒಡನಾಡಿದ ನಾವು ಭಾಗ್ಯವಂತರು ಸಾರ್** ◻

***ಡಾ. ಪುರುಷೋತ್ತಮ ಬಿಳಿಮಲೆ***

# ಮನುಷ್ಯನನ್ನು ಪರಿಪೂರ್ಣ ಸಾಮಾಜೀಕರಣಗೊಳಿಸಬಲ್ಲ ಶಕ್ತಿ ರಂಗಭೂಮಿಗಿದೆ
## -ಕನ್ನಡ ಭಾರತಿ ರಂಗ ಪ್ರಶಸ್ತಿ ಪುರಸ್ಕೃತ ಸಾಣೆಹಳ್ಳಿ ಶ್ರೀಗಳು

**ದೆಹಲಿ ಕನ್ನಡಿಗರ ಮಾತೃ ಸಂಸ್ಥೆ ದೆಹಲಿ ಕರ್ನಾಟಕ ಸಂಘ ಪ್ರತಿ ವರ್ಷ ಮೂರು ಪ್ರಶಸ್ತಿಗಳನ್ನು ಕೊಡುತ್ತಾ ಬಂದಿದೆ. ಸಾಣೆಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರು ರಂಗಭೂಮಿಯಲ್ಲಿ ಮಾಡಿರುವ ಅಸಾಧಾರಣ ಸಾಧನೆಯನ್ನು ಗುರುತಿಸಿ ಈ ವರ್ಷ ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ನೀಡಿ ಪುರಸ್ಕರಿಸುವ ಮೂಲಕ ಸಂಘದ ಗೌರವವನ್ನೂ ಹೆಚ್ಚಿಸಿಕೊಂಡಿದೆ. ಪ್ರಶಸ್ತಿ ಪ್ರಧಾನ ಸಂದರ್ಭಕ್ಕೆ ಆಗಮಿಸಿರುವ ಪೂಜ್ಯ ಸ್ವಾಮೀಜಿಯವರಿಗೆ ದೆಹಲಿ ಕನ್ನಡಿಗರ ಪರವಾಗಿ ಭಕ್ತಿ ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತಾ ಸಂಘದ ಮುಖವಾಣಿ ಅಭಿಮತ ಪತ್ರಿಕೆಗಾಗಿ ನಡೆಸಿದ ಸಂವಾದದ ವರದಿ ಇಲ್ಲಿದೆ.**




**ಅಭಿಮತ :** ಮೊದಲನೆಯದಾಗಿ ಈ ವರ್ಷ ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ಸ್ವೀಕರಿಸುವ ಈ ಸಂದರ್ಭದಲ್ಲಿ ನಿಮ್ಮ ಪ್ರತಿಕ್ರಿಯೆ ಏನು?

**ಸಾಣೇಹಳ್ಳಿ ಶ್ರೀಗಳು :** ನಮಗೆ ಯಾವುದೇ ಪ್ರಶಸ್ತಿಗಳ ಬಗ್ಗೆ ಆಸಕ್ತಿಯೂ ಇಲ್ಲ, ನಿರಾಸಕ್ತಿಯೂ ಇಲ್ಲ, ಯಾಕೆಂತಂದ್ರೆ ಕೆಲವೊಮ್ಮೆ ಅತ್ಯಂತ ಗೌರವ ಪ್ರೀತಿಯಿಂದ ಕೊಟ್ಟಾಗ ಅದನ್ನು ತಿರಸ್ಕಾರ ಮಾಡೋಕ್ಕೆ ಆಗಲ್ಲ. ಇನ್ನು ಕೆಲವು ಸಂದರ್ಭದಲ್ಲಿ ಯಾರದೋ ಒತ್ತಡಕ್ಕೆ, ಇನ್ನೇನೋ ಕಾರಣಕ್ಕೆ ಕೊಡತಕ್ಕಂತಹ ಪ್ರಶಸ್ತಿಗಳಿಂದ ಮುಜುಗರ ಆಗುತ್ತೆ. ಈ ಹಿಂದೆನೇ ನಮ್ಮ ಹಿರಿಯ ಗುರುಗಳು ಶ್ರೀ ಶಿವಕುಮಾರ ಶಿವಾಚಾರ್ಯ ಸ್ವಾಮೀಜಿಯವರು ಹೇಳ್ತಾ ಇದ್ರು, 'ಸ್ವಾಮಿ'ತನ ಅನ್ನುವಂತಹದೇ ಒಂದು ದೊಡ್ಡ ಪ್ರಶಸ್ತಿ. ಅದಕ್ಕಿಂತ ಮಿಗಿಲಾದ ಪ್ರಶಸ್ತಿಯನ್ನು ನೀವು ಬಯಸುವಂತಹದ್ದು ಸರಿಯಲ್ಲ. ಅವರಿಗೆ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿಯನ್ನು ಕೊಡಿಸಬೇಕೂಂತ ನಮ್ಮ ಅನೇಕ ಜನ ಸಾಹಿತಿಗಳು, ರಾಜಕಾರಣಿಗಳು ಪ್ರಯತ್ನ ಮಾಡಿದ್ದೂ ಉಂಟು. ಆ ಸಂದರ್ಭದಲ್ಲಿ ಅವರು ಹೇಳಿದ್ರು ನಾವು ಡಾಕ್ಟರ್ ಆಗುವುದಕ್ಕಿಂತ ಒಬ್ಬ 'ಆಯಾ' (ಶೂಶ್ರುಕಿ) ಆಗುವುದಕ್ಕೆ ಇಷ್ಟಪಡುತ್ತೇವೆ ಅಂತ. ಯಾಕಂದ್ರೆ ಆ ತಾಯಿ ಡಾಕ್ಟರ್‌ಗಿಂತ ಚೆನ್ನಾಗಿ ಶುಶ್ರೂಷೆಯನ್ನು ನೀಡುತ್ತಾಳೆ ಅಂತ. ಹಾಗಾಗಿ ಅವರು ತಮ್ಮ ಸೇವಾವಧಿಯಲ್ಲಿ ಯಾವ ಪ್ರಶಸ್ತಿಗೂ ಕೂಡಾ ಪ್ರಯತ್ನ ಪಟ್ಟವರಲ್ಲ, ಅದಕ್ಕಾಗಿ ಪ್ರಯತ್ನ ಪಟ್ಟವರನ್ನ ತಡೆದಂತಹವರು. ಆದರೆ ಅದೇನು ಕಾರಣವೋ ಗೊತ್ತಿಲ್ಲ, ನಾವು ಬೇಡ ಅನ್ನುವಂತಹ ಪ್ರಶಸ್ತಿಗಳು ತಾನಾಗಿಯೇ ಬೆನ್ನತ್ತಿ ಬರುತ್ತಾ ಇವೆ. ಮೊದಲಿಗೆ ಪ್ರಾರಂಭವಾದದ್ದು ಸಿ.ಜಿ.ಕೆ. ಇದ್ದಾಗ ರಂಗಭೂಮಿಯ ಕಾರ್ಯಗಳಿಗಾಗಿ ಕರ್ನಾಟಕ ನಾಟಕ ಅಕಾಡೆಮಿಯವರು ಒಂದು ಪ್ರಶಸ್ತಿಯನ್ನು ನೀಡಿದ್ರು. ಅದೇ ಮೊದಲನೆಯದು. ಅದರಲ್ಲೂ ಸ್ವಾಮಿಗಳವರಿಗೆ ನಾಟಕ ಅಕಾಡೆಮಿ ಗೌರವ ಪ್ರಶಸ್ತಿಯನ್ನು ಕೊಟ್ಟಿದ್ದು ಅನೇಕರಿಗೆ ಹುಬ್ಬು ಏರಿಸುವಂತೆ ಮಾಡಿಸಿರಬಹುದು. ನಂತರ ರಾಜ್ಯೋತ್ಸವ ಪ್ರಶಸ್ತಿ, ಕುವೆಂಪು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪ್ರಶಸ್ತಿ ಹೀಗೆ ಇನ್ನೂ ಅನೇಕ ಪ್ರಶಸ್ತಿಗಳು ಬಂದಿದ್ರೂ ಕೂಡಾ ಆ ಪ್ರಶಸ್ತಿಯಿಂದ ಬಹಳ ಎತ್ತರಕ್ಕೂ ಹೋಗಿಲ್ಲ, ಕೆಳಗೂ ಇಳಿದಿಲ್ಲ ಎಲ್ಲಿದ್ದೀವೋ ಅಲ್ಲೇ ಇದ್ದೇವೆ. ಈಗಲೂ ಕೂಡಾ ದೆಹಲಿ ಕರ್ನಾಟಕ ಸಂಘದ ಪ್ರಶಸ್ತಿಯ ಬಗ್ಗೆ ಕಪ್ಪಣ್ಣ ಅವರು ಫೋನು ಮಾಡಿ ಹೇಳಿದಾಗ ಅವರಿಗೆ ನಾವು ಹೇಳಿದ್ದು ಕಪ್ಪಣ್ಣನವರೇ, ಬಹಳ ಯೋಗ್ಯ ವ್ಯಕ್ತಿಗಳು ಕರ್ನಾಟಕದಲ್ಲಿ ತುಂಬಾ ಜನ ಇದ್ದಾರೆ. ಅಂತವರಿಗೆ ಕೊಡುವುದು ಒಳ್ಳೆಯದು ಎಂದು ಅವರಿಗೆ ಒತ್ತಾಯ ಮಾಡಿದೆವು. ಅವಾಗ ಅವರು ಸ್ವಾಮೀಜಿ ಇದು ನನ್ನದಲ್ಲ, ನಾನು ನಿಮಗೆ ಸುಮ್ಮನೆ ಮಧ್ಯಸ್ಥನಾಗಿ ಯಾರು ಪ್ರಶಸ್ತಿಯನ್ನು ಕೊಡಬೇಕೂಂತ ತೀರ್ಮಾನ ಮಾಡಿದ್ದರೋ ಅವರ ಅಭಿಪ್ರಾಯಗಳನ್ನು ನಿಮ್ಮ ಗಮನಕ್ಕೆ ತಂದಿದ್ದೇನೆ. ಅದರಲ್ಲಿ ನಾನು ಒಬ್ಬ ಸದಸ್ಯ ಅಷ್ಟೆ. ನಮ್ಮ ನಾಗಾಭರಣ, ಶಿವಪ್ರಕಾಶ್ ಅವರು ತೀರ್ಮಾನ ಮಾಡಿದ್ದಾರೆ. ತಾವು ಅವರ ತೀರ್ಮಾನವನ್ನು ಗೌರವಿಸಬೇಕೂಂತ ನಾನು ಒತ್ತಾಯ ಮಾಡ್ತೀನಿ ಅಂದ್ರು. ಆದರೆ ಕಪ್ಪಣ್ಣ ಅವರ ಬಗ್ಗೆ ನನಗೆ ಬಹಳ ಗೌರವ, ಪ್ರೀತಿ ಇರುವುದರಿಂದ ತಿರಸ್ಕಾರ ಮಾಡಲಾಗದೇ ಈ ಪ್ರಶಸ್ತಿಯನ್ನು ಒಪ್ಪಿಕೊಂಡಿದ್ದೇವೆ.

**ಅಭಿಮತ:** ಸ್ವಾಮೀಜಿ, ನಿಮಗೆ ರಂಗಭೂಮಿಯಲ್ಲಿ ನಿಮ್ಮ ಆಸಕ್ತಿ ಮೂಡುವುದಕ್ಕೆ ಪ್ರೇರಣೆ ಮತ್ತು ಕಾರಣ ಏನು ?

**ಶ್ರೀಗಳು :** ಇದಕ್ಕೆ ಸ್ಫೂರ್ತಿ ನಮ್ಮನ್ನು ಈ ಸ್ಥಾನಕ್ಕೆ ತಂದಂತಹ ಹಿರಿಯ ತರಳ ಬಾಳು ಜಗದ್ಗುರು ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಗಳು. ಸ್ವಾತಂತ್ರ್ಯ ಪೂರ್ವದಲ್ಲೇನೆ ರಂಗಭೂಮಿಯ ಬಗ್ಗೆ ಒಬ್ಬ ಸ್ವಾಮಿಗಳು ಒಲವು ಬೆಳೆಸಿಕೊಂಡಿರುವಂತಹದ್ದು ಆಶ್ಚರ್ಯಪಡಬೇಕಾದಂತಹ ಸಂಗತಿ. ಅವರು ಯಾಕೆ ರಂಗಭೂಮಿಯ ಬಗ್ಗೆ ಒಲವು ಬೆಳೆಸಿಕೊಂಡರು ಅಂದರೆ 12ನೇ ಶತಮಾನದ ಬಸವಾದಿ ಶಿವಶರಣರ ಸಂದೇಶಗಳನ್ನು ಸಮಾಜಕ್ಕೆ ಮುಟ್ಟಿಸಲಿಕ್ಕೆ ಯಾವ ಮಾರ್ಗಗಳನ್ನು ಹಿಡಿಯಬಹುದೂಂತ ನಾವು ಅಲೋಚನೆ ಮಾಡ್ತಾ ಇದ್ದೆವು. ಹಾಗೆ ಅಲೋಚನೆ ಮಾಡಿದಾಗ ಅವರಿಗೆ ಒಂದು ಈ ರೀತಿ ಉಪನ್ಯಾಸ ನೀಡುವಂತಹದ್ದು, ಬರವಣಿಗೆ ಮಾಡುವಂತಹದ್ದು, ಹಾಡುವಂತಹದ್ದು, ಇದೆಲ್ಲಾ ಬಹಳ ಕಡಿಮೆ ಅವಧಿಯಲ್ಲಿ ಆಗುವಂತಹ ವೃತ್ತಿ ರಂಗಭೂಮಿ ನಾಟಕಗಳು ಗಮನಕ್ಕೆ ಬಂದವು. ಯಾಕೆ ನಾವು ವೃತ್ತಿ ರಂಗಭೂಮಿ ರೀತಿಯಲ್ಲಿ ಶರಣರ ನಾಟಕಗಳನ್ನು ಆಡಿಸಬಾರದು ಎಂದು ಆಲೋಚನೆ ಮಾಡಿ ಅವರೇ ಸ್ವತಃ ನಾಟಕಗಳನ್ನು ಬರೆದರು. ಅದು ಅಕ್ಕಮಹಾದೇವಿ ಮತ್ತು ಬಸವಣ್ಣನವರಿಗೆ ಸಂಬಂಧಪಟ್ಟಂತಹ ಬೇರೆ ಬೇರೆ ನಾಟಕಗಳನ್ನು ರಚನೆ ಮಾಡ್ತಾ ಹೋದರು. ನಮ್ಮ ವಿದ್ಯಾಸಂಸ್ಥೆಯ ನೌಕರರನ್ನು ಬಳಸಿಕೊಂಡು ಅವರೇ ಲೇಖಕರು, ಅವರೇ ನಿರ್ದೇಶಕರು ಆ ನಾಟಕಗಳನ್ನು ಕೇವಲ ಕರ್ನಾಟಕದಲ್ಲಿ ಮಾತ್ರ ಅಲ್ಲ, ಇಡೀ ಭಾರತದ ಬೇರೆ ಬೇರೆ ಭಾಗಗಳಲ್ಲಿ ಕೂಡಾ ಅವರ ಕಾಲದಲ್ಲಿ ಅವನ್ನು ಆಡಿಸುವಂತಹದ್ದಾಗಿದ್ದು, ಅವು ನಮ್ಮ ಮೇಲೆ ಪ್ರಭಾವವನ್ನು ಬೀರಿವೆ. ವಿದ್ಯಾರ್ಥಿ ದೆಸೆಯಲ್ಲಿ ನಾವು ಕೂಡಾ ಪಾತ್ರಗಳನ್ನು ನಾಟಕದಲ್ಲಿ ನಿರ್ವಹಿಸುತ್ತಾ ಇದ್ದೆವು. ನಂತರ ನಾವು ಸಾಣೇಹಳ್ಳಿ ಮಠಕ್ಕೆ ಸ್ವಾಮಿಗಳಾದ ನಂತರ ನಮ್ಮ ಗುರುಗಳ ಆಶಯವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಮಾಡಬೇಕೆಂಬ ಹಿನ್ನಲೆಯಲ್ಲಿ ಅವರ ಹೆಸರಿನಲ್ಲಿಯೇ 'ಸಾಣೇಹಳ್ಳಿ ಶ್ರೀ ಶ್ರೀ ಶಿವಕುಮಾರ ಕಲಾ ಸಂಘ' ಅಂತ 1987ರಲ್ಲಿ ಪ್ರಾರಂಭಿಸಿದೆವು. ಅಲ್ಲಿ ನಮ್ಮ ಸ್ಥಳೀಯ ನಾಗರಿಕರು, ಅಧ್ಯಾಪಕರು, ವಿದ್ಯಾರ್ಥಿಗಳು ಇವರನ್ನು ಬಳಸಿಕೊಂಡು ಶರಣರ ಮತ್ತು ಸಾಮಾಜಿಕ ನಾಟಕಗಳನ್ನು ವರ್ಷಕ್ಕೆ 2–3 ಆಡುತ್ತಾ ಇದ್ದೆವು. ಅದು ಹೇಗೋ ಸಿ.ಜಿ.ಕೆ. ಅನ್ನುವಂತಹ ಏಕಲವ್ಯ ಪ್ರಕ್ರಿಯೆ ವ್ಯಕ್ತಿಯ

ಪರಿಚಯ ನಮಗಾಯ್ತು. ಅವರು ಹೇಳಿದ್ರು ಸ್ವಾಮೀಜಿ ಹೀಗೆ ವರ್ಷಕ್ಕೆ ಒಂದೋ ಎರಡೋ ನಾಟಕಗಳನ್ನು ಆಡಿಸುವುದಕ್ಕೆ ಬದಲಾಗಿ ಹೇಗೆ ಯಕ್ಷಗಾನ ನಿರಂತರವಾಗಿ ನಡೆಯುತ್ತೋ ಆ ರೀತಿ ನೀವು ಮಾಡಬೇಕು ಅದರ ಫಲವಾಗಿನೇ ಹುಟ್ಟಿದ್ದು ಶಿವಸಂಚಾರ. ಅದು ಮುಂದೆ ಏನೇನು ಮಾಡಿದೆ ಅಂತ ಅನೇಕರಿಗೆ ಗೊತ್ತಿದೆ. ಹೀಗೆ ಅದರಲ್ಲಿ ನನಗೆ ಆಸಕ್ತಿ ಮೂಡಿತು. ಶರಣರ ತತ್ವಗಳನ್ನು ಸಮಾಜಕ್ಕೆ ತಿಳಿಸುವಲ್ಲಿ ಪರಿಣಾಮವನ್ನು ಬೀರುತ್ತಾ ಇದ್ದೇವೆ.

**ಅಭಿಮತ :** ರಂಗಭೂಮಿ ಒಂದು ಬಗೆಯ ಶಾಲೆಯಿದ್ದಂತೆ. ಶಾಲೆಯ ಶಿಕ್ಷಣಕ್ಕಿಂತ ರಂಗಭೂಮಿಯ ಶಿಕ್ಷಣ ಮನುಷ್ಯನನ್ನು ಸಾಮಾಜಿಕರಣಗೊಳಿಸುತ್ತದೆ. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ಸ್ವಾಮೀಜಿ?

**ಸಾಣೇಹಳ್ಳಿ ಶ್ರೀಗಳು :** ರಂಗಭೂಮಿ ಒಂದುಬಗೆಯ ಶಾಲೆಯಿದ್ದಂತೆ ಅಲ್ಲ. ಅದೊಂದು ಪರಿಪೂರ್ಣ ಶಾಲೆ. ಅದೇ ಶಿಕ್ಷಣದ ಒಂದು ಪ್ರಾಥಮಿಕ ಸಂಸ್ಥೆ. ಅಲ್ಲಿ ದೊರೆಯುವುದು ಅನೌಪಚಾರಿಕ ಶಿಕ್ಷಣವಾದರೂ ಇನ್ನೊಂದು ರೀತಿಯಲ್ಲಿ ಅದು ಔಪಚಾರಿಕ ಶಿಕ್ಷಣಕ್ಕಿಂತ ಶ್ರೇಷ್ಠವಾದುದು. ಕಾರಣ ರಂಗಪ್ರದರ್ಶನದಲ್ಲಿ ಸಾಹಿತ್ಯ, ಧರ್ಮ, ನೀತಿ, ಸಾಮಾಜಿಕ ವಿಡಂಬನೆ, ಸಂಗೀತ, ನೆರಳು ಬೆಳಕಿನ ಸಂಯೋಜನೆ, ರಂಗಪರಿಕರ, ವೇಷಭೂಷಣದ ಕಲಾವಿದರು, ವಿಭಿನ್ನ ಅಭಿನಯ ಇದ್ದು ಇವುಗಳ ಮೂಲಕ ನೋಡುಗರ ಮನಸ್ಸನ್ನು ಸೂರೆಗೊಂಡು, ಹೃದಯ ಮಿಡಿತವನ್ನು ಹೆಚ್ಚಿಸಿ, ಚಿಂತನ ಮಂಥನಕ್ಕೆ ತೊಡಗಿಸುವ ಸುವರ್ಣ ಮಾಧ್ಯಮ. ಕಲಾವಿದ ಮತ್ತು ಪ್ರೇಕ್ಷಕರ ನಡುವೆ ನಡೆಯುವ ಸಂವಾದ ಹೃದಯದ ಭಾವನೆಗಳಿಗೆ ಉದ್ದೀಪನ ನೀಡುವುದು. ತನ್ಮೂಲಕ ಸಮಾಜದ ಮೇಲೆ ಅದ್ಭುತ ಪ್ರಭಾವ, ಪರಿಣಾಮ ಬೀರುವುದು. ಗಾಂಧೀಜಿಯವರು ಬಾಲ್ಯದಲ್ಲೇ ಶ್ರವಣಕುಮಾರನ ಪಿತೃಭಕ್ತಿ, ಸತ್ಯಹರಿಶ್ಚಂದ್ರನ ನಾಟಕ ನೋಡಿದ್ದರಿಂದ ಅವರು ಮುಂದೆ ಸಮಾಜ ಸೇವೆಯಲ್ಲಿ ತೊಡಗಲು, ಸತ್ಯವೇ ದೇವರೆಂದು ಭಾವಿಸಿ ಬದುಕು ಕಟ್ಟಿಕೊಳ್ಳಲು ಸಾಧ್ಯವಾಯಿತು. **ನೀವೇ ಹೇಳಿರುವಂತೆ ಶಾಲೆಯ ಶಿಕ್ಷಣಕ್ಕಿಂತ ರಂಗಭೂಮಿಯ ಶಿಕ್ಷಣ ಖಂಡಿತ ಮನುಷ್ಯನನ್ನು ಸಾಮಾಜಿಕರಣಗೊಳಿಸುತ್ತದೆ.** ಇದರಲ್ಲಿ ಬೇರೆ ಅಭಿಪ್ರಾಯವೇ ಇಲ್ಲ. ರಂಗಶಿಕ್ಷಣ ಪಡೆದ ವಿದ್ಯಾರ್ಥಿ ಸಮಾಜದಲ್ಲಿ ಧೈರ್ಯದಿಂದ ತಲೆ ಎತ್ತಿ ಬಾಳಬಲ್ಲ. ಆತ ಸಾಮಾಜಿಕ ಕಳಕಳಿ ಹೊಂದಿ ಜೀವಪರ ಮತ್ತು ಜನಪರ ಸೇವಾಕಾರ್ಯ ಮಾಡುವ ಶಕ್ತಿಯನ್ನು ಖಂಡಿತ ಮೈಗೂಡಿಸಿಕೊಳ್ಳುವನು.

**ಅಭಿಮತ :** ರಂಗಭೂಮಿಯ ಕಲೆಯನ್ನು ಉಳಿಸಿಕೊಳ್ಳುವುದು ಆಧುನಿಕ ಸಿನೆಮಾ ತಂತ್ರಜ್ಞಾನಾಧಾರಿತ ವಿದ್ಯುನ್ಮಾನ ಮಾಧ್ಯಮಗಳಿಂದಾಗಿ ಸವಾಲಿನ ಕೆಲಸ. ತಾವು ಇದನ್ನು ನಿಭಾಯಿಸಿ ರಂಗಭೂಮಿಯಲ್ಲಿ ಕ್ರಾಂತಿ ಮಾಡುತ್ತಿದ್ದೀರಿ. ಇದುವರೆಗೆ ತಾವು ಈ ಕ್ಷೇತ್ರದಲ್ಲಿ ಮಾಡಿರುವ ಪ್ರಮುಖ ಚಟುವಟಿಕೆಗಳನ್ನು ತಿಳಿಸಬಹುದೇ?

**ಶ್ರೀಗಳು :** ನಾವೆಲ್ಲ ತಂತ್ರಜ್ಞಾನ ಯುಗದಲ್ಲಿದ್ದೇವೆ. ಅದರಿಂದ ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಇಂದು ತಂತ್ರಜ್ಞಾನ ಬದುಕಿನ ಎಲ್ಲ ಕ್ಷೇತ್ರಗಳನ್ನೂ ವ್ಯಾಪಿಸಿದೆ. ತಂತ್ರಜ್ಞಾನದ ಪ್ರಭಾವ ಸಿನೆಮಾ, ಮೊಬೈಲ್, ಕಂಪ್ಯೂಟರ್, ದೂರದರ್ಶನ ಇಂಥ ಮಾಧ್ಯಮಗಳ ಮೇಲೆ ಅತಿಯಾಗಿದೆ. ರಂಗಭೂಮಿ ಸಹ ಇದಕ್ಕೆ ಹೊರತಾಗಿಲ್ಲ, ಹೊರತಾಗಬಾರದು. ಪರದೆಗಳಿಲ್ಲದೆ ನೆರಳು ಬೆಳಕಿನ ಆಟ ರಂಗಭೂಮಿಯಲ್ಲಿ ಇಂದಿರುವುದು ಸಹ ತಂತ್ರಜ್ಞಾನದ ಪರಿಣಾಮವೇ. ದೃಶ್ಯಗಳ ಬದಲಾವಣೆ, ಸಂಗೀತ ಸಂಯೋಜನೆ, ರಂಗಪರಿಕರಗಳ ಬಳಕೆಯಲ್ಲೂ ವಿದ್ಯುನ್ಮಾನ ಮಾಧ್ಯಮಗಳು ತುಂಬಾ ಪ್ರಭಾವ ಬೀರುತ್ತಿವೆ. ಹಾಗಾಗಿ ರಂಗಭೂಮಿ ವಿದ್ಯುನ್ಮಾನ ಮಾಧ್ಯಮಗಳಿಂದ ದುರ್ಬಲ ಎಂದು ಭಾವಿಸಲಾಗದು. **'ರಂಗಭೂಮಿ' ಪದದಲ್ಲಿ 'ಭೂಮಿ' ಸೇರಿದೆ. ಭೂಮಿಗೆ ಬೆಲೆ ಕಟ್ಟಲಾಗದು. ಅದು ಸ್ವಲ್ಪಕಾಲ ಬಂಜರು ಎನಿಸಿಕೊಳ್ಳಬಹುದು. ಸತ್ವಹೀನವಾಗಬಹುದು. ಆದರೆ ಆ ಭೂಮಿಗೆ ಬೇಕಾದ ಸತ್ವ ಒದಗಿಸಿದರೆ ಹುಲುಸಾದ ಬೆಳೆ ಕೊಡುವುದರಲ್ಲಿ ಅನುಮಾನವಿಲ್ಲ.** ಹಾಗಾಗಿ ಎಂಥದೇ ಪ್ರಭಾವಿ ಮಾಧ್ಯಮಗಳು ಬಂದರೂ ರಂಗಭೂಮಿಯನ್ನು ದುರ್ಬಲಗೊಳಿಸಲು ಎಂದೆಂದಿಗೂ ಸಾಧ್ಯವಿಲ್ಲ. ಏಕೆಂದರೆ ಅದು ಜೀವಂತ ಕಲೆ. ವಿದ್ಯುನ್ಮಾನ ಮಾಧ್ಯಮಗಳು ಕೊಟ್ಟದ್ದನ್ನು ಮಾತ್ರ ಸಿನಿಮಾ, ದೂರದರ್ಶನ ಇತ್ಯಾದಿಗಳಲ್ಲಿ ನೋಡಬಹುದು. ಅವು ಒಮ್ಮೆ ಕೊಟ್ಟದ್ದನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ ರಂಗಭೂಮಿಯ ಕಲಾವಿದ ಪ್ರೇಕ್ಷಕರ ಪ್ರೋತ್ಸಾಹಕ್ಕನುಗುಣವಾಗಿ ಸದಾ ಹೊಸದನ್ನು ಕೊಡುತ್ತಲೇ ಹೋಗುತ್ತಾನೆ. **ನಿನ್ನೆ ನೋಡಿದ ನಾಟಕವೇ ಒಂದು ರೀತಿ ಇದ್ದರೆ ಇವತ್ತಿನ ನಾಟಕವೇ ಬೇರೊಂದು ರೀತಿ ಇರಲು ಸಾಧ್ಯ.** ಹಾಗಾಗಿಯೇ ನಮ್ಮ ಶಿವಸಂಚಾರದ ಕಲಾವಿದರು ವಿದ್ಯುನ್ಮಾನಗಳ ಭರಾಟೆಯಲ್ಲೂ ಅವುಗಳನ್ನು ಊಟಕ್ಕೆ ಉಪ್ಪಿನಕಾಯಿಯಂತೆ ಬಳಸಿಕೊಂಡು ತಮ್ಮ ದೈಹಿಕ, ಆಂಗಿಕ ಅಭಿನಯ, ಕಂಠಸಿರಿಯ ಮೂಲಕವೇ ನಾಟಕದ ತತ್ವ, ಸತ್ವವನ್ನು ಕಳೆದ 25 ವರ್ಷಗಳಿಂದ ಉಳಿಸಿಕೊಂಡು ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡಿದ್ದಾರೆ. ಇತರ ಮಾಧ್ಯಮಗಳಂತೆ ಇಲ್ಲಿ ರೀಟೇಕ್ ಇಲ್ಲ. ಹಾಗಾಗಿ ಎಷ್ಟೇ ತಂತ್ರಜ್ಞಾನ ಬಂದರೂ ರಂಗಭೂಮಿ ಬರಡಾಗುವುದಿಲ್ಲ. **ಮಠವೊಂದು ರಂಗಕ್ಷೇತ್ರವನ್ನೇ ಪ್ರಧಾನ ಮಾಡಿಕೊಂಡ ಮೂಲ ಉದ್ದೇಶ ಬಸವಾದಿ ಶಿವಶರಣರ ತತ್ವಾದರ್ಶಗಳನ್ನು ಎಲ್ಲ ವರ್ಗದ ಜನರಿಗೆ ಮುಟ್ಟಿಸುವುದು.** ಇದರಲ್ಲಿ ಖಂಡಿತ ಯಶಸ್ವಿಯಾಗಿದ್ದೇವೆ. ಇದೊಂದು ಕ್ರಾಂತಿ ಎಂದೇ ಹೇಳಬಹುದು. ರಂಗಭೂಮಿಯ ಮೂಲಕ ಮಾಡಿರುವ ಚಟುವಟಿಕೆಗಳು ಹತ್ತು ಹಲವು. **ವಿಭಿನ್ನ ವಸ್ತುವುಳ್ಳ ಮೂರು ನಾಟಕಗಳ 150 ಪ್ರದರ್ಶನಗಳನ್ನು ಪ್ರತಿವರ್ಷ ನೀಡುತ್ತ ಬಂದಿರುವುದು. ರಾಷ್ಟ್ರೀಯ, ಅಂತರಾಷ್ಟ್ರೀಯ ನಾಟಕೋತ್ಸವ ಕಳೆದ 25 ವರ್ಷಗಳಿಂದ ಪ್ರತಿವರ್ಷ ನಡೆಯುತ್ತಲಿರುವುದು. ಪ್ರತಿವರ್ಷ ಮಕ್ಕಳ ಮತ್ತು ಶಿಕ್ಷಕರ ರಂಗತರಬೇತಿ ಶಿಬಿರ ನಡೆಸುತ್ತಿರುವುದು. ಕಲಾವಿದರ ಕಲಾನೈಪುಣ್ಯತೆ ಹೆಚ್ಚಿಸಲು ರಂಗಶಾಲೆ ಪ್ರಾರಂಭಿಸಿರುವುದು. ವಚನಗಳನ್ನು ಹಾಡುವ ತಂಡವಿರುವುದು. ಭಾರತ ಸಂಚಾರ, ಶಿವ ದೇಶ ಸಂಚಾರ, ಬಸವ ಸಂಚಾರದ** ಹೆಸರಿನಲ್ಲಿ ಅಪರೂಪದ ನಾಟಕಗಳನ್ನು ಪ್ರೇಕ್ಷಕರಿಗೆ ತೋರಿಸಿರುವುದು. ಬೀದಿ ನಾಟಕಗಳನ್ನು ಆಡಿರುವುದು. ಹಲವು ಪುಸ್ತಕಗಳನ್ನು ಪ್ರಕಟಿಸಿರುವುದು ಹೀಗೆ ಹನುಮಂತನ ಬಾಲದಂತೆ ನಮ್ಮ ರಂಗಚಟುವಟಿಕೆಗಳು ಬೆಳೆಯುತ್ತಲೇ ಇವೆ.

**ಅಭಿಮತ :** ರಂಗಕಲೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವಲ್ಲಿ ಸರ್ಕಾರದ ಪ್ರೋತ್ಸಾಹ ಹೇಗಿದೆ? ಈ ಬಗ್ಗೆ ತಮ್ಮ ಅಭಿಪ್ರಾಯವೇನು?

**ಶ್ರೀಗಳು :** ರಂಗಕಲೆಯ ಪೋಷಣೆಗಾಗಿ ಕರ್ನಾಟಕ ಸರ್ಕಾರ ಸಾಕಷ್ಟು ಪ್ರೋತ್ಸಾಹ ನೀಡುತ್ತಲೇ ಬಂದಿದೆ. ಆರ್ಥಿಕ ನೆರವನ್ನೂ ನೀಡುತ್ತಿದೆ. ಆದರೆ ಇದು 'ಬಕಾಸುರನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ' ಎನ್ನುವಂತಾಗುತ್ತಿದೆ. ಶಿಕ್ಷಣ ಕ್ಷೇತ್ರದಷ್ಟೇ ಮಹತ್ವವನ್ನು ರಂಗಕ್ಷೇತ್ರಕ್ಕೂ ಸರ್ಕಾರ ಕೊಟ್ಟು ರಂಗಭೂಮಿಗೆ ಹೆಚ್ಚಿನ ಹಣವನ್ನು ಮೀಸಲಿಡಬೇಕು ಎನ್ನುವುದು ನಮ್ಮ ಅಭಿಪ್ರಾಯ. ಕಳೆದೆರಡು ವರ್ಷಗಳಿಂದ ಕೊವಿಡ್ ಕಾರಣ ರಂಗಭೂಮಿಗೆ ಸರ್ಕಾರದಿಂದ ಇಲ್ಲವೇ ಕನ್ನಡ ಸಂಸ್ಕೃತಿ ಇಲಾಖೆಯಿಂದ ನಿರೀಕ್ಷಿತ ಧನಸಹಾಯ ದೊರೆತಿಲ್ಲ. ಕಲಾವಿದರು ತುಂಬಾ ಸಂಕಷ್ಟದ ಸ್ಥಿತಿಯಲ್ಲಿದ್ದಾರೆ. ಈ ನೆಲೆಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನಿಜವಾಗಿಯೂ ರಂಗಸೇವೆ ಮಾಡುತ್ತಿರುವ ಕಲಾಸಂಘಗಳಿಗೆ ಹೆಚ್ಚಿನ ಅನುದಾನ ನೀಡಬೇಕು. ಲೆಟ್ರೆಡ್ ಸಂಸ್ಥೆಗಳ ಹೂರಣವನ್ನು ಅನಾವರಣಗೊಳಿಸಬೇಕು. ಕಲಾವಿದರ ಹೊಟ್ಟೆ, ಬಟ್ಟೆ ಮತ್ತು ಅವರನ್ನು ಪೋಷಿಸುತ್ತಿರುವ ಸಂಸ್ಥೆಗಳಿಗೆ ಸಾರ್ವಜನಿಕರು, ಸರ್ಕಾರ ಹೆಚ್ಚಿನ ಆರ್ಥಿಕ ನೆರವು ನೀಡಿದರೆ ಅದೇ ಕಲಾವಿದರು ಮತ್ತು ಅವರನ್ನು ಪೋಷಿಸುತ್ತಿರುವ ಸಂಸ್ಥೆಗಳು ಅತ್ಯುತ್ತಮ ನಾಟಕಗಳ ಪ್ರದರ್ಶನದ ಮೂಲಕ ಸಾಮಾಜಿಕ ಜಾಗೃತಿಯನ್ನು ಮೂಡಿಸಲು ಸಾಧ್ಯ.

**ಅಭಿಮತ :** ಸ್ವಾಮೀಜಿ; ತಾವು ಕನ್ನಡ ನಾಡಿನ ಬಸವಾದಿ ಶಿವಶರಣರ ಚಿಂತನೆಗಳನ್ನು ಇವತ್ತಿನ ಸಮಾಜಕ್ಕೆ ಅರ್ಥೈಸಲು ಇತರ ಭಾಷೆಗಳಲ್ಲೂ ನಾಟಕಗಳನ್ನು ಅನುವಾದಿಸಿ ರಂಗಪ್ರಯೋಗ ಮಾಡುತ್ತಿದ್ದೀರಿ. ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ತಮ್ಮ ಕಿವಿಮಾತೇನು?

**ಶ್ರೀಗಳು :** ನಮ್ಮ ಕಲಾಸಂಘದ ಮೂಲ ಆಶಯವೇ ಬಸವಾದಿ ಶಿವಶರಣರ ತತ್ವಪ್ರಚಾರ, ಪ್ರಸಾರವನ್ನು ರಂಗಭೂಮಿಯ ಮೂಲಕ ಮಾಡುವುದು. ಅದಕ್ಕಾಗಿ ಕರ್ನಾಟಕದಲ್ಲಿ ಕನ್ನಡ ಭಾಷೆಯ ನಾಟಕಗಳನ್ನು ಅಭಿನಯಿಸಿದರೆ ಹೊರ ರಾಜ್ಯದ ಜನರಿಗೆ ಶಿವಶರಣರ ಬದುಕನ್ನು ತಿಳಿಸಿಕೊಡಲು 2007ರಲ್ಲಿ ನಾವೇ ಬರೆದ **'ಜಂಗಮದೆಡೆಗೆ', ಗಿರೀಶ್ ಕಾರ್ನಾಡರ 'ತಲೆದಂಡ', ಲಂಕೇಶರ 'ಸಂಕ್ರಾಂತಿ'. ಶಿವಪ್ರಕಾಶರ 'ಮಹಾಚೈತ್ರ' ನಾಟಕಗಳನ್ನು ಹಿಂದಿ ಭಾಷೆಗೆ ಅನುವಾದಿಸಿ ಅವುಗಳನ್ನು ಕನ್ನಡ ಕಲಾವಿದರಿಗೆ ಕಲಿಸಿ ಭಾರತದ 21 ಪ್ರಮುಖ ನಗರಗಳಲ್ಲಿ 'ಭಾರತ ಸಂಚಾರ' ಎನ್ನುವ ಹೆಸರಿನಲ್ಲಿ 45 ಪ್ರದರ್ಶನ ನೀಡಲಾಯಿತು.** 2013ರಲ್ಲಿ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರ **'ಮರಣವೇ ಮಹಾನವಮಿ', 'ಶರಣಸತಿ ಲಿಂಗಪತಿ' ಎನ್ನುವ ಕನ್ನಡ ನಾಟಕಗಳನ್ನು ಹಿಂದಿ ಭಾಷೆಯಲ್ಲಿ 'ಶಿವದೇಶ ಸಂಚಾರ'ದ ಹೆಸರಿನಲ್ಲಿ ಭಾರತದ 18 ರಾಜ್ಯಗಳಲ್ಲಿ 60ಕ್ಕಿಂತ ಹೆಚ್ಚು ಪ್ರದರ್ಶನ** ಕೊಟ್ಟದ್ದು. ಇಂಥ ಸಾಹಸದ ಕಾರ್ಯ ಮಾಡುವ ಕಲಾತಂಡಗಳಿಗೆ ಸರ್ಕಾರ ಪೂರ್ಣ ಪ್ರಮಾಣದ ಅನುದಾನ ನೀಡಬೇಕು. ಆಗ ಬೇರೆ ಬೇರೆ ಭಾಷೆಯ ಜನರಿಗೆ ಕನ್ನಡ ನಾಟಕಗಳ ಮತ್ತು ಕನ್ನಡ ಭಾಷೆಯ ಹಾಗೂ ಕನ್ನಡ ಸಂಸ್ಕೃತಿಯ ಪರಿಚಯ ಆಗುವುದು. ರಂಗಪ್ರಯೋಗಕ್ಕೆ ಬೇಕಾಗುವ ಮೈಕ್, ಲೈಟ್, ಸಂಗೀತ ಪರಿಕರಗಳು, ವಾಹನ ಸೌಲಭ್ಯ, ಕಲಾವಿದರ ಗೌರವ ಧನ ನೀಡಿದರೆ ಕನ್ನಡದ ಕಂಪನ್ನು ಅನ್ಯ ಭಾಷೆಯ ಜನರಿಗೆ ಪರಿಣಾಮಕಾರಿಯಾಗಿಯೇ ಮುಟ್ಟಿಸಬಹುದು. ಜೊತೆಗೆ ಒಂದು ರಂಗಪ್ರದರ್ಶನಕ್ಕೆ ಇಷ್ಟು ಹಣ ಎಂದು ನಿಗದಿಪಡಿಸಿ

## ಸಾಣೇಹಳ್ಳಿ ಎಸ್ ಎಸ್ ಹವಾನಿಯಂತ್ರಿತ ರಂಗಮಂದಿರದ ನೋಟಗಳು



ಸರ್ಕಾರ, ನಾಟಕ ಅಕಾಡೆಮಿ, ಕನ್ನಡ ಸಂಸ್ಕೃತಿ ಇಲಾಖೆ ಸಹಾಯ ಮಾಡಿದರೆ ಇನ್ನೂ ಅತ್ಯುತ್ತಮ ರಂಗಪ್ರಯೋಗಗಳನ್ನು ನೀಡಲು ಸಾಧ್ಯ.

**ಅಭಿಮತ :** ಕನ್ನಡ ಭಾಷೆ ಮತ್ತು ಕಲೆ, ಸಂಸ್ಕೃತಿಗಳ ಉಳಿವಿಗಾಗಿ ಕೆಲಸ ಮಾಡುತ್ತಿರುವ ಹೊರನಾಡಿನಲ್ಲಿರುವ ಕನ್ನಡ ಸಂಸ್ಥೆಗಳ ಬಗ್ಗೆ ತಮ್ಮ ಅನಿಸಿಕೆ ಏನು ಸ್ವಾಮೀಜಿ?

**ಶ್ರೀಗಳು :** ವಿಶ್ವದ ಬೇರೆ ಬೇರೆ ಭಾಗಗಳಲ್ಲಿ ಇರುವ ಕನ್ನಡಿಗರಿಗೆ ನಿಜಕ್ಕೂ ತಮ್ಮ ತಾಯ್ನಾಡು, ತಾಯ್ನುಡಿ, ಮತ್ತು ಧರ್ಮ, ಸಂಸ್ಕೃತಿಗಳ ಬಗ್ಗೆ ಕನ್ನಡ ನಾಡಿನಲ್ಲಿರುವವರಿಗಿಂತ ಹೆಚ್ಚಿನ ಒಲವು ಇರುವುದನ್ನು ನಾವು ದುಬೈ, ನ್ಯೂಜಿಲೆಂಡ್, ಆಸ್ಟ್ರೇಲಿಯಾ, ಅಮೆರಿಕಾ ದೇಶಗಳ ಕಾರ್ಯಕ್ರಮಗಳಲ್ಲಿ ಖುದ್ದಾಗಿ ಭಾಗವಹಿಸಿ ನೋಡಿ ಬೆರಗಾಗಿದ್ದೇವೆ. ಅವರು ಕನ್ನಡ ಭಾಷೆಯನ್ನು ತಮ್ಮ ಮಕ್ಕಳಿಗೆ ಕಲಿಸಲು ಹರಸಾಹಸಪಡುತ್ತಿದ್ದಾರೆ. ಆಗಾಗ ರಂಗ ಕಲಾವಿದರು, ಸಾಹಿತಿಗಳು, ಹಾಸ್ಯ ಕಲಾವಿದರು, ಸಂಗೀತ ಕಲಾವಿದರನ್ನು ಆಹ್ವಾನಿಸಿ ಕನ್ನಡದ ಸೊಬಗನ್ನು ತಮ್ಮ ಮಕ್ಕಳಿಗೆ ಮತ್ತು ವಿದೇಶಿ ಜನರಿಗೆ ತೋರಿಸುತ್ತಲೇ ಬಂದಿದ್ದಾರೆ. ಬಸವಜಯಂತಿಯನ್ನು ತುಂಬಾ ಸೊಗಸಾಗಿ ಆಚರಿಸುವರು. ಇತ್ತೀಚೆಗೆ ಕೊರೊನಾ ಕಾರಣದಿಂದ ಅಂತರ್ಜಾಲದ ಮೂಲಕವೂ ಕಾರ್ಯಕ್ರಮ ಏರ್ಪಡಿಸಿ ತಮ್ಮ ಭಾಷಾಭಿಮಾನ, ದೇಶಾಭಿಮಾನ ಮೆರೆದಿದ್ದಾರೆ. ಇದಕ್ಕೆ ದೇಹಲಿಯಲ್ಲಿರುವ ಕನ್ನಡಿಗರೂ ಹೊರತೇನಲ್ಲ. ಅಂಥ ಸಂಸ್ಥೆಗಳಿಗೆ ಸರ್ಕಾರ ಸಾಧ್ಯವಾದಷ್ಟು ಸಹಾಯ, ಸಹಕಾರವನ್ನು ಆರ್ಥಿಕವಾಗಿ ಮಾಡುವ ಸಂಕಲ್ಪ ಮಾಡಬೇಕು.

**ಅಭಿಮತ :** ದೆಹಲಿ ಕರ್ನಾಟಕ ಸಂಘ ಹಾಗು ಸಮಸ್ತ ಅಭಿಮತ ಓದುಗರ ಪರವಾಗಿ ನಿಮಗೆ ಮತ್ತೊಮ್ಮೆ ಅಭಿನಂದನೆಗಳು ಮತ್ತು ಗೌರವ ಪ್ರಣಾಮಗಳು. ◘

**(ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪುರಸ್ಕೃತ ಡಾ. ಪುರುಷೋತ್ತಮ ಬಿಳಿಮಲೆ ಅವರ ಸಂದರ್ಶನ ಮುಂದಿನ ಸಂಚಿಕೆಯಲ್ಲಿ ಬರಲಿದೆ)**





# ಹೆಚ್ಚು ಕನ್ನಡ ನಾಟಕಗಳು ಪ್ರದರ್ಶನವಾಗಬೇಕು-ಸಾಣೇಹಳ್ಳಿ ಶ್ರೀಗಳು
# ಸರೋಜಿನಿ ಮಹಿಷಿ ಕನ್ನಡಿಗರು ಮರೆಯಲಾಗದ ಹೆಸರು-ಡಾ. ಬಿಳಿಮಲೆ

ಹೊರನಾಡಿನಲ್ಲಿ ಕನ್ನಡ ನಾಡು, ನುಡಿ, ಕಲೆ–ಸಾಹಿತ್ಯಗಳಿಗೆ ಭದ್ರ ನೆಲೆಯಾಗಿ ನಿಂತಿರುವ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಫೆ. 26ರ ಶನಿವಾರ ಹಮ್ಮಿಕೊಂಡಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ದೆಹಲಿ ಕರ್ನಾಟಕ ಸಂಘವು 2021ರ “ಕನ್ನಡ ಭಾರತಿ ರಂಗ” ಪ್ರಶಸ್ತಿಯನ್ನು ಸಾಂಸ್ಕೃತಿಕ ಹರಿಕಾರ, ಚಿಂತಕರು, ಪ್ರಖರ ವಾಗ್ಮಿಗಳು ಹಾಗೂ ರಂಗಭೂಮಿಯ ಪೋಷಕರೂ ಆದ ಸಾಣೇಹಳ್ಳಿಯ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿಯವರಿಗೆ ಹಾಗೂ ಡಾ. ಸರೋಜಿನಿ ಮಹಿಷಿ ಪ್ರಶಸ್ತಿಯನ್ನು ಜಾನಪದ ತಜ್ಞ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಪ್ರದಾನ ಮಾಡಲಾಯಿತು.

‘ಕನ್ನಡ ಭಾರತಿ ರಂಗ ಪ್ರಶಸ್ತಿ’ ಸ್ವೀಕರಿಸಿ ಮಾತನಾಡಿದ ಡಾ.ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬಸವಾದಿ ಶರಣರು ನುಡಿ ಜಾಣರಾದಂತೆ, ನಡೆ ಧೀರರೂ ಅಗಿದ್ದರು. ಅವರ ನಡೆ–ನುಡಿಯ ನಡುವೆ ಕೂದಲಿನಷ್ಟೂ ಅಂತರವಿರಲಿಲ್ಲ. ಆದರೆ ಇಂದು ಈ ಅಂತರ ಹೆಚ್ಚುತ್ತಿದೆ. ಸಮಾಜಕ್ಕೆ ದಿಕ್ಕನ್ನು ತೋರಿಸುವವರೇ ದಿಕ್ಕುತಪ್ಪುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಒಂದೇ ನಾಣ್ಯದ ಎರಡು ಮುಖಗಳಂತಿರುವ ಜಾನಪದ ಮತ್ತು ಶರಣ ಸಾಹಿತ್ಯ ನಮಗೆ ಮಾರ್ಗದರ್ಶಿಯಾಗಬಲ್ಲವು. ಆತ್ಮಸಾಕ್ಷಿಗನುಗುಣವಾಗಿ ಯಾರು ನಡೆಯುತ್ತಾರೆಯೋ ಆವರು ಸಮಾಜಮುಖಿಯಾಗಿ ಹಾಗೂ ಸಮಾಜ ಬಯಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ ಎಂದರು.

ನಮ್ಮ ಹಿರಿಯ ಗುರುಗಳಾದ ಶಿವೈಕ್ಯ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು ವಿಶಿಷ್ಟ ವ್ಯಕ್ತಿತ್ವ ಹೊಂದಿದವರು. ಆ ಕಾಲಕ್ಕೆ ಅವರು ರಂಗಭೂಮಿಯನ್ನು ಸಮರ್ಥವಾಗಿ ಬಳಸಿಕೊಂಡರು. ಅವರ ಮೂಲ ಆಶಯ ಬಸವಾದಿ ಶರಣರ ತತ್ವ ಸಿದ್ಧಾಂತಗಳನ್ನು ವಿಶ್ವಕ್ಕೆ ಪರಿಚಯಿಸುವುದಾಗಿತ್ತು. ಅವರು ಹಾಕಿಕೊಟ್ಟ ದಾರಿಯಲ್ಲಿ ನಾವು ಮುಂದೆ ಸಾಗುತ್ತಿದ್ದೇವಷ್ಟೇ. ರಂಗಭೂಮಿಯಲ್ಲಿ ಸಂಗೀತ, ಸಾಹಿತ್ಯ, ನೃತ್ಯ ಮೇಳೈಸಿರುವುದರಿಂದ ಅದು ಅಬಾಲ ವೃದ್ಧರಾದಿಯಾಗಿ ಎಲ್ಲರನ್ನೂ ತನ್ನತ್ತ




ಸೆಳೆದುಕೊಳ್ಳುವುದು. ರಂಗಭೂಮಿ ವೈಚಾರಿಕ ಶಕ್ತಿಯನ್ನು ಮೂಡಿಸುವ ಮಾನವೀಯ ಅಂತಃಕರಣವುಳ್ಳದ್ದು‘ಇವನಾರವ ಇವನಾರವ ಎನ್ನದೆ, ಇವ ನಮ್ಮವ ಇವ ನಮ್ಮವ’ ಎಂದು ಎಲ್ಲರನ್ನೂ ಅಪ್ಪಿಕೊಳ್ಳುವ, ಒಪ್ಪಿಕೊಳ್ಳುವ ಗುಣವುಳ್ಳ ರಂಗಭೂಮಿಯ ಬಗೆಗಿನ ನಮ್ಮ ಒಲವಿಗೆ ಮತ್ತಷ್ಟು ಪ್ರೇರಣೆ ನೀಡಿದವರು ಸಿಜಿಕೆ ಎಂದೇ ಪ್ರಸಿದ್ಧರಾದ ಸಿ.ಜಿ. ಕೃಷ್ಣಸ್ವಾಮಿ ಅವರು. ನಮ್ಮ ಕಲಾಸಂಘದಿಂದ ಆಯೋಜಿಸಿದ್ದ ಭಾರತ ಸಂಚಾರ, ಶಿವದೇಶ ಸಂಚಾರಕ್ಕೆ ಮೂಲ ಪ್ರೇರಕರು ಶ್ರೀ ಕಪ್ಪಣ್ಣನವರು. ಅವರು ನಮ್ಮ ಶಾಲೆಯ ಮಕ್ಕಳಿಗೆ ವಚನ ನೃತ್ಯರೂಪಕ ಮಾಡಿಸಿ ಮುಂಬೈ, ಪುಣೆಯಲ್ಲಿ ಪ್ರದರ್ಶನ ಏರ್ಪಡಿಸಿದಾಗ ಸಿಕ್ಕ ಪ್ರತಿಕ್ರಿಯೆ ಅದ್ಭುತವಾಗಿತ್ತು. ಶರಣರ ವಿಚಾರಗಳನ್ನು ಕನ್ನಡ, ಹಿಂದಿ ಮತ್ತಿತರ ಭಾಷಿಕರಿಗೆ ತಲುಪಿಸುವಂತಹ ಪ್ರಯತ್ನ ರಂಗಭೂಮಿ ಹಾಗೂ ಸಂಗೀತದ ಮೂಲಕ ಮಾಡಲಾಗುತ್ತಿದೆ ಎಂದ ಶ್ರೀಗಳು ಕನ್ನಡದ ನಾಟಕಗಳು ಹೆಚ್ಚು ಹೆಚ್ಚಾಗಿ ಪ್ರದರ್ಶನವಾಗಬೇಕು ಎಂಬ ಆಶಯ ವ್ಯಕ್ತಪಡಿಸಿದರು.

ದೇಹಕ್ಕೆ ವಯಸ್ಸಾದರೂ ಮನಸ್ಸಿಗೆ ವಯಸ್ಸಾಗುವುದಿಲ್ಲ. ಪ್ರತಿಯೊಬ್ಬರಿಗೂ ನೋವು ಇದ್ದೇ ಇರುತ್ತದೆ. ಅಂಥ ನೋವು ನಿವಾರಣೆಗಾಗಿ ನಾಟಕಗಳ ಹಾಗೂ ಇಂಥ ಸಮಾರಂಭಗಳ ಅಗತ್ಯವಿದೆ. ಸಮಸ್ಯೆಗಳು ಮನುಷ್ಯನನ್ನು ಗಟ್ಟಿಯಾಗಿಸುತ್ತವೆ. ಅಕ್ಕನ ವಚನದ ಸಾರದಂತೆ ‘ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದೆಡೆ ಮನದಲ್ಲಿ ಕೋಪವಾ ತಾಳದೇ ಸಮಾಧಾನಿಯಾಗಿರಬೇಕು’ ಎಂಬ ಕಿವಿಮಾತನ್ನು ಹೇಳಿದರು. ತತ್ವಗಳು ಸಾಕಷ್ಟಿವೆ, ಆದರೆ ಅವುಗಳನ್ನು ಅನುಸರಿಸುವವರ ಸಂಖ್ಯೆ ಕಡಿಮೆಯಾಗುತ್ತಿದೆ. ಕಷ್ಟವನ್ನು ಇಷ್ಟವಾಗಿಸಿಕೊಂಡು ಏನಾದರೂ ಸಾಧನೆ ಮಾಡಿಕೊಳ್ಳಲು ಸಾಧ್ಯ ಎಂಬ ಮಾತನ್ನು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಎಲ್ಲರಿಗೂ ಸಾಣೇಹಳ್ಳಿ ಕಲಾ ಸಂಘದ ಪರವಾಗಿ ಗೌರವ ಸೂಚಿಸುತ್ತಾ, ಈ ಪ್ರಶಸ್ತಿ ನಮ್ಮ ಕಲಾವಿದರಿಗೆ ಮತ್ತು ಪ್ರೋತ್ಸಾಹಿಸಿದಂತಹ ಪ್ರೇಕ್ಷಕರಿಗೆ ಸಲ್ಲುತ್ತದೆ ಎಂದು ಹೇಳಿದರು. ಡಾ. ಸರೋಜಿನಿ ಮಹಿಷಿ ಪ್ರಶಸ್ತಿಗೆ ಪುರಸ್ಕೃತರಾದ ಡಾ ಪುರುಷೋತ್ತಮ ಬಿಳಿಮಲೆ ಅವರ ಒಡನಾಟ ತಮ್ಮೊಂದಿಗೆ ಇದೆ. ಅವರು ಈ ಪ್ರಶಸ್ತಿಗೆ ಸೂಕ್ತ ವ್ಯಕ್ತಿ. ಡಾ. ಶಿವರಾಮ ಕಾರಂತ ಪ್ರಶಸ್ತಿ ಪುರಸ್ಕಾರ ಪಡೆದ ಹೆಗ್ಗೋಡಿನ ಅಕ್ಷರ ಪ್ರಕಾಶನದ ಕೆಲಸಗಳು ಕನ್ನಡ ಸಾಹಿತ್ಯಕ್ಕೆ ಅಪರೂಪದ ಕೊಡುಗೆ ನೀಡಿವೆ ಎಂದು ತಿಳಿಸಿದರು.

ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಸ್ವೀಕರಿಸಿದ ಡಾ. ಪುರುಷೋತ್ತಮ ಬಿಳಿಮಲೆ ಅವರು



ಮಾತನಾಡಿ, ದೆಹಲಿಯಲ್ಲಿ ಕರ್ನಾಟಕ ಸಂಘ ಕಟ್ಟುವಲ್ಲಿ ಡಾ.ಸರೋಜಿನಿ ಮಹಿಷಿ ಅವರ ಪರಿಶ್ರಮ ಬಹಳಷ್ಟಿದೆ. ಈ ಸಂಘದ ಅಧ್ಯಕ್ಷೆ ಆಗಿದ್ದರವರು. ದೊಡ್ಡ ಹೋರಾಟಗಾರ್ತಿ, ಸಾಹಿತಿ, ಅನುವಾದಕಿ, ಅಪರೂಪದ ರಾಜಕಾರಣಿಯಾಗಿದ್ದ ಅವರದು ಕನ್ನಡಿಗರು ಮರೆಯಲಾಗದ ಹೆಸರು. ಭ್ರಷ್ಟಾಚಾರವನ್ನು ಬದುಕಿನುದ್ದಕ್ಕೂ ದೂರ ಇಟ್ಟವರು. ಸಂಘದ ಸಾಂಸ್ಕೃತಿಕ ಸಮುಚ್ಛಯ ಕಟ್ಟಡದ ಉದ್ಘಾಟನಾ ಕಾರ್ಯಕ್ರಮಕ್ಕೆ ಆಗಮಿಸಿದ್ದರು. 'ಮಂಕುತಿಮ್ಮನ ಕಗ್ಗ'ವನ್ನು ಹಿಂದಿಗೆ ಅನುವಾದ ಮಾಡಿದರು. 'ಸಂಸ್ಕೃತ ಭಾರತಿ'ಯ ಉಪ ಕುಲಪತಿಗಳಾಗಿ ಮಹತ್ವದ ಕಾರ್ಯಗಳನ್ನು ಮಾಡಿದವರು. ಹೊರನಾಡಿನಲ್ಲಿ ಬಹಳ ವರ್ಷಗಳಿಂದಿದ್ದ ಅವರು ಕನ್ನಡದ ಕವಿಗಳನ್ನು ನೆನಪಿಸಿಕೊಳ್ಳುವುದರ ಜೊತೆಗೆ ಅವರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಇಂಥವರ ಹೆಸರಿನ ಪ್ರಶಸ್ತಿ ಪಡೆದಿರುವುದು ತಮಗೆ ಸಂತೋಷ ತಂದಿದೆ ಎಂದರು.

ದೆಹಲಿ ಕರ್ನಾಟಕ ಸಂಘ ರಚಿಸಿದ್ದ ಪ್ರಶಸ್ತಿ ಆಯ್ಕೆ ಸಮಿತಿಯ ಸಂಚಾಲಕ ಶ್ರೀನಿವಾಸ ಜಿ. ಕಪ್ಪಣ್ಣ ಅವರು ಆಯ್ಕೆ ಸಮಿತಿ ಪರವಾಗಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ವಿಶೇಷ ಆಹ್ವಾನಿತರಾಗಿದ್ದ ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರೂ ಮತ್ತು ಪ್ರಾಧ್ಯಾಪಕರಾದ ಡಾ. ವಿಶ್ವನಾಥ ಅವರು ಮಾತನಾಡಿ ಪ್ರಶಸ್ತಿ ಪುರಸ್ಕೃತರ ಸಾಧನೆಗಳನ್ನು ಪ್ರಶಂಸಿದರು. ದೆಹಲಿ ಕರ್ನಾಟಕ ಸಂಘವು ನಡೆಸುತ್ತಿರುವ ಕನ್ನಡ ಪರ ಚಟುವಟಿಕೆಗಳನ್ನು ಮೆಚ್ಚಿ ಹರ್ಷ ವ್ಯಕ್ತ ಪಡಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಜೆ.ಎಸ್.ಎಸ್. ಮಹಾಸಂಸ್ಥಾನದ ದೆಹಲಿ ಶಾಖಾ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಅವರು ತಮ್ಮ ಹಿರಿಯ ಶ್ರೀಗಳಾದ ಸುತ್ತೂರಿನ ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮಿಗಳು ಪ್ರಶಸ್ತಿ ಪುರಸ್ಕೃತರಿಗೆ ಕಳಿಸಿದ್ದ ಸಂದೇಶವನ್ನು ತಿಳಿಸಿದರು.ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕನ್ನಡ ಚಲನಚಿತ್ರ ಯುವ ನಾಯಕ ನಟ ಅನುಪ್ ರೇವಣ್ಣ ಅವರು ಸಮಾರಂಭ ಕುರಿತು ಮೆಚ್ಚುಗೆ ನುಡಿಗಳನ್ನಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಅವರು ಮಾತನಾಡಿ, ಕನ್ನಡ ಭಾರತಿ ರಂಗ ಪ್ರಶಸ್ತಿಯನ್ನು ಡಾ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳಿಗೆ ನೀಡುವ ಮೂಲಕ ದೆಹಲಿ ಕರ್ನಾಟಕ ಸಂಘ ತನ್ನನ್ನು ತಾನು ಗೌರವಿಸಿಕೊಂಡಿದೆ. ಶ್ರೀಗಳ ಸಾಧನೆ ಮತ್ತು ಕೊಡುಗೆಯನ್ನು ಪ್ರಶಂಸಿಸುತ್ತಾ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲು ನಮಗೆ ತುಂಬಾ ಸಂತೋಷ ಹಾಗೂ ಹೆಮ್ಮೆ ಆಗುತ್ತಿದೆ ಎಂದರು. ಬರುವ ದಿನಗಳಲ್ಲಿ ಸಾಣೇಹಳ್ಳಿಯೆ ರಂಗಭೂಮಿ ಕಲಾವಿದರಿಂದ ದೆಹಲಿ ಕರ್ನಾಟಕ ಸಂಘದಲ್ಲಿ ಒಂದು ನಾಟಕ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದರು.

ಹಾಗೆಯೇ ಡಾ. ಸರೋಜಿನಿ ಮಹಿಷಿ ಪ್ರಶಸ್ತಿ ಪುರಸ್ಕೃತರಾದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತಾ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಸಂಘದ ಬೆಳವಣಿಗೆಯಲ್ಲಿ ಅವರ ಕೊಡುಗೆ ಹಾಗೂ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದಲ್ಲಿ ಅವರ ಸಾಧನೆ ಪರಿಶ್ರಮಗಳನ್ನು ನೆನಪಿಸಿಕೊಂಡು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಡಾ. ಶಿವರಾಮ ಕಾರಂತ ಪ್ರಶಸ್ತಿಗೆ ಆಯ್ಕೆಮಾಡಲಾದ ಸಾಗರದ ಹೆಗ್ಗೋಡಿನ




ಅಕ್ಷರ ಪ್ರಕಾಶನ ಅವರು ಕಾರಣಾಂತರಗಳಿಂದ ದೆಹಲಿಗೆ ಬರಲಾಗದಿದ್ದುದರಿಂದ ಅವರಿಗೆ ಮುಂಬರುವ ಕಾರ್ಯಕ್ರಮಗಳಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು. ಈ ಮೂರು ಪ್ರಶಸ್ತಿಗಳ ಆಯ್ಕೆ ಸಮಿತಿಯ ಅಧ್ಯಕ್ಷ ಹಾಗೂ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ.ಎಸ್. ನಾಗಾಭರಣ, ಸಮಿತಿಯ ಸದಸ್ಯರಾದ ಹಿರಿಯ ರಂಗಕರ್ಮಿ ಶ್ರೀನಿವಾಸ ಜಿ ಕಪ್ಪಣ್ಣ ಮತ್ತು ಲೇಖಕ, ಕವಿ, ನಾಟಕಕಾರ ಎಚ್. ಎಸ್. ಶಿವಪ್ರಕಾಶ ಅವರು ಅತ್ಯಂತ ಉತ್ತಮ ಸಾಧಕರನ್ನು ಆಯ್ಕೆ ಮಾಡಿದ್ದಕ್ಕಾಗಿ ಅವರಿಗೆ ಧನ್ಯವಾದ ಸಲ್ಲಿಸಿದರು. ಈ ಬಾರಿ 16 ಪ್ರತಿಭಾನ್ವಿತ ಮಕ್ಕಳಿಗೆ ಹಾಗೂ ಆರ್ಥಿಕ ನೆರವಿನ ಅಗತ್ಯ ಇರುವ 31 ವಿದ್ಯಾರ್ಥಿಗಳಿಗೆ ದೆಹಲಿ ಕರ್ನಾಟಕ ಸಂಘವು ವಿದ್ಯಾರ್ಥಿ ವೇತನವನ್ನು ನೀಡಿದೆ. ಕರೋನಾ ಮಹಾಮಾರಿಯಿಂದ ಸ್ಥಗಿತಗೊಂಡಿದ್ದ ಸಾಂಸ್ಕೃತಿಕ ವೈಭವ ನಮ್ಮ ಸಂಘದಲ್ಲಿ ಮತ್ತೆ ವಿಜೃಂಭಣೆಯಿಂದ ಆರಂಭಗೊಂಡು, ದೆಹಲಿ ಕನ್ನಡಿಗರಿಗೆ ಸಾಂಸ್ಕೃತಿಕ ರಸದೌತಣ ನೀಡುವುದಕ್ಕೆ ಇಂದಿನ ಕಾರ್ಯಕ್ರಮದ ಮೂಲಕ ನಾಂದಿಯಾಗಿದೆ. ಕರೋನಾ ಕಣ್ಮರೆಯಾಗುತ್ತಿದೆ. ಮುಂಬರುವ ದಿನಗಳಲ್ಲಿ ಈ ವೇದಿಕೆಯಲ್ಲಿ ಕನ್ನಡ ಕಂಪು ಕಂಗೊಳಿಸಲಿದೆ ಎಂದರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ಪೂಜ್ಯ ಸ್ವಾಮೀಜಿಯವರನ್ನು ಮತ್ತು ಅತಿಥಿ ಗಣ್ಯರನ್ನು ತುಂಬು ಹೃದಯದಿಂದ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ, ಸಂಘದ ಸಭಾಂಗಣದಲ್ಲಿ 2022ರ ಸಾಲಿನ ಮೊದಲ ಕಾರ್ಯಕ್ರಮ ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡುವ ಮೂಲಕ ಆರಂಭಗೊಂಡಿದೆ. ಕನ್ನಡ ಭಾರತಿ ರಂಗ ಪ್ರಶಸ್ತಿಗೆ ಭಾಜನರಾದ ಡಾ. ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಯವರ ಇಂದಿನ ಉಪಸ್ಥಿತಿ ಅವಿಸ್ಮರಣೀಯ.ಸಂಘವು ಕಳೆದ 75 ವರ್ಷಗಳಿಂದಲೂ ಕನ್ನಡದ ಕಂಪನ್ನು ಪಸರಿಸುವ ನಿಟ್ಟಿನಲ್ಲಿ ಅವಿರತವಾಗಿ ತೊಡಗಿಸಿಕೊಂಡು ಕಾರ್ಯನಿರ್ವಹಿಸುತಿದೆ. ಕನ್ನಡದ ಮನಸ್ಸುಗಳ, ಹಿರಿಯರ ಮತ್ತಿತರರ ಅವಿರತ ಶ್ರಮದ ಫಲವಾಗಿ ಸಂಘವು ಈ ಮಟ್ಟಕ್ಕೆ ಬೆಳೆದಿದೆ. ಸಂಘ ಸಂಸ್ಥೆಗಳು ನೀಡುವ ಪ್ರಶಸ್ತಿಗೆ ತನ್ನದೇಯಾದ ಮಹತ್ವವಿದೆ. ಸಾಧನೆಗೆ ಅಸಾಧ್ಯವಾದುದು ಯಾವುದೂ ಇಲ್ಲ. ಸಾಧಿಸುವ ಛಲವೊಂದಿರಬೇಕು ಎಂಬ ಮಾತಿಗೆ ಪೂರಕವಾಗಿ ಸಾಧಕರ ಸಾಧನೆ ಇರುತ್ತದೆ ಎಂದು ಹೇಳಿದರು.

ಆರಂಭದಲ್ಲಿ ಜಾನಪದ ಜೀವಧ್ವನಿ ಡಾ. ಕಾ ರಾಮೇಶ್ವರಪ್ಪ ತಂಡ ಕನ್ನಡಗೀತೆ, ವಚನಗೀತೆ, ಜಾನಪದ ಗೀತೆ, ರೈತಗೀತೆಗಳನ್ನು ಸೊಗಸಾಗಿ ಹಾಡಿದರು. ಸ್ಥಳೀಯ ಕಲಾವಿದರಾದ ಕುಮಾರಿ ಸಪ್ನಾ ಅಟ್ಟಾವರ್ ಅವರು ನೃತ್ಯ ಹಾಗೂ ಕುಮಾರಿ ಅವನಿ ನೆಲ್ಲಿ ಯೋಗ ಪ್ರದರ್ಶನ ಮಾಡಿದರು. ಈ ಎಲ್ಲ ಕಲಾವಿದರನ್ನು ಸಂಘದ ವತಿಯಿಂದ ಗೌರವಿಸಿ ಅಭಿನಂದಿಸಲಾಯಿತು.

ಕುಮಾರಿ ಸುದೀತಿ ಅಂಬಳೆ ಮತು ಕುಮಾರಿ ಶ್ರೀದಾ ಅಂಬಳೆ ಅವರಿಂದ ಪ್ರಾರ್ಥನೆ ಹಾಗೂ ಅತಿಥಿ ಗಣ್ಯರಿಂದ ದೀಪ ಬೆಳಗುವ ಮೂಲಕ ಆರಂಭಗೊಂಡ ಈ ಕಾರ್ಯಕ್ರಮದಲ್ಲಿ ದೆಹಲಿ  ಕನ್ನಡಿಗ ಮಹಿಳೆಯರು ನಾಡಗೀತೆಗೆ ಧ್ವನಿಯಾದರು.

ದೆಹಲಿ ಕರ್ನಾಟಕ ಸಂಘವು ಪ್ರತಿಭಾನ್ವಿತ ಹಾಗೂ ಅಗತ್ಯ ಇರುವ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಕೊಡಮಾಡುವ ವಿದ್ಯಾರ್ಥಿ ವೇತನವನ್ನು ವಿತರಿಸಲಾಯಿತು. ದೆಹಲಿ ಕರ್ನಾಟಕ ಸಂಘದ ವಿದ್ಯಾರ್ಥಿ ವೇತನ ಸಮಿತಿ ಅಧ್ಯಕ್ಷೆ ಅಶ್ವಿನಿ ಬಿ.ಎಸ್ ಹಾಗೂ ಸಂಚಾಲಕ ಕೆ.ಎಸ್. ಮೂರ್ತಿ ಅವರು ವಿದ್ಯಾರ್ಥಿ ವಿತರಣಾ ಕಾರ್ಯಕ್ರಮವನ್ನು ನಿರ್ವಹಿಸಿದರು.

ದೆಹಲಿಯ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಹಾಗೂ ದಿನಕರ ಫೌಂಡೇಶನ್ ವತಿಯಿಂದಲೂ ಪ್ರಶಸ್ತಿ ಪುರಸ್ಕೃತ ಗಣ್ಯರನ್ನು ಸನ್ಮಾನಿಸಲಾಯಿತು. ದೆಹಲಿ ಕರ್ನಾಟಕ ಸಂಘ ಹಾಗೂ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಸಂಘದ ವತಿಯಿಂದ ಯುವನಟ ಅನುಪ್ ರೇವಣ್ಣರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಕರ್ನಾಟಕ ಭವನದಲ್ಲಿ ಕಾರ್ಯ ನಿರ್ವಹಿಸಿ ವಯೋ ನಿವೃತ್ತಿ ಹೊಂದಿದ ಶ್ರೀ ಎಸ್.ಆರ್. ರಾಜಪ್ಪ ಅವರನ್ನು ದೆಹಲಿ ಕರ್ನಾಟಕ ಸಂಘದ ವತಿಯಿಂದ ಅಭಿನಂದಿಸಿ, ಆತ್ಮೀಯವಾಗಿ ಬೀಳ್ಕೊಡಲಾಯಿತು.

ಅಭಿಮತ ಪತ್ರಿಕೆಯ ಪ್ರಧಾನ ಸಂಪಾದಕ ಹಾಗೂ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಎನ್.ಪಿ. ಚಂದ್ರಶೇಖರ ಅವರು ವಿಷಯ ಪ್ರಭುತ್ವದೊಂದಿಗೆ, ಸೊಗಸಾಗಿ ಕಾರ್ಯಕ್ರಮವನ್ನು ನಿರೂಪಿಸಿದರು. ಜಂಟಿ ಕಾರ್ಯದರ್ಶಿ ಬಿ. ನಾರಾಯಣ ಹಾಗೂ ಶ್ರೀಮತಿ ಸುಮಿತಾ ಮುರಗೋಡ ಅವರು ಪ್ರಶಸ್ತಿ ಪುರಸ್ಕೃತರ ಪರಿಚಯ ಪತ್ರಗಳನ್ನು ವಾಚಿಸಿದರು. ಕಾರ್ಯಕಾರಿ ಸಮಿತಿ ಸದಸ್ಯ ಎಂ. ಶಿವಪ್ಪ ವಂದಿಸಿದರು.

ಸಭಾಂಗಣದಲ್ಲಿ ನೆರೆದಿದ್ದ ಮಕ್ಕಳು ಮತ್ತು ಸ್ಥಳೀಯರು ಜಾನಪದ ಗೀತೆಗಳ ಸುಮಧುರ ಗಾಯನಕ್ಕೆ ಹೆಜ್ಜೆ ಹಾಕಿ ಆನಂದಿಸಿದರು.

***ಅಭಿಮತ ವರದಿ***

# ವಿಶೇಷ ಸಾಧನೆ ಮಾಡಿದ ದೆಹಲಿ ಎನ್.ಸಿ.ಆರ್. ಕನ್ನಡಿಗರ ಮಕ್ಕಳ ಸಂದರ್ಶನ

**ಕಳೆದ ಶೈಕ್ಷಣಿಕ ವರ್ಷದಲ್ಲಿ 10 ಮತ್ತು 12ನೇ ತರಗತಿಯಲ್ಲಿ ವಿಶೇಷ ಸಾಧನೆ ಮಾಡಿದ ಮಕ್ಕಳ ಸಂದರ್ಶನಕ್ಕಾಗಿ 'ಅಭಿಮತ' ಸಿದ್ಧಪಡಿಸಿದ ಪ್ರಶ್ನೆಗಳು ಹಾಗು ವಿದ್ಯಾರ್ಥಿಗಳ ಉತ್ತರಗಳ ಸಂಕ್ಷಿಪ್ತ ವರದಿಯನ್ನು ಓದುಗರಿಗಾಗಿ ನೀಡುತ್ತಿದ್ದೇವೆ.**

1. ನಿಮ್ಮ ಫಲಿತಾಂಶ ನಿಮಗೆ ತೃಪ್ತಿ ತಂದಿದೆಯೇ? ಇನ್ನೂ ಹೆಚ್ಚಿನ ಅಂಕಗಳನ್ನು ನಿರೀಕ್ಷೆ ಮಾಡಿದ್ದಿರಾ?
2. ನಿಮ್ಮ ಈ ಸಾಧನೆಗೆ ಬೆನ್ನೆಲುಬಾದ ನಿಮ್ಮ ಪೋಷಕರ ಪ್ರೋತ್ಸಾಹ ಹೇಗಿತ್ತು?
3. ನೀವು ಇಷ್ಟು ಒಳ್ಳೆಯ ಅಂಕ ಪಡೆಯುವಲ್ಲಿ ನೆರವಾದ ನಿಮ್ಮಶಾಲೆ, ಶಿಕ್ಷಕರು ಮೊದಲಾದವರ ಬಗ್ಗೆ ತಿಳಿಸಿ?
4. ನಿಮ್ಮ ಮುಂದಿನ ಗುರಿ ಏನು? ಅದನ್ನು ಸಾಧಿಸಲು ಹೇಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದೀರಿ?
5. ಕಿರಿಯರಿಗಾಗಿ ನಿಮ್ಮ ಕಿವಿ ಮಾತು ಏನು?



**ಕುಮಾರ ಶ್ರೀಧನ್ ಮೂರ್ತಿ,** 12ನೇ ತರಗತಿ, 98%, ಶ್ರೀಮತಿ ಸುಜಾತ ಮೂರ್ತಿ ಮತ್ತು ಶ್ರೀ ಸುರೇಂದ್ರ ಮೂರ್ತಿ ಅವರ ಪುತ್ರ.

ನನ್ನ ಪ್ರತಿಭೆಯನ್ನು ಗುರುತಿಸಿದ್ದಕ್ಕೆ ಮೊದಲು ದೆಹಲಿ ಕರ್ನಾಟಕ ಸಂಘಕ್ಕೆ ತುಂಬು ಹೃದಯದ ಧನ್ಯವಾದಗಳು.

1) ನನ್ನ ಫಲಿತಾಂಶ ನನಗೆ ತೃಪ್ತಿ ತಂದಿದೆ.

2) ನನ್ನ ಈ ಸಾಧನೆಗೆ ಬೆನ್ನೆಲುಬಾಗಿ ನಿಂತವರು ನನ್ನ ಅಜ್ಜಿ, ತಂದೆ, ತಾಯಿ, ಚೇತನಕ್ಕ, ನನ್ನ ತಾತ ಇವರೆಲ್ಲಾ. ಏಕೆಂದರೆ ನಾನು ಶಿವಮೊಗ್ಗದ ನನ್ನ ಅಜ್ಜಿ ಮನೆಯಲ್ಲಿದ್ದು ಪಿ.ಯು.ಸಿ. ಓದಿದ್ದು.

3) ನಾನು ದೇಶೀಯ ವಿದ್ಯಾ ಸಂಸ್ಥೆ ಶಿವಮೊಗ್ಗದಲ್ಲಿ ವಿದ್ಯಾಭ್ಯಾಸ ಮಾಡಿದ್ದು. ಶಾಲೆಯ ಎಲ್ಲಾ ಶಿಕ್ಷಕರಿಗೂ, ನನಗೆ ಪ್ರೋತ್ಸಾಹ ನೀಡಿದ್ದಕ್ಕೆ ಧನ್ಯವಾದಗಳು.

4) ನನ್ನ ಮುಂದಿನ ಗುರಿ ಸಿ.ಎ. ಮಾಡುವುದು. ನಾನು ಈ ಡಿಸೆಂಬರ್‌ನಲ್ಲಿ ನಡೆದ ಸಿ.ಎ. ಫೌಂಡೇಶನ್ ನಲ್ಲಿ ಪಾಸಾಗಿದ್ದೇನೆ. ಅದರ ಮುಂದಿನ ಪರೀಕ್ಷೆಗೆ ಸಿದ್ಧತೆ ನಡೆಸುತ್ತಿದ್ದೇನೆ. ಪರಿಶ್ರಮ ಮತ್ತು ನಿಷ್ಠೆಯಿಂದ ನಾವು ಯಾವ ಕೆಲಸವನ್ನಾದರೂ ಮಾಡಿದ್ದಲ್ಲಿ ತಕ್ಕ ಪ್ರತಿಫಲ ದೊರೆಯುತ್ತದೆ.



**ಕುಮಾರ ಕ್ಷಿತಿಜ್ ಎಸ್.**, 12ನೇ ತರಗತಿ, 97%, ಶ್ರೀಮತಿ ರೂಪಾ ಎಸ್. ಮತ್ತು ಶ್ರೀ ನರಸಿಂಹಮೂರ್ತಿ ಎಸ್. ಅವರ ಪುತ್ರ.

**ಕ್ಷಿತಿಜ್ ಅವರೇ, ನೀವು 12ನೇ ತರಗತಿ ವಿಜ್ಞಾನ ವಿಭಾಗದಲ್ಲಿ ದೆಹಲಿಯ ಪಶ್ಚಿಮ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದೀರಿ. ಅದಕ್ಕಾಗಿ ನಿಮಗೆ ತುಂಬು ಹೃದಯದ ಅಭಿನಂದನೆಗಳು.**

ಧನ್ಯವಾದಗಳು ಸರ್,

1. ನನ್ನ ಫಲಿತಾಂಶ ನನಗೆ ತೃಪ್ತಿ ನೀಡಿಲ್ಲ, ನಾನು ಇನ್ನೂ ಹೆಚ್ಚಿನ ಅಂಕಗಳನ್ನ ನಿರೀಕ್ಷೆ ಮಾಡಿದ್ದೆ. ಇನ್ನೂ ಹೆಚ್ಚಿನ ಅಂಕ ಪಡೆಯುವ ವಿಶ್ವಾಸವೂ ಇತ್ತು. ಯಾಕೆಂದರೆ ಆ ರೀತಿ ನನ್ನ ಪರೀಕ್ಷಾ ತಯಾರಿ ಸಾಗಿತ್ತು. ಕೊರೊನ ಎರಡನೇ ಅಲೆಯ ಕಾರಣದಿಂದ ಅಂತಿಮ ಪರೀಕ್ಷೆ ನಡೆಯದೆ ಹಿಂದಿನ ಪರೀಕ್ಷಾಂಕಗಳ ಆಧಾರದಲ್ಲಿ ಫಲಿತಾಂಶ ಪ್ರಕಟಗೊಂಡಿದ್ದರಿಂದ ನನ್ನ ನಿರೀಕ್ಷೆಗಿಂತ ಅಂಕಗಳು ಕಡಿಮೆಯಾಯಿತು ಎಂದೆನಿಸುತ್ತದೆ. ಹನ್ನೊಂದು ಮತ್ತು ಹನ್ನೆರಡರ ಆರಂಭಿಕ ಪರೀಕ್ಷೆಗಳಲ್ಲಿ ಅಂಕ ಕಡಿಮೆಯಾಗುವುದು ಸಹಜ ನಂತರ ಅಂತಿಮ ಪರೀಕ್ಷೆಯಲ್ಲಿ ಹಿಂದಿನ ಹಿನ್ನಡೆಗಳ ಮೆಟ್ಟಿ ಮುನ್ನಡೆಯುವುದು ಸಾಮಾನ್ಯ. ಅದ್ದರಿಂದ ಭೌತಿಕವಾಗಿ ಅಂತಿಮ ಪರೀಕ್ಷೆ ನಡೆದಿದ್ದರೇ ಇನ್ನೂ ಹೆಚ್ಚಿನ ಅಂಕ ಪಡೆಯಬಹುದಿತ್ತು. ನಾನು ಇನ್ನೂ ಶೇಕಡಾ ಎರಡರ ಹೆಚ್ಚಿನ ಅಂಕ CBSE ಅಂತಿಮ ಫಲಿತಾಂಶದಲ್ಲಿ ಬಯಸಿದ್ದೆ. ಒಟ್ಟಿನಲ್ಲಿ ಫಲಿತಾಂಶ ಬಂದಿದ್ದು ಆಯಿತು ಈಗ ಇದರಲ್ಲೇ ತೃಪ್ತಿ ಪಟ್ಟುಕೊಂಡಿರುವೆ.

2. ನನ್ನೆಲ್ಲಾ ಪ್ರಯತ್ನಗಳಿಗೆ ಸಾಧನೆಗೆ ಮೂಲ ಕಾರಣಕರ್ತರೇ ಅವರು. ಅವರ ಪ್ರೋತ್ಸಾಹ, ಶ್ರಮವನ್ನು ತಿಳಿಸಲು ಎಲ್ಲಿಂದ ಹೇಗೆ ಆರಂಭಿಸಲಿ ಎನ್ನುವುದೇ ತಿಳಿಯುತ್ತಿಲ್ಲ. ಈ ನನ್ನ ಎರಡೂವರೆ ವರ್ಷದ ಯಾತ್ರೆಯಲ್ಲಿ ಅವರೂ ಸಮಭಾಗಿಗಳು. ಊರಿಗೆ ಹೋದರೆ ನನಗೆ ಮತ್ತೆ ಓದಿನ ಕಡೆ ಗಮನ ಕ್ರೋಢಿಕರಿಸಿಕೊಳ್ಳಲು ಕಷ್ಟವಾಗುತ್ತದೆ ಎಂದು ನಾನು ಹೋಗದೆ ಇರಲು ನಿರ್ಧರಿಸಿದರೆ ನನ್ನ ತಾಯಿಯೂ ಕೂಡ ಊರಿಗೆ ಹೋಗದೆ ಉಳಿದರು. ಪ್ರತಿದಿನದ ಓದು ಅಡೆ ತಡೆಯಿರದೆ ಸಾಗಲಿ ಎಂದು ವಿಧ ವಿಧವಾದ, ರುಚಿಯಾದ ಹಾಗೂ ಪೌಷ್ಟಿಕವಾದ ಅಡುಗೆ, ತಿಂಡಿಗಳನ್ನು ಮಾಡುತ್ತಿದ್ದರು. ನಡು ನಡುವೆ ಬೇಕಾದ ಕುರಕಲುಗಳನ್ನು ಮನೆಯಲ್ಲಿ ತಯಾರಿಸಿಕೊಡುತ್ತಿದ್ದರು ನಮ್ಮಮ್ಮ. ನನಗೆ ಶಾಲೆಗೆ ಮತ್ತು ಕೋಚಿಂಗ್ ಸೆಂಟರ್‌ಗೆ ಓಡಾಡಲು ಸಮಯ ವ್ಯರ್ಥವಾಗದಂತೆ ನಮ್ಮ ತಂದೆ ನನ್ನನ್ನು ವಾಹನದಲ್ಲಿ ಬಿಡುತ್ತಿದ್ದರು. ವಿದ್ಯಾಭ್ಯಾಸದ ಅವಧಿಗೆ ಚ್ಯುತಿ ಆಗದ ಹಾಗೆ ಬೇಕಾದ ಸಾಮಾನು, ಪುಸ್ತಕ ನಮ್ಮ ತಂದೆಯೇ ಹೋಗಿ ತಂದುಕೊಡುತ್ತಿದ್ದರು. ಮನೆಯಲ್ಲಿ ಓದುವಾಗ ನನಗೆ ತೊಂದರೆ ಆಗಬಹುದೇನೋ ಎಂದು ಅವರಿಬ್ಬರೂ ತಮ್ಮ ಮನರಂಜನೆ, ಸಿನಿಮಾ, ಸುತ್ತಾಟ, ಪ್ರಯಾಣ, ಎಲ್ಲವನ್ನೂ ಕೂಡ ಇಲ್ಲವಾಗಿಸಿಕೊಂಡಿದ್ದರು. ನನ್ನಿಂದ ಮಾಡಿಸಬಹುದಾದ ಸಣ್ಣಪುಟ್ಟ ಕೆಲಸವನ್ನು ಮಾಡಿಸದೇ ನನ್ನ ಸಂಪೂರ್ಣ ಗಮನ ಹಾಗೂ ವೇಳೆ ವಿದ್ಯೆಯ ಕಡೆ ಇರುವಂತೆ ನೋಡಿಕೊಂಡರು. ಮುಖ್ಯವಾಗಿ ನನಗೆ ನಡುನಡುವೆ ಆತ್ಮವಿಶ್ವಾಸ ಕಡಿಮೆಯಾದಾಗ ನನ್ನ ಬೆನ್ನುತಟ್ಟಿ ಹುರಿದುಂಬಿಸಿದ್ದರು. ಇದರ ಜೊತೆಗೆ ನನ್ನಣ್ಣನ ಮಾರ್ಗದರ್ಶನ ನನಗೆ ಬಹಳ ಸಹಾಯ ಮಾಡಿತ್ತು.

3. ಒಂದರಿಂದ ಹನ್ನೆರಡನೇ ತರಗತಿಯ CBSE ಪರೀಕ್ಷೆ ತಯಾರಿಗಾಗಿ ನಾನು ಯಾವುದೇ ಟ್ಯೂಷನ್ ತೆಗೆದುಕೊಂಡಿರಲಿಲ್ಲ. ಶಾಲೆಯ ಶಿಕ್ಷಕರ ಪಾಠಗಳೇ ನನಗೆ ಸಹಾಯ ಮಾಡಿತು. ಮುಖ್ಯವಾಗಿ ನನಗೆ ಎಂಟರಿಂದ ಹತ್ತನೇ ತರಗತಿಯಲ್ಲಿದ್ದ ಗಣಿತ ಶಿಕ್ಷಕರಿಗೆ ನಾನು ಋಣಿ. ದುಃಖದಾಯಕ ವಿಷಯವೇನೆಂದರೆ ಕೊರೋನ ಎರಡನೇ ಅಲೆಯಲ್ಲಿ ಅವರನ್ನು ಕಳೆದುಕೊಂಡೆವು. CBSE ಹಾಗೂ JEE ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿ ಭಿನ್ನವಾಗಿರುತ್ತೆ. ಅದಕ್ಕೆ ನಾನು ಜನಕಪುರಿ ಆಕಾಶ್ ಕೋಚಿಂಗ್ ಸೆಂಟರ್‌ನಲ್ಲಿ JEE ಗಾಗಿ ಕೋಚಿಂಗ್ ಪಡೆದೆ. ಅಲ್ಲಿ ನನಗೆ ಸಿಕ್ಕ ಮೂರು ವಿಭಾಗಗಳ ಅಂದರೆ ಗಣಿತ, ಭೌತಶಾಸ್ತ್ರ ಹಾಗೂ ರಸಾಯನಶಾಸ್ತ್ರಗಳ ಭೋಧಕರು ವಿಷಯ ಅರಿಯುವ ನನ್ನ ದೃಷ್ಟಿಯನ್ನ ಬದಲಾಯಿಸಿದರು. ಅವರು ಮಾಡಿದ ಪಾಠ, ಮನನ ಮಾಡಿಸಿದ ರೀತಿ ಅತ್ಯುತ್ತಮ. ಪ್ರತಿಯೊಬ್ಬರ ಮೇಲೂ ಅವರು ಕೊಡುತ್ತಿದ್ದ ಗಮನ ಪ್ರಶಂಸಾರ್ಹ. ಪಠ್ಯದಲ್ಲಿನ ನಮ್ಮ ಸಂದೇಹಗಳಿಗೆ ಪ್ರತ್ಯೇಕ ಸಮಯ ಮೀಸಲಿಟ್ಟು ಅಲ್ಲಿ ನಮ್ಮೆಲ್ಲ ಸಂದೇಹಗಳನ್ನು ನಿವಾರಿಸಿಕೊಡುತ್ತಿದ್ದ ರೀತಿ ಗಮನಾರ್ಹ. ತರಗತಿಗಳನ್ನು ಏಮ್ಮುಖ ಪಾಠವಾಗಿ ನಡೆಸದೇ ಭೋಧಕ ವಿದ್ಯಾರ್ಥಿ ನಡುವೆ ಇಂಟರ್ ಆಕ್ಟೀವ್ ಅಂದರೆ ದ್ವಿಮುಖ ಸಂವಹನವಾಗಿ ನಡೆಸಿದ್ದು ನನಗೆ ಹೆಚ್ಚಿನ ಸಹಾಯ ನೀಡಿತ್ತು. ಕೇವಲ ಪಾಠಕ್ಕೆ ಸೀಮಿತಗೊಳಿಸದೇ ಪರೀಕ್ಷಾ ತಯಾರಿ, ವೇಳೆಯ ಸದುಪಯೋಗ, ಪ್ರಶ್ನೆಗಳ ಅರ್ಥೈಸುವ ರೀತಿ, ಸಾಮಾನ್ಯವಾಗಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಮಾಡುವ ತಪ್ಪುಗಳನ್ನು ವಿವರಿಸಿ ಏನು ಮಾಡಬೇಕು ಏನು ಮಾಡಬಾರದು ಎಂದು ಹೇಳುತ್ತಿದ್ದುದು ಸೊಗಸಾಗಿತ್ತು. ಹಾಗೆಯೇ ನಾವು ಪರೀಕ್ಷೆಯಲ್ಲಿ ಮಾಡಿದ ದೋಷಗಳನ್ನು ತೋರಿಸಿ ಅವುಗಳನ್ನು ಸರಿಪಡಿಸಿಕೊಳ್ಳುವ ಬಗ್ಗೆಯೂ ಮಾರ್ಗದರ್ಶನ ಮಾಡಿದರು. ಮುಖ್ಯವಾಗಿ ಯಾವುದೇ ಸಮಯದಲ್ಲಿ ಅವರನ್ನು ಅಪ್ರೋಚ್ ಮಾಡಬಹುದಿತ್ತು.

4. ಸದ್ಯಕ್ಕೆ ನನಗೆ ಈಗ ಧೀರ್ಘಾವಧಿಯ ನಿರ್ದಿಷ್ಟ ಗುರಿಯಿಲ್ಲ. ಬದುಕು ಕ್ಷಿಪ್ರವಾಗಿ ಬದಲಾಗುತ್ತಿರುವ ಕಾಲಘಟ್ಟದಲ್ಲಿ ನಾನಿರುವ ಪೀಳಿಗೆ ಇದೆ. ಆದರೇ

ಗಣಕಯಂತ್ರ (ಕಂಪ್ಯೂಟರ್) ವಿಷಯವೇ ಇಂಜಿನಿಯರಿಂಗ್‌ನಲ್ಲಿ ಬೇಕು ಎಂದು best IIT, NIT, ದೆಹಲಿಯ IIIT, NSUT, DTU ಗಳಲ್ಲಿ ದೊರೆಯುತ್ತಿದ್ದ ವಿಷಯ ಬೇಡವೆಂದು ದಾಖಲಾತಿ ನಿರಾಕರಿಸಿ ಅವುಗಳ ಸಮವಿದ್ದ ಬಿ.ಎಂ. ಎಸ್. ನಲ್ಲಿ ಗಣಕಯಂತ್ರದ ವಿಷಯದಲ್ಲಿ ದಾಖಲಾತಿ ಪಡೆದೆ. ಈ ವಿಷಯದಲ್ಲಿರುವ ಒಳಹುಗಳ ಅರ್ಥೈಸಿಕೊಂಡು ಈ ದಾರಿಯಲ್ಲಿ ಸಾಗುತ್ತ ಗುರಿ ಹುಡುಕಬೇಕುಂಬುದು ನನ್ನ ಪ್ರಯತ್ನ. ಸದ್ಯಕ್ಕೆ ಇಂಜಿನಿಯರಿಂಗ್ ಪದವಿಯಲ್ಲಿ ಆಯ್ಕೆ ಮಾಡಿಕೊಂಡಿರುವ ವಿಷಯದಲ್ಲಿ ಪರಿಣತಿಗಾಗಿ ಗಮನ ಕೇಂದ್ರೀಕರಿಸಿರುವೆ. ಪ್ರತಿ ಪರೀಕ್ಷೆ ಎದುರಿಸುತ್ತಾ ಒಳ್ಳೆಯ ಶೇಕಡಾವಾರು ಅಂಕ (CGPA) ಗಳಿಸುತ್ತಿರಬೇಕು ಎಂಬುದು ಆಸೆ.

5. ನೀವು ಯಾವ ಪದವಿ ಮಹಾವಿದ್ಯಾಲಯ ಹಾಗೂ ವಿಷಯ ಓದಬೇಕುಂಬುದರ ಬಗ್ಗೆ ಸ್ಪಷ್ಟ ಗುರಿ ಇಟ್ಟುಕೊಂಡು ಹನ್ನೊಂದನೇ ತರಗತಿಯಲ್ಲಿ ವಿಷಯ ಆಯ್ಕೆ ಮಾಡಿಕೊಳ್ಳಿ. ಗೆಳೆಯರ ಆಯ್ಕೆ ನಿಮ್ಮ ಆಯ್ಕೆಯಾಗಬಾರದು. ನೀವು ಆಯ್ಕೆ ಮಾಡಿಕೊಂಡ ವಿಷಯದಲ್ಲಿ ಬರುವ ಪಾಠಗಳ ಬಗ್ಗೆ ಪೂರ್ಣ ಗಮನ ಕೇಂದ್ರೀಕರಿಸಿ. ವಿಷಯದ ಶ್ರವಣ, (listening) ಪಠನ (reading), ಗ್ರಹಣ (understanding) ಮಾಡಿಕೊಂಡಾಗ ವಿಷಯ ನಿಧಾನವಾಗಿ ಮನಸ್ಸಿನಲ್ಲಿ ಇಳಿಯಲಾರಂಭಿಸುತ್ತದೆ. ಪಾಠವನ್ನು ಕೇವಲ ಕೇಳಿಸಿಕೊಂಡಾಗ ಸುಲಭವಾಗಿ ಅರ್ಥವಾದ ಹಾಗೆ ಅನ್ನಿಸುತ್ತೆ ಆದರೆ ಪ್ರಶ್ನೆಗಳ ಬಿಡಿಸಲು ಹೋದಾಗ ಸಂಕಷ್ಟ ಎದುರಾಗುತ್ತದೆ. ಈ ರೀತಿ ಎರಡು–ಮೂರು ಬಾರಿ ಆಗುತ್ತಿದ್ದಂತೆ ಸಾಮಾನ್ಯವಾಗಿ ವಿದ್ಯಾರ್ಥಿಗಳು ಪಠ್ಯಾಸಕ್ತಿ ಕಳೆದುಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಆ ಪಾಠವನ್ನು ಬಿಡದೇ ಓದಿ ಮನನ ಮಾಡಿಕೊಂಡು ಆ ಪ್ರಶ್ನೆಗಳಿಗೆ ಉತ್ತರ ಹುಡುಕಿ ತಮ್ಮ ಉತ್ತರ ತಾಳೆ ಹಾಕಿ ಎಲ್ಲಿ ತಪ್ಪಾಗಿದೆ ಹಾಗೂ ಪ್ರಶ್ನೆಗೆ ಯಾವ ರೀತಿ ಉತ್ತರಿಸಬೇಕು ಎಂಬುದಕ್ಕೆ ಗಮನ ಕೊಡಬೇಕು. ಆರಂಭದಲ್ಲಿ ಹೀಗೆಲ್ಲ ಮಾಡಲು ಬಹಳವೇ ಸಮಯ ಹಿಡಿಯುತ್ತದೆ ಆದರೆ ಒಮ್ಮೆ ಈ ದಾರಿ ಹಿಡಿದೆವೆಂದರೆ ಮುಂದೆ ಸಮಯ ಅಭಾವ ಇರುವುದಿಲ್ಲ. ಮೊಬೈಲ್ ಫೋನ್, ಗಣಕಯಂತ್ರ, ಟ್ಯಾಬ್‌ಗಳನ್ನ ಪಾಠ/ಪ್ರಶ್ನೆಗಳ ಅರ್ಥೈಸಿಕೊಳ್ಳಲು ಮಾತ್ರ ಬಳಸಿ. ಚಟ ಹೆಚ್ಚಿಸುವ ವಿಡಿಯೋ ಗೇಮ್‌ಗಳಿಂದ, ಟಿವಿ ಕಾರ್ಯಕ್ರಮಗಳಿಂದ, ಸಿನಿಮಾ, ಮಾಲ್ ಸುತ್ತಾಟ, ಹವ್ಯಾಸಗಳಿಂದ ಈ ಎರಡು ವರ್ಷ ದೂರವಿರಿ. ನಿರ್ದಿಷ್ಟ ಹಾಗೂ ಕಡಿಮೆ ಸಮಯ ಯಾವಾಗಲಾದರೊಮ್ಮೆ ಓದಿನ ಏಕತಾನತೆ ಓಡಿಸಲು ಕೊಡಿ. ಹಳೆಯ ಪ್ರಶ್ನೆಪತ್ರಿಕೆಗಳ ಉತ್ತರಿಸುವ ಪ್ರಯತ್ನ ಮಾಡಿ ಅವುಗಳ ಕರೆಕ್ಷನ್ ಶಿಕ್ಷಕರಿಂದ ಮಾಡಿಸಿಕೊಳ್ಳಿ. ನಿಮಗೆ ಏನೇ ತೊಂದರೆ ಬಂದರೂ ನಿಮ್ಮ ತಂದೆ ತಾಯಿಗಳೊಂದಿಗೆ ಒಡಹುಟ್ಟಿದವರೊಂದಿಗೆ ಹಂಚಿಕೊಂಡು ಅವರಿಂದ ದೊರೆಯುವ ಪರಿಹಾರ ಪಾಲಿಸಿಕೊಂಡು ಹಗುರವಾಗಿ. ಧೀರ್ಘ ಕಿವಿಮಾತು ಎನಿಸಬಹುದು ಆದರೆ ನಾನು ಪಾಲಿಸಿದ ಈ ಮಂತ್ರ ಯಶಸ್ಸಿಗೆ ಸೂತ್ರ ಎಂಬುದೇ ನನ್ನ ಭಾವನೆ.



**ಕುಮಾರಿ ರಜಿನಿ ಜಿ.ಕೆ.**, 12ನೇ ತರಗತಿ, 97%, ಶ್ರೀಮತಿ ಇ. ಹೇಮಾವತಿ, ಮತ್ತು ಶ್ರೀ ಕಾಳಯ್ಯ ಜಿ.ಪಿ. ಅವರ ಪುತ್ರಿ.

1. ನನ್ನ ಫಲಿತಾಂಶದಿಂದ ನಾನು ಸಂತೋಷವಾಗಿದ್ದೇನೆ. ಇದರಿಂದ ಸಂಪೂರ್ಣವಾಗಿ ತೃಪ್ತಳಾಗಿಲ್ಲ. ಏಕೆಂದರೆ ನಾನು ಯಾವಾಗಲೂ ಬೋರ್ಡ್ ಪರೀಕ್ಷೆಗಳಲ್ಲಿ 100 % ಅಂಕಗಳನ್ನು ಗಳಿಸಬೇಕೆಂದು ಬಯಸುತ್ತೇನೆ.

2. ನನ್ನ ಜೀವನದ ಪ್ರತಿ ಹಂತದಲ್ಲೂ ನನ್ನ ಪೋಷಕರು ನನ್ನನ್ನು ಚೆನ್ನಾಗಿ ಪ್ರೋತ್ಸಾಹಿಸಿದ್ದಾರೆ. ಓದಬೇಕೆಂದು ನನ್ನ ಮೇಲೆ ಒತ್ತಡ ಹೇರುವ ಬದಲು, ನನ್ನ ಗುರಿಗಳನ್ನು ಸಾಧಿಸಲು ಮತ್ತು ಕಷ್ಟಪಟ್ಟು ಕೆಲಸ ಮಾಡಲು ನನ್ನನ್ನು ಪ್ರೇರೇಪಿಸುತ್ತಾರೆ. ಈ ರೀತಿ ಪ್ರೋತ್ಸಾಹಿಸುವ ಪೋಷಕರನ್ನು ಪಡೆದಿರುವ ನಾನು ತುಂಬಾ ಅದೃಷ್ಟಶಾಲಿ. ನನ್ನ ತಂದೆ ತಾಯಿಯರಿಬ್ಬರೂ ನನಗೆ ಬೆನ್ನೆಲುಬಾಗಿದ್ದು ನನಗೆ ಪ್ರೇರಕರಾಗಿದ್ದುಕೊಂಡು, ಸದಾ ಕಾಲ ನನ್ನ ಅಂತಶಕ್ತಿ ಎಚ್ಚೆತ್ತುಕೊಳ್ಳುವಂತೆ ಮಾಡಿ ಧನಾತ್ಮಕವಾದ ಚಿಂತನೆಗಳನ್ನು ಬೆಳೆಸಿದರು.

3. ನನ್ನ ಶಾಲೆಯಲ್ಲಿ ಗಣಿತ ಶಿಕ್ಷಕಿ ಶ್ರೀಮತಿ ಲಲಿತಾ ಮೇಡಂ ಅವರು ಅವರು ತುಂಬಾ ಕರುಣಾಶೀಲರು ಮತ್ತು ನನಗೆ ಗಣಿತ ಕಲಿಯಲು ತುಂಬಾ ನೆರವಾಗುತ್ತಿದ್ದರು. ತರಗತಿಯ ಮಧ್ಯದಲ್ಲೆ ನಾನು ಕೇಳುತ್ತಿದ್ದ ಪ್ರತಿಯೊಂದು ಸಂದೇಹವನ್ನೂ ಅವರು ಬಹಳ ಸಮಾಧಾನದಿಂದ ಬಿಡಿಸಿ ಉತ್ತರ ಹೇಳುತ್ತಿದ್ದರು. ಅವರು ನಾನು ನನ್ನ ತರಗತಿಯ ಟಾಪರ್ ಆಗಬೇಕೆಂದು ಬಯಸುತ್ತಿದ್ದುದರಿಂದ ನಾನೇನಾದರೂ ಒಂದು ಅಥವಾ ಎರಡು ಅಂಕಗಳನ್ನು ಕಳೆದುಕೊಂಡರೆ ನನ್ನನ್ನು ಬೈಯುತ್ತಿದ್ದರು. ನನ್ನಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದರು. ಕಷ್ಟಪಟ್ಟು ಅಧ್ಯಯನ ಮಾಡಿ ಪ್ರತಿಯೊಂದು ಪರಿಕಲ್ಪನೆಯನ್ನು ನಾನು ಚೆನ್ನಾಗಿ ಮನದಟ್ಟು ಮಾಡಿಕೊಂಡು ಕಲಿಯುವಂತೆ ಪ್ರೇರೇಪಿಸುತ್ತಿದ್ದರು. ಆದ್ದರಿಂದ ನಾನು ನನ್ನ ಶಾಲೆಯ ಬಗ್ಗೆ ಮತ್ತು ನನಗೆ ಪಾಠ ಹೇಳಿಕೊಟ್ಟ ಗುರುಗಳ ಬಗ್ಗೆ ತುಂಬಾ ಹೆಮ್ಮೆ ಪಡುತ್ತೇನೆ.

4. ನನ್ನ ಮುಂದಿನ ಗುರಿ 12ನೇ ತರಗತಿಯ ಬೋರ್ಡ್ ಪರೀಕ್ಷೆಗಳಲ್ಲಿ ನಾನು ಗಳಿಸಿದ್ದಕ್ಕಿಂತ ಹೆಚ್ಚು ಅಂಕಗಳನ್ನು ಪಡೆಯಲು ಕಷ್ಟಪಟ್ಟು ಅಧ್ಯಯನ ಮಾಡುವುದು. ನನ್ನ ಉತ್ತಮ ಸಾಧನೆಗಾಗಿ ಮತ್ತು ನನ್ನ ಫಲಿತಾಂಶಗಳಿಂದಾಗಿ ನಾನು ನನ್ನ ಶಾಲೆಯಲ್ಲಿ ಮುಂಚೂಣಿಗೆ ಬಂದಂತೆ ಮುಂದೆ ಕಾಲೇಜು ವಿದ್ಯಭ್ಯಾಸದಲ್ಲೂ ಕೂಡ ಅದೇ ರೀತಿಯಲ್ಲಿ ನನ್ನ ಉತ್ತಮ ಫಲಿತಾಂಶಗಳನ್ನು ಪಡೆದು ನಾನು ಪ್ರಗತಿ ಸಾಧಿಸಬಯಸುತ್ತೇನೆ.



**ಕುಮಾರಿ ವರ್ಷಾ ಕಿಣಿ,** 12ನೇ ತರಗತಿ, 95.60%, ಶ್ರೀಮತಿ ಲಕ್ಷ್ಮೀ ಕಿಣಿ ಮತ್ತು ಶ್ರೀ ಮಂಜುನಾಥ ಕಿಣಿ ಅವರ ಪುತ್ರಿ.

1. ನನಗೆ ಈಗ ಬಂದಿರುವ ಅಂಕಗಳಿಗಿಂತ ನಾನು ನಿಜವಾಗಿ ಸ್ವಲ್ಪ ಹೆಚ್ಚು ಅಂಕಗಳನ್ನು ನಿರೀಕ್ಷಿಸಿದ್ದೆ. ಆದರೂ ಇದರಲ್ಲಿ ನನಗೆ ತೃಪ್ತಿಯಿದೆ. ಮೌಲ್ಯಮಾಪಕರು ನನ್ನ ನಿರೀಕ್ಷೆಗೆ ತಕ್ಕ ಅಂಕಗಳನ್ನು ನೀಡದಿರಲು ಅವರದೇ ಆದ ಕಾರಣವಿರಬೇಕು ಎಂದು ನಾನು ನಂಬುತ್ತೇನೆ; ಏಕೆಂದರೆ ನಾನು ಕೆಲವು ಅಂಶಗಳಲ್ಲಿ ಇನ್ನೂ ನಾನು ಸುಧಾರಣೆ ಮಾಡಿಕೊಳ್ಳಬೇಕಾದ ಅಗತ್ಯವಿದ್ದಿರಬಹುದು.

2. ಚಿಕ್ಕಂದಿನಿಂದಲೂ ನನಗೆ ಪ್ರೋತ್ಸಾಹ ನೀಡುತ್ತಿರುವವರು ನನ್ನ ತಾಯಿ. ನಾನು ಎಷ್ಟು ಅಂಕಗಳನ್ನು ಪಡೆಯುತ್ತೇನೆ ಎಂಬುದಕ್ಕಿಂತಲೂ ಶಾಲೆಯ ಜೀವನ ಮತ್ತು ವಿದ್ಯಾಭ್ಯಾಸವನ್ನು ಆನಂದಿಸುವುದು ಬಹಳ ಮುಖ್ಯವೆಂದು ಅವರು ಹೇಳುತ್ತಿದ್ದರು. ಓದಿನ ಬಗ್ಗೆ ಯಾವಾಗಲೂ ಸಕಾರಾತ್ಮಕ ದೃಷ್ಟಿಕೋನವನ್ನು ಮತ್ತು ಚೆನ್ನಾಗಿ ಕಲಿಯಲು ನನ್ನನ್ನು ಪ್ರೋತ್ಸಾಹಿಸುತ್ತಿದ್ದರು.

3. ನಿಜವಾಗಿಯೂ ನನ್ನ ಶಿಕ್ಷಕರ ನೆರವನ್ನು ಮರೆಯಲಾಗದು. 10 ನೇ ತರಗತಿಯವರೆಗೆ ಅವರು ಉತ್ತಮ ಶ್ರೇಣಿಗಳನ್ನು ಪಡೆಯಲು ಹೆಚ್ಚಿನ ಒತ್ತು ನೀಡುತ್ತಿದ್ದರು. ನಾನು ಕ್ಯಾಲಿಫೋರ್ನಿಯಾದ ಲಿವಿಂಗ್ ವಿಸ್ಡಮ್ ಪ್ರೌಢಶಾಲೆಯಲ್ಲಿ ನನ್ನ 11 ಮತ್ತು 12 ನೇ ತರಗತಿ ಕಲಿತೆ. ಅಲ್ಲಿ, ನನ್ನ ಶಿಕ್ಷಕರು ನಾನು ಕಲಿಕೆಯಲ್ಲೆನ ಆನಂದವನ್ನು ಅನುಭವಿಸಬೇಕು ಎಂದು ಬಯಸುತ್ತಿದ್ದರು. ಅವರು ಯಾವಾಗಲೂ ತಮ್ಮ ತರಗತಿಗಳನ್ನು ತನ್ಮಯತೆಯಿಂದ ಆಲಿಸುವುದೇ ಶಿಕ್ಷಣವೆಂಬಂತೆ ಪಾಠ ಮಾಡುತ್ತಿದ್ದರು. ನಾನು 12ನೇ ತರಗತಿಯಲ್ಲಿ ಓದುವ ವೇಳೆಗೆ ಕೋವಿಡ್‌ನಿಂದಾಗಿ ನಾನು ಭಾರತಕ್ಕೆ ಹಿಂತಿರುಗಿದರೂ ಎಲ್ಲರ ಆನ್‌ಲೈನ್‌ನಲ್ಲಿ ತರಗತಿಗಳಲ್ಲಿ ಭಾಗವಹಿಸಲು ಮತ್ತು ಬೆರೆಯಲು ಸಾಕಷ್ಟು ಚಟುವಟಿಕೆಗಳಿರುತ್ತಿದ್ದವು. ನಾವು ಯಾರೂ ಕೂಡ ಅಧ್ಯಯನಕ್ಕಷ್ಟೇ ನಮ್ಮನ್ನು ಸೀಮಿತ ಗೊಳಿಸಿಕೊಂಡಿರದೆ ಇದ್ದುದರಿಂದ, ಯಾವುದೇ ಒತ್ತಡಕ್ಕೊಳಗಾಗದೆ ಕಲಿಕೆಯನ್ನು ಆನಂದಿಸಲು ಮತ್ತು ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಪಡೆಯಲು ನನಗೆ ಸಹಾಯವಾಗಿದೆ ಎಂದು ನಾನು ಭಾವಿಸುತ್ತೇನೆ.

4. ನಾನು ಕಾಲೇಜು ವಿದ್ಯಾಭ್ಯಾಸದಲ್ಲಿ ಉತ್ತಮ ಸಾಧನೆ ಮಾಡುವುದೇ ನನ್ನ ಮುಂದಿನ ಗುರಿ. ಇದು ನನ್ನ ಆಸಕ್ತಿಯ ವೃತ್ತಿಜೀವನಕ್ಕೆ ಅನುಗುಣವಾಗಿರುವುದರಿಂದ, ನಾನು ಚೆನ್ನಾಗಿ ಓದಬಯಸುತ್ತೇನೆ. ಆದಷ್ಟೂ ನೇರ ಅನುಭವವನ್ನು ಗಳಿಸಿ ಮತ್ತಷ್ಟು ಪ್ರಗತಿ ಸಾಧಿಸಲು ಬಯಸುತೇನೆ. ಅದಕ್ಕಾಗಿ ನಾನು ಓದಿದ ಶಾಲೆಯಲ್ಲಿ ಅರೆ–ಕಾಲಿಕ ಉದ್ಯೋಗಕ್ಕೆ ಸೇರಿದ್ದೇನೆ. ಇದರಿಂದ ನಾನು ಸಂವಹನ ಕೌಶಲ್ಯದ ಜೊತೆಗೆ ಹೊಸ ವಿಷಯಗಳನ್ನು ಕಲಿಯುತ್ತೇನೆಂಬ ವಿಶ್ವಾಸವಿದೆ. ವೃತ್ತಿಜೀವನದ ವಿಷಯದಲ್ಲಿ ನನಗೆ ಸಹಾಯಕವಾಗುವ ವಿಷಯಗಳನ್ನು ಕಾಲೇಜಿನಲ್ಲಿ ಆಯ್ಕೆ ಮಾಡಿಕೊಂಡಿದ್ದೇನೆ.

5. ಕಿರಿಯರಿಗೆ ನನ್ನ ಸಲಹೆಯೆಂದರೆ ಶಿಕ್ಷಣವನ್ನು ತುಂಬಾ ಗಂಭೀರವಾಗಿ ತೆಗೆದುಕೊಳ್ಳಬೇಡಿ. ನಿಮ್ಮ ಪೋಷಕರು "ಟಾಪರ್" ಆಗಲು ಬಯಸಬಹುದಾದರೂ, ಯಾವುದೇ ಪ್ರಾಯೋಗಿಕ ಕೌಶಲ್ಯಗಳನ್ನು ಕಲಿಯಲು ಇದು ನಿಮಗೆ ಸಹಾಯ ಮಾಡುವುದಿಲ್ಲ. ಕಲಿಕೆಯನ್ನು ಆನಂದಿಸುವ ವಿಧಾನವನ್ನು ಕಂಡುಕೊಂಡರೆ, ನಿಮ್ಮ ವಿದ್ಯಾಭ್ಯಾಸದಲ್ಲಿ ಒಳ್ಳೆಯ ಸಾಧನೆ ಮಾಡಲು ನಿಮಗೆ ನೀವೇ ಸ್ಫೂರ್ತಿಯಾಗುವಿರಿ. ಹೊಸ ಹೊಸ ಚಟುವಟಿಕೆಗಳನ್ನು ಮಾಡುತ್ತ ನಿಮ್ಮಲ್ಲಿರುವ ಕೌಶಲ್ಯಗಳನ್ನು ಕಂಡುಕೊಳ್ಳಿ. ಆಗ ನೀವು ನಿಮ್ಮಲ್ಲಿನ ಪ್ರತಿಭೆಯನ್ನು ನೀವೇ ಗುರುತಿಸಿಕೊಳ್ಳುವಿರಿ.



**ಕುಮಾರಿ ನಿತ್ಯಶ್ರೀ ಎ.,** 12ನೇ ತರಗತಿ, 95%, ಶ್ರೀಮತಿ ರೂಪಾಶ್ರೀ ಮತ್ತು ಡಾ. ಅಶೋಕ ಎಂ.ಈಟಿ. ಅವರ ಪುತ್ರಿ.

1. ಹೌದು, ನನ್ನ ಫಲಿತಾಂಶ ನನಗೆ ಬಹಳ ತೃಪ್ತಿ ತಂದು ಕೊಟ್ಟಿದೆ. ನನ್ನ ಮತ್ತು ನನ್ನ ಪೋಷಕರ ನಿರೀಕ್ಷೆಗನುಣುವಾಗಿ ನನಗೆ ಅಂಕಗಳು ಬಂದಿವೆ.

2. ನನ್ನನ್ನು ಅರ್ಥೈಸಿಕೊಳ್ಳುವ ಮತ್ತು ಪ್ರೋತ್ಸಾಹಿಸಿವ ಪೋಷಕರನ್ನು ಕರುಣಿಸಿರುವುದಕ್ಕೆ ದೇವರಿಗೆ ನಾನು ಕೃತಜ್ಞಳಾಗಿದ್ದೇನೆ. ನನ್ನ ತಾಯಿ ಮತ್ತು ತಂದೆ ಇಬ್ಬರೂ ಶೈಕ್ಷಣಿಕವಾಗಿ ಯಾವುದೇ ರೀತಿಯ ಒತ್ತಡಕ್ಕೆ ಒಳಗಾಗದ ಹಾಗೆ ನೋಡಿಕೊಂಡರು. ತರಗತಿಗಳೆಲ್ಲವೂ ಆನ್‌ಲೈನ್‌ನಲ್ಲಿ ನಡೆಯುತ್ತಿದ್ದಾಗ, ನನ್ನ ಆತ್ಮವಿಶ್ವಾಸ ಕುಗ್ಗಿದಾಗ, ಪ್ರತಿಯೊಂದು ಸಂದರ್ಭದಲ್ಲೂ ನನ್ನ ನೆರವಿಗೆ ನಿಂತರು ಮತ್ತು ಈ ರೀತಿ ಒಳ್ಳೆಯ ಫಲಿತಾಂಶವನ್ನು ಪಡೆಯಲು ಪ್ರೋತ್ಸಾಹಿಸಿದರು.

3. ನನ್ನ ಎಲ್ಲಾ ಪಠ್ಯ ಮತ್ತು ಪಠ್ಯೇತರ ಸಾಧನೆಗಳಿಗೆ ನನ್ನ ಶಾಲೆಗೆ ಮತ್ತು ಶಿಕ್ಷಕರಿಗೆ ಸಂಪೂರ್ಣವಾಗಿ ನಾನು ಋಣಿಯಾಗಿದ್ದೇನೆ. ನಾನು ಏನು ಸಾಧಿಸಿದ್ದೇನೆಯೋ ಅದಕ್ಕೆ ಮೂಲ ಕಾರಣ ನನ್ನ ಶಾಲೆಯು ಮೊದಲಿನಿಂದಲೂ ನನ್ನಲ್ಲಿ ಬೆಳೆಸಿದ ಮೂಲಭೂತ ಮೌಲ್ಯಗಳು. ನನ್ನ ಎಲ್ಲಾ ಶಿಕ್ಷಕರೂ ನನ್ನ ಬಗ್ಗೆ ತುಂಬಾ ಹೆಮ್ಮೆ ಹಾಗೂ ಸಂತೋಷಪಡುತ್ತಿದ್ದರು. ಅವರು ಯಾವಾಗಲೂ ನನಗೆ ಒಳ್ಳೆಯದನ್ನು ಬಯಸುತ್ತಾರೆ ಮತ್ತು ಇಲ್ಲಿಯವರೆಗೆ ನನ್ನ ಶಾಲಾ ಜೀವನದ ಭಾಗವಾಗಿರುವ ಪ್ರತಿಯೊಬ್ಬರಿಗೂ ಮತ್ತು ಶಿಕ್ಷಕರಿಗೂ ನಾನು ಕೃತಜ್ಞಳಾಗಿದ್ದೇನೆ.

4. ನನ್ನ ಆಸಕ್ತಿಯನ್ನವಲಂಬಿಸಿ ನಾನು ಚಲನಚಿತ್ರಗಳ ನಿರ್ಮಾಣ ವಿನ್ಯಾಸ, ಕಲೆ, ನಿರ್ದೇಶನ ಮತ್ತು ಛಾಯಾಗ್ರಹಣ ಕ್ಷೇತ್ರದಲ್ಲಿ ಕೆಲಸ ಮಾಡಲು ಇಚ್ಛಿಸುತ್ತೇನೆ. ಭಾರತೀಯ ಮನರಂಜನೆ / ಚಲನಚಿತ್ರೋದ್ಯಮದಲ್ಲಿನ ಬ್ಲಾಕ್‌ಬಸ್ಟರ್‌ಗಳ ತೆರೆಮರೆಯಲ್ಲಿದ್ದುಕೊಂಡು ಸಾಧನೆ ಮಾಡಿ ನನ್ನನ್ನು ಗುರುತಿಸಿಕೊಳ್ಳಬೇಕೆಂಬುದು ನನ್ನ ಗುರಿ.

ಈಗ ನಾನು ದೆಹಲಿ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ (ಡಿ.ಟಿ.ಯು) ನನ್ನ ಪದವಿ ಕೋರ್ಸ್ ವ್ಯಾಸಂಗ ಮಾಡುತ್ತಿದ್ದು ಬ್ಯಾಚುಲರ್ ಆಫ್ ಡಿಸೈನ್ ವಿದ್ಯಾರ್ಥಿಯಾಗಿದ್ದೇನೆ. ಕಠಿಣ ಪರಿಶ್ರಮ ಮತ್ತು ಸ್ಥಿರತೆಯಿಂದ, ನಾನು ಕಂಡ ಕನಸನ್ನು ಸಾಧಿಸಲು ನಾನು ಬಯಸುತ್ತೇನೆ.

5. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದು ಬಣ್ಣದ ಚಿಟ್ಟೆಯೆಂದು ನಾವು ಭಾವಿಸಿದಲ್ಲಿ ಆ ಒಂದೊಂದು ಬಣ್ಣದ ಚಿಟ್ಟೆಯೂ ಅದರದೇ ಆದ ಬಣ್ಣ ಹಾಗೂ ಕಂಪನ/ಮಿಡಿತವನ್ನು ಒಳಗೊಂಡಿರುತ್ತದೆ. ಆದ್ದರಿಂದ ನಮ್ಮ ಸಾಮರ್ಥ್ಯವನ್ನರಿತುಕೊಂಡು ಆದಷ್ಟು ಎತ್ತರೆತ್ತರಕ್ಕೆ ಹಾರಲು ಪ್ರಯತ್ನಿಸಬೇಕು.ಹಾಗೆಯೇ ನಿಮ್ಮ ಸಾಮರ್ಥ್ಯದ ಬಗ್ಗೆ ಎಂದಿಗೂ ನೀವು ಸಂದೇಹಿಸಬೇಡಿ. ಯಾವಾಗಲೂ ನಿಮ್ಮ ಹಿಂಜರಿಕೆಗೆ ಕಾರಣವಾಗುವ ಹೊಸ ವಿಷಯಗಳಲ್ಲೇ ಸಾಧಿಸಲು ಪ್ರಯತ್ನಿಸಿ ! ಇಂಜಿನಿಯರ್‌ಗಳು ಮತ್ತು ವೈದ್ಯರುಗಳು ಮಾತ್ರವೇ ನಮ್ಮ ದೇಶದ ಅಗತ್ಯವಲ್ಲ.ಅದಕ್ಕೂ ಮಿಗಿಲಾದ ವಿಷಯಗಳು ಬಹಳಷ್ಟು ಇವೆ.



**ಕುಮಾರಿ ಲಕ್ಷಿತಾ ಜೈನ್,** 10ನೇ ತರಗತಿ, 97.40%, ಶ್ರೀಮತಿ ಬಬಿತಾ ಜೈನ್ ಮತ್ತು ಶ್ರೀ ಜಿನೇಂದ್ರ ಜೈನ್ ಅವರ ಪುತ್ರಿ.

1. ನಾನು ಗಳಿಸಿರುವ ಅಂಕಗಳು ನನಗೆ ಆತ್ಮತೃಪ್ತಿ ತಂದುಕೊಟ್ಟಿವೆ.

2. ನನ್ನ ಪೋಷಕರು ಮತ್ತು ನನ್ನ ಕುಟುಂಬದ ಸದಸ್ಯರು ನನ್ನ ಬಗ್ಗೆ ತುಂಬಾ ಹೆಮ್ಮೆ ಹಾಗೂ ಸಂತೋಷಪಟ್ಟಿದ್ದಾರೆ. ಅವರು ನನ್ನ ಸಾಧನೆಯನ್ನು ಕೊಂಡಾಡಿದರು, ಭವಿಷ್ಯದ ಯಶಸ್ಸಿಗೆ ನನ್ನನ್ನು ಪ್ರೇರೇಪಿಸಿದ್ದಾರೆ.

3. ನನ್ನ ಎಲ್ಲಾ ಶಿಕ್ಷಕರು ನನಗೆ ಬಹಳಷ್ಟು ಸಹಾಯ ಮಾಡಿದರು ಮತ್ತು ಪರೀಕ್ಷೆಗಳಲ್ಲಿ ಉತ್ತಮ ಅಂಕಗಳನ್ನು ಗಳಿಸಲು ನನಗೆ ಮಾರ್ಗದರ್ಶನ ನೀಡಿದರು.

4. ನನ್ನ ಮುಂದಿನ ಗುರಿ ಯು.ಪಿ.ಎಸ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಮತ್ತು ನನ್ನ ದೇಶಕ್ಕೆ ಸೇವೆ ಸಲ್ಲಿಸುವುದು. ನಾನು ಕಷ್ಟಪಟ್ಟು ಕೆಲಸ ಮಾಡುತ್ತಿದ್ದೇನೆ ಮತ್ತು ನನ್ನ ಗುರಿಯತ್ತ ಸಾಗುತ್ತಿದ್ದೇನೆ.

5. ನನ್ನ ಸಂಕಲ್ಪವೇ ನನ್ನ ಯಶಸ್ಸಿನ ಕೀಲಿಯಾಗಿದೆ. ನನ್ನ ಸಂಕಲ್ಪದಿಂದ ಕಷ್ಟಪಟ್ಟು ಕೆಲಸ ಮಾಡಿ ಮತ್ತು ಯಶಸ್ಸು ಖಂಡಿತವಾಗಿಯೂ ನಿಮ್ಮದಾಗುತ್ತದೆ. ವೈಫಲ್ಯವು ಕಲಿಕೆಯ ಮೊದಲ ಪ್ರಯತ್ನವಾಗಿದೆ, ಆದ್ದರಿಂದ ನೀವು ವಿಫಲವಾದರೆ ಎಂದಿಗೂ ನಿಲ್ಲಿಸಬೇಡಿ. ಕಷ್ಟಪಟ್ಟು ಕೆಲಸ ಮಾಡಿ ಇದರಿಂದ ನಿಮ್ಮ ಭವಿಷ್ಯದಲ್ಲಿ ನೀವು ಎಂದಿಗೂ ವಿಷಾದಿಸುವುದಿಲ್ಲ. ನಿಮ್ಮ ಕೈಲಾದಷ್ಟು ಪ್ರಯತ್ನ ಮಾಡಿ ಮತ್ತು ನಿಮ್ಮ ಪ್ರಯತ್ನದ ಮೇಲೆ ನಂಬಿಕೆ ಇಡಿ.



**ಕುಮಾರಿ ಸಿಂಚನಾ,** 10ನೇ ತರಗತಿ, 95%, ಶ್ರೀಮತಿ ಸುನಿತಾ ಮತ್ತು ಶ್ರೀ ಎಸ್. ರಾಘವೇಂದ್ರ ಅವರ ಪುತ್ರಿ.

ದೆಹಲಿ ಕರ್ನಾಟಕ ಸಂಘದ ಮುಖವಾಣಿ ಅಭಿಮತ ಸಂಪಾದಕರು ಮತ್ತು ಅದರ ಹಿಂದಿರುವ ಎಲ್ಲಾ ಕಾರ್ಯಕರ್ತರಿಗೆ ಹಾಗೂ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರು ಮತ್ತು ಪದಾಧಿಕಾರಿಗಳಿಗೆ ನನ್ನ ತುಂಬು ಹೃದಯದ ಧನ್ಯವಾದಗಳು. ಈ ವಿದ್ಯಾರ್ಥಿ ವೇತನ ವಿತರಣಾ ಕಾರ್ಯಕ್ರಮದಿಂದ ನನಗೂ, ಎಲ್ಲಾ ವಿದ್ಯಾರ್ಥಿಗಳಿಗೂ ಇನ್ನಷ್ಟು ಆಸಕ್ತಿಯಿಂದ ಓದಲು ಪ್ರೋತ್ಸಾಹ ನೀಡಿದಂತಾಗಿದೆ. ಅದಕ್ಕಾಗಿ ಎಲ್ಲಾ ವಿದ್ಯಾರ್ಥಿಗಳ ಪರವಾಗಿ ಈ ಕಾರ್ಯಕ್ರಮದಲ್ಲಿ ಕೈ ಜೊಡಿಸಿದ ನಿಮಗೆಲ್ಲರಿಗೂ ಅನಂತಾನಂತ ಧನ್ಯವಾದಗಳು.

1. ಖಂಡಿತವಾಗಿ ಇನ್ನೂ ಹೆಚ್ಚಿನ ಅಂಕಗಳನ್ನು ನೀರಿಕ್ಷಿಸಿದ್ದೆ, ಹಾಗಾಗಿ ಈಗ ಪಡೆದ ಅಂಕಗಳಿಂದ ನನಗೆ ತೃಪ್ತಿ ಇಲ್ಲ. ಆದರೆ ಸಮಾಧಾನ, ಸಂತೋಷ ಇದೆ.

2. ನನ್ನ ಪೋಷಕರು ಜೊತೆಗೆ ನನ್ನ ಅಕ್ಕ ನನಗೆ ಎಲ್ಲಾ ರೀತಿಯಿಂದಲೂ ಸಹಕರಿಸಿ ಪ್ರೊತ್ಸಾಹ ನೀಡುತ್ತಿದ್ದರು. ನನ್ನ ಜೊತೆಗಿದ್ದು ಧೈರ್ಯವನ್ನು, ಆತ್ಮ ವಿಶ್ವಾಸವನ್ನು ತುಂಬುತ್ತಿದ್ದರು. ಅವರು ಪ್ರತಿ ಹೆಜ್ಜೆಯಲ್ಲಿಯೂ ನನಗೆ ಬೆನ್ನೆಲುಬಾಗಿ ನಿಂತಿದ್ದರಿಂದ ನಾನು ಇಷ್ಟರಮಟ್ಟಿಗೆ ('ಸಾಧನೆ' ತುಂಬ ದೊಡ್ಡ ಪದ ಆಗುತ್ತೆ) ಅಂಕಗಳನ್ನು ಗಳಿಸಲು ಸಾಧ್ಯವಾಯಿತು.

3. ನಾನು ಆನಂದ್‌ನಿಕೇತನ್‌ನಲ್ಲಿರುವ ಮೌಂಟ್ ಕಾರ್ಮಲ್ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದೇನೆ. ಕೋವಿಡ್ ಮಹಾಮಾರಿ ಇದ್ದಂತಹ ಸಮಯದಲ್ಲಿ ಕೂಡ ಶಾಲೆಯವರು ಆನ್‌ಲೈನ್ ತರಗತಿಗೆ ಬೇಕಾದ ಎಲ್ಲಾ ಅನುಕೂಲಗಳನ್ನು ಮಾಡಿ ತರಗತಿಗಳು ಮತ್ತು ಪರೀಕ್ಷೆಗಳು ತಪ್ಪದೆ ನಡೆಯುವಂತೆ ನೋಡಿಕೊಂಡರು. ನನ್ನ ಶಿಕ್ಷಕರು ತುಂಬಾ ಸಹಾಯ ಮಾಡಿದ್ದಾರೆ. ನನ್ನ ಸಂಶಯವನ್ನು ಸಮಾಧಾನವಾಗಿ ಪರಿಹರಿಸುತ್ತಿದ್ದರು. ಅವರೆಲ್ಲರ ಮಾರ್ಗದರ್ಶನ, ಸಹಕಾರ, ಪ್ರೋತ್ಸಾಹದಿಂದಾಗಿ ನಾನು ಇಷ್ಟು ಅಂಕಗಳನ್ನು ಗಳಿಸಲು ಸಾಧ್ಯವಾಯಿತು.

4. ನಾನು ವೈದ್ಯಕೀಯ ಕ್ಷೇತ್ರದಲ್ಲಿ ನನ್ನ ವ್ಯಾಸಂಗವನ್ನು ಮುಂದುವರಿಸಲು ಇಚ್ಛಿಸುತ್ತೆನೆ. ಹಾಗಾಗಿ PCMB ವಿಷಯವನ್ನು ತೆಗೆದುಕೊಂಡಿದ್ದೆನೆ, ಹಾಗೆ ಅದಕ್ಕೆ ಬೇಕಾದ ತರಬೇತಿಯನ್ನು ಪಡೆಯುತ್ತಿದ್ದೇನೆ.

5. ನಾನು ಕಿರಿಯರಿಗೆ ಕಿವಿಮಾತು ಹೇಳುವಷ್ಟು ದೊಡ್ಡವಳಲ್ಲ, ಅಂತಹ ದೊಡ್ಡ ಸಾಧನೆ ಏನು ಮಾಡಿಲ್ಲ. ಇದು ಇನ್ನೂ ಮೊದಲ ಹೆಜ್ಜೆ ಅಷ್ಟೇ. ಪ್ರಾಮಾಣಿಕ ಪರಿಶ್ರಮ ಎಂದೂ ಒಳ್ಳೆಯ ಫಲ ಕೊಡುತ್ತದೆ. ಆದ್ದರಿಂದ ಫಲದ ಬಗ್ಗೆ ಯೋಚಿಸದೆ ಪ್ರಾಮಾಣಿಕವಾಗಿ ಪರಿಶ್ರಮದಿಂದ ಆಸಕ್ತಿ ಇಟ್ಟು ಓದಿ, ಅದರ ಜೊತೆಗೆ ನಿಮಗೆ ಆಸಕ್ತಿ ಇರುವ ಕ್ಷೇತ್ರದಲ್ಲಿ (ಕ್ರೀಡೆ, ಕಲೆ, ಸಾಹಿತ್ಯ, ನಾಟಕ ಇತ್ಯಾದಿ) ಮುಂದುವರೆಯಿರಿ ಅಂತ ಮಾತ್ರ ಹೇಳಬಲ್ಲೆ.

**(ವಿದ್ಯಾರ್ಥಿಗಳ ಸಂದರ್ಶನ ಮುಂದುವರಿಯುವುದು)**

# ಮನುಷ್ಯ ಸಮಾಜದಲ್ಲಿ ಬದುಕಲು ಮತ್ತು ಭಾವನೆಯ ಅಭಿವ್ಯಕ್ತತತೆಗೆ ಭಾಷೆಯೇ ಮೂಲ ವಾಹನ ಹಾಗೂ ಸಾಧನ -ಐ.ಎ.ಎಸ್. ಅಧಿಕಾರಿ ಡಾ. ಅಶೋಕ ಎಂ. ದಳವಾಯಿ




"ಭೂಮಿಯ ಮೇಲೆ ಬದುಕಿರುವ ಹಲವಾರು ಜಲಚರಗಳಲ್ಲಿ ಮಾನವ ತನ್ನ ಅಧಿಪತ್ಯವನ್ನು ಹೊಂದಿದ್ದು ಸಮಾಜದಲ್ಲಿ ಬದುಕಲು ಮತ್ತು ತನ್ನ ಭಾವನೆಯನ್ನು ಅಭಿವ್ಯಕ್ತಪಡಿಸಲು ಭಾಷೆಯೇ ಮೂಲ ವಾಹನ ಹಾಗೂ ಸಾಧನವೂ ಆಗಿದೆ ಎಂದು ಭಾರತ ಸರ್ಕಾರದ ಕೃಷಿ ಮತ್ತು ರೈತ ಕಲ್ಯಾಣ ಮಂತ್ರಾಲಯದಲ್ಲಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಹಿರಿಯ ಐ.ಎ.ಎಸ್. ಅಧಿಕಾರಿಗಳಾದ ಡಾ. ಅಶೋಕ ಎಂ. ದಳವಾಯಿ ಅವರು ಹೇಳಿದರು. ದೆಹಲಿ ಘಟಕದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೂಲಕ ಇದೇ ಫೆ. 25ರ ಶುಕ್ರವಾರ ಆಯೋಜಿಸಿದ್ದ 15ನೇ ಆನ್‌ಲೈನ್ ಕಾರ್ಯಕ್ರಮದಲ್ಲಿ "ಅಂತರರಾಷ್ಟ್ರೀಯ ಮಾತೃಭಾಷಾ ದಿನ" ಸಂದರ್ಭ "ಕನ್ನಡ ಸಾಹಿತ್ಯದ ಆಯ್ದ ಪದ್ಯ ರೂಪಗಳು" ವಿಷಯದ ಮೇಲೆ ಮಾತನಾಡಿದ ಅವರು ಒಂದು ಭಾಷೆ ಮೂಲಭೂತವಾದ ತನ್ನೆಲ್ಲ ಲಕ್ಷಣಗಳನ್ನು ಪಡೆಯಲು ಸಾವಿರಾರು ವರ್ಷಗಳು ಬೇಕು. ಆನಂತರ ಸಾಹಿತ್ಯ, ಛಂದಸ್ಸು, ವ್ಯಾಕರಣಗಳ ಲಕ್ಷಣದೊಂದಿಗೆ ಬೆಳೆದುಬರುವುದು ಸಾಧ್ಯ. ಈ ಹಿನ್ನೆಲೆ ನಮ್ಮ ತಾಯ್ನುಡಿಯಾದ ಕನ್ನಡ ಭಾಷೆಯನ್ನು ಮುಂಬರುವ ಪೀಳಿಗೆಗೆ ಕೊಂಡೊಯ್ಯುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಾವು ಭಾಷೆಯನ್ನು ಕಳೆದುಕೊಂಡರೆ ನಮ್ಮ ಸಂಸ್ಕೃತಿ, ಸಂಸ್ಕಾರ ಎಲ್ಲವು ನಾಶವಾದಂತೆಯೆ ಎಂದರು.

ಭಾಷೆಗೆ ಕೇವಲ ಒಂದು ದಿನದ ಆಚರಣೆ ಸಾಕಾಗುವುದಿಲ್ಲ. ಸಮಾಜ ಸುಧಾರಕರಾದ ಭಗವಾನ್ ಬುದ್ಧ, ಮಹಾವೀರರು ಕೂಡ ಪ್ರಾಕೃತ ಭಾಷೆಯ ಬಳಕೆಯೊಂದಿಗೆ ಸಮಾಜದ ಜನರಿಗೆ ತಮ್ಮ ಚಿಂತನೆಯನ್ನು ಪಸರಿಸಿದರು. ಪ್ರಸಿದ್ಧ ಅಶೋಕ ಚಕ್ರವರ್ತಿ ಕೂಡ ಆಗಿನ ಕಾಲದಲ್ಲಿ ಆಡಳಿತದ ಸುಧಾರಣೆಗಾಗಿ ಜನ ಸಾಮಾನ್ಯರ ಭಾಷೆಯನ್ನೇ ಬಳಸುತ್ತಿದ್ದರು. 12ನೇ ಶತಮಾನದ ವಚನಕಾರರು, ಜನಪದರು, ದಾಸರು, ಕೀರ್ತನಕಾರರು ಜನಸಾಮಾನ್ಯರಾಡುವ ಭಾಷೆಯನ್ನು ಸಮಾಜದ ಬದಲಾವಣೆಗೆ, ಸಮಾನತೆಯ ಸ್ಥಾಪನೆಗೆ ಮತ್ತು ತಮ್ಮ ವಿಚಾರ ಧಾರೆಗಳನ್ನು ಪ್ರಚುರಪಡಿಸಲು ಬಳಸಿಕೊಂಡರು. ಜನಸಾಮಾನ್ಯರ ಭಾಷೆಯಾದ ಕನ್ನಡವನ್ನು ಹೆಚ್ಚೆಚ್ಚಾಗಿ ಬಳಸುವ ಮೂಲಕ ಅದನ್ನು ಒಂದು ಪ್ರಬುದ್ಧ ಭಾಷೆಯನ್ನಾಗಿಸುವ ಗುರುತರ ಹೊಣೆ ನಮ್ಮೆಲ್ಲರ ಮೇಲಿದೆ ಎಂದು ಹಲವು ನಿದರ್ಶನಗಳ ಮೂಲಕ ವ್ಯಕ್ತಪಡಿಸುತ್ತಾ ತಮ್ಮ ವಿಚಾರಗಳನ್ನು ಹಂಚಿಕೊಂಡರು.

ಹಿರಿಯ ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಮಾತನಾಡಿ, ಕನ್ನಡ ಭಾಷೆಯ ಪ್ರಾಚೀನತೆಯ ಹಿನ್ನೆಲೆ ತಿಳಿಸಿದರು. ಕನ್ನಡವು ಮಧ್ಯಕಾಲದಲ್ಲಿಯೇ ಅಂತರರಾಷ್ಟ್ರೀಯ ಸಂಬಂಧವನ್ನು ಗ್ರೀಕರೊಂದಿಗೆ ಹಾಗೂ ಮಧ್ಯಪ್ರಾಚ್ಯದ ದೇಶಗಳೊಂದಿಗೆ ಬೆಳೆಸಿತ್ತು. ರಾಜಮನೆತನದಿಂದ ಬರೆಸಲ್ಪಟ್ಟ ಕನ್ನಡದ ಮೊದಲ ಶಾಸನ ಹಲ್ಮಿಡಿ ಶಾಸನ. ಹಲ್ಮಿಡಿ ಶಾಸನವು ಸಂಸ್ಕೃತದಿಂದ ಮೊದಲು ಪ್ರಾರಂಭವಾದ ಶಾಸನ, ಆ ಕಾಲದಲ್ಲಿ ಕನ್ನಡವು ಇನ್ನೂ ಬರವಣಿಗೆಗೆ ಒಗ್ಗಿಕೊಳ್ಳದಂಥ ಸ್ಥಿತಿಯಲ್ಲಿತ್ತು. ಈ ಶಾಸನದಲ್ಲಿ ಇಪ್ಪತ್ತೈದು ಕನ್ನಡ ಪದಗಳು ಕಾಣಲ್ಪಡುತ್ತವೆ. ಕ್ರಿ.ಶ. 450ನೇ ಕಾಲದಲ್ಲಿ ಸಿಕ್ಕ ಕೃತಿ, ಎಂಟನೆ ಶತಮಾನದಲ್ಲಿ ಮೊದಲ ಕೃತಿ ಕವಿರಾಜಮಾರ್ಗ ಗುಲ್ಬರ್ಗ ಸಮೀಪದ ಮಾಳಖೇಡದಲ್ಲಿ ದೊರೆಯುತ್ತದೆ. ಈ ಅವಧಿಯ ನಡುವೆ ಬಂದಂತಹ ಜಾನಪದ ಛಂದಸ್ಸಿನ ಆರನೇಯ ಶತಮಾನದ ಕಪ್ಪೆ ಅರಭಟ್ಟನ ಶಾಸನವು ಕೂಡ ಕನ್ನಡ ದೇಶೀಯ ಸಂಸ್ಕೃತಿಯ ಗಾಢ ಪ್ರಭಾವವನ್ನು ಎತ್ತಿ ತೋರಿಸಿದೆ. ಕಾವೇರಿಯಿಂದಮಾ "ಗೋದಾವರಿವರಮಿರ್ದ ನಾಡದಾ ಕನ್ನಡದೊಳ್" ಎಂಬಂತಿದ್ದ ಕನ್ನಡನಾಡು ಮಹಾರಾಷ್ಟ್ರದ ಗೋದಾವರಿ ನದಿಯವರೆಗೆ 27 ಕಡೆ ಚೂರು ಚೂರಾಗಿದ್ದ ಕನ್ನಡನಾಡನ್ನು ನಮ್ಮ ಹಿರಿಯರು ಹೋರಾಟ ಮಾಡಿ ಕರ್ನಾಟಕವೆಂದು ಹೆಸರಿಟ್ಟಿದ್ದಾರೆ. ಕನ್ನಡ ಭಾಷೆಯ ಮಾತನಾಡುವ ಧಾಟಿ ಪ್ರತಿ ಜಿಲ್ಲೆಗೂ ಬೇರೆಬೇರೆಯಾಗಿದ್ದು, ಅದು ಧಾರವಾಡದಿಂದ ಕಲ್ಬುರ್ಗಿಯವರೆಗೆ ಬೇರೆ ಬೇರೆಯಾಗಿ ಹಬ್ಬಿದೆ. ಹಲವಾರು ಹಳೆಗನ್ನಡ ಕೃತಿ ಕಾವ್ಯಗಳ ನಿದರ್ಶನದ ಮೂಲಕ ತಮ್ಮ ವಿಚಾರಗಳನ್ನು ಹಂಚಿಕೊಂಡ ಅವರು, ಹಳಗನ್ನಡ ಮತ್ತು ಹೊಸಗನ್ನಡದ ನಡುವೆ ಅತಿದೊಡ್ಡ ಒಂದು ಬಿರುಕು ಉಂಟಾಗಿದ್ದು, ಭಾಷೆಯ ಆ ಎರಡು ನಿಟ್ಟುಗಳನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಾಗಿದೆ ಎಂದು ಮಾರ್ಮಿಕವಾಗಿ ವಿವರಿಸಿದರು.

ದೆಹಲಿಯ ಜೆ.ಎನ್.ಯು. ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಡಾ. ವಿಶ್ವನಾಥ ಅವರು ಮಾತನಾಡಿ, ಕನ್ನಡ ಭಾಷೆ ಶಬ್ದ, ಸಾಹಿತ್ಯ, ಒಗಟು ಇದು ಜಗತ್ತಿನ ಯಾವ ಭಾಷೆಯಲ್ಲೂ ಸಿಗುವುದಿಲ್ಲ. ಅಂತಹ ಒಂದು ಸುಂದರ, ಬಣ್ಣ, ಗಾಳಿ, ನೆಲ, ನೀರನ್ನು ಕನ್ನಡ ನಮಗೆ ನೀಡಿದೆ. ಹನ್ನೆರಡನೇ ಶತಮಾನದ ವಚನಕಾರರ ವಚನಗಳನ್ನು ನೆನಪಿಸಿಕೊಳ್ಳುತ್ತಾ **"ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ, ಇರುಳೆಲ್ಲ ನಡೆದನಾ ಸುಂಕಕ್ಕಂಜಿ ಕಳವೆಯೆಲ್ಲ ಹೋಗಿ ಬರಿಯ ಗೋಣಿ ಉಳಿಯಿತ್ತು ಅಳಿಮನದವನ ಭಕ್ತಿ ಇಂತಾಯಿತ್ತು ರಾಮನಾಥಾ?"** ಎಂದು ದೇವರ ದಾಸಿಮಯ್ಯನವರ ವಚನಗಳ ದೃಷ್ಟಾಂತದ ಮೂಲಕ ಭಕ್ತಿ ಮತ್ತು ಶ್ರಮದ ಮೌಲ್ಯಗಳನ್ನು ನಮ್ಮ ವಚನಕಾರರು ಕನ್ನಡ ಸಾಹಿತ್ಯದಲ್ಲಿ ತಿಳಿಸಿಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪರಿಷತ್ತಿನ ದೆಹಲಿ ಘಟಕದ ಕಾರ್ಯದರ್ಶಿಗಳಾದ ಶ್ರೀ ಕೆ.ಎಸ್. ಮೂರ್ತಿ ಅವರು ಮಾತನಾಡಿ, ಕನ್ನಡವನ್ನು ಉಳಿಸುವ, ಬೆಳೆಸುವ ನಿಟ್ಟಿನಲ್ಲಿ ಇನ್ನು ಹೆಚ್ಚು ಪ್ರಯತ್ನ ಮಾಡಬೇಕು, ಹೊರನಾಡು ಕನ್ನಡಿಗರು ತಮ್ಮ ಮಕ್ಕಳಿಗೆ ಕನ್ನಡ ಕಲಿಸುವ, ಮತ್ತು ಅವರಲ್ಲಿ ಕನ್ನಡ ಭಾಷೆಯ ಬಗ್ಗೆ ಆಸಕ್ತಿ ಗೌರವ ಹೆಚ್ಚಿಸುವ ಕೆಲಸ ಮಾಡಬೇಕು ಎಂದು ಸೂಚಿಸುತ್ತಾ, ತಮ್ಮ ದೆಹಲಿ ಕನ್ನಡಿಗರ ಜೊತೆ ಒಡನಾಟ ಹಾಗೂ ಜೀವನದ ಕೆಲವು ಅನುಭವಗಳನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ದೆಹಲಿ ಕನ್ನಡಿಗರಾದ ಶ್ರೀ ಎಸ್.ಆರ್. ವೀಣೇಶ್ (ಬಸವಣ್ಣನವರ ವಚನ) ಡಾ. ನವೀನ್ ಜೆ.ಹೆಚ್ (ಜಿ.ಪಿ. ರಾಜರತ್ನಂ ಅವರ ರತ್ನನ್ ಪದಗಳು) ಶ್ರೀ ಡಿವಿಎಸ್ ಮೂರ್ತಿ (ಮಂಕುತಿಮ್ಮನ ಕಗ್ಗ) ಶ್ರೀಮತಿ ರಾಜೇಶ್ವರಿ ಭಟ್ ಪುರಂದರದಾಸರ ಉಗಾಭೋಗ), ಶ್ರೀ ಶ್ರೀನಿವಾಸನ್ (ಪುರಂದರ ದಾಸರ ಕೀರ್ತನೆ) ಶ್ರೀಮತಿ ಆಶಾಲತಾ (ಕನಕದಾಸರ ಕೀರ್ತನೆ) ಡಾ. ಅಶೋಕ್ ಈಟಿ (ತತ್ವಪದ) ಶ್ರೀ ಶಿವಪ್ಪ ಎಂ (ಕುವೆಂಪು ಅವರ ಕವನ) ಶ್ರೀಮತಿ ಶಾಂತಲಾ ಕಿರಣ್ (ಕಂಸಾಳೆ ಪದ), ಶ್ರೀಮತಿ ಜಯಶ್ರೀ ಬಸವರಾಜು (ಬೇಂದ್ರೆ ಅವರ ಕವನ), ಡಾ. ತ್ಯಾಗರಾಜ್ (ದಲಿತ ಕವಿ ಸಿದ್ಧಲಿಂಗಯ್ಯ ಅವರ ಕವಿತೆ), ಶ್ರೀ ಶಿವಣ್ಣ ಎಲ್ (ಭಾವಗೀತೆ) ಮತ್ತು ಶ್ರೀಮತಿ ಮಾಲತಿ (ಚೆನ್ನವೀರ ಕಣವಿ ಅವರ ಕವಿತೆ) ಅವರು ಸುಂದರವಾಗಿ ತಮ್ಮ ಆಯ್ಕೆಯ ಪದ್ಯಗಳನ್ನು ಪ್ರಸ್ತುತಿಪಡಿಸಿ ಎಲ್ಲರ ಮನರಂಜಿಸಿದರು.

ಮೈಸೂರಿನಿಂದ ಭಾಗವಹಿಸಿದ ಗಾಯಕಿ ಶ್ರೀಮತಿ ಸುನಿತಾ ಚಂದ್ರಶೇಖರ್ ಅವರು ಬಸವಣ್ಣನವರ ವಚನ ಗಾಯನದ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು.

ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಡಾ. ಗುರುರಾಜ್ ಸಂಗೊಂಧಿಮಠ ಅವರು ಎಲ್ಲರನ್ನು ಸ್ವಾಗತಿಸಿದರು. ಪರಿಷತ್ತಿನ ಆಜೀವ ಸದಸ್ಯೆ ಶ್ರೀಮತಿ ಶಕುಂತಲಾ ಚಂದ್ರಶೇಖರ್ ಅವರು ಮುಖ್ಯ ಅತಿಥಿಗಳ ಪರಿಚಯ ಮಾಡಿಕೊಟ್ಟರು. ದೆಹಲಿ ಘಟಕದ ಉಪಾಧ್ಯಕ್ಷ ಶ್ರೀ ಪ್ರಭು ಪಾಟೀಲ್ ಅವರು ಕಾರ್ಯಕ್ರಮದ ಸಂಯೋಜಕರಾಗಿ ಸಹಕರಿಸಿದರು. ದೆಹಲಿ ಘಟಕದ ಅಧ್ಯಕ್ಷರಾದ ಶ್ರೀ ಎನ್.ಪಿ. ಚಂದ್ರಶೇಖರ ಅವರು ಕಾರ್ಯಕ್ರಮವನ್ನು ಸುಂದರವಾಗಿ ನಿರೂಪಿಸಿದರು. ಸದಸ್ಯ ಶ್ರೀ ರಾಜಕುಮಾರ್ ನೀಲೂರ ಅವರು ಎಲ್ಲರನ್ನು ವಂದಿಸಿದರು. ◻

*ಯಲ್ಲಾಲಿಂಗ ಕೊಪ್ಪದ*

# ಸರ್ವಜ್ಞನ ತ್ರಿಪದಿಗಳ ಸಂಸ್ಕೃತಿ

**(ವಿಶ್ವ ತಾಯ್ನುಡಿ ದಿನಾಚರಣೆ ಅಂಗವಾಗಿ ಅಚ್ಚಗನ್ನಡ ದೇಸೀ ಮಟ್ಟು ತ್ರಿಪದಿಯಲ್ಲಿ ಮೂಡಿ ಬಂದ ಸರ್ವಜ್ಞನ ವಚನ ಕುರಿತ ವಿಶೇಷ ಲೇಖನ)**

ಸರ್ವಜ್ಞ 16–17ನೇ ಶತಮಾನದ ತ್ರಿಪದಿಕಾರ ಈತನನ್ನು ವಚನಕಾರ ಎಂದು ಕರೆಯಲಾಗಿದೆ. ಈತ ಪುಷ್ಪದತ್ತನೆಂಬ ಗಣನಾಥನ ಅವತಾರ. ಇವನ ಹುಟ್ಟೂರು ಧಾರವಾಡ ಜಿಲ್ಲೆಯ ಅಂಬಲೂರು ಮಾಸೂರಿನ ಬಸವರಸ ಈತನ ತಂದೆ. ಕುಂಬಾರರ ಮಾಳಿ ಈತನ ತಾಯಿ. ತ್ರಿಪದಿ ರಚನೆಯ ಕೊನೆಯಲ್ಲಿ ಸರ್ವಜ್ಞ, ಪರಮಾರ್ಥ ಎಂಬ ಅಂಕಿತಗಳಿವೆ. ಸರ್ವಜ್ಞನ ರಚನೆಗಳು ಸರಳ, ಸೊಗಸು, ಅಚ್ಚಗನ್ನಡ ಮೂರು ಸಾಲಿನಲ್ಲಿ ಅಭಿವ್ಯಕ್ತಿಸಿರುವುದರಿಂದ ವಚನಗಳೆಂದು ಕನ್ನಡ ಸಾಹಿತ್ಯದಲ್ಲಿ ಕರೆಯಲಾಗಿದೆ. 17ನೇ ಶತಮಾನದ ಶಿವಶರಣರ ವಚನಗಳ ಹರವು, ವಸ್ತುನಿರೂಪಣೆ, ಜೀವನಮೌಲ್ಯಗಳು ತ್ರಿಪದಿಯ ರಚನೆಯಲ್ಲಿ ಹಾಸುಹೊಕ್ಕಾಗಿವೆ. ಸುಮಾರು ಎರಡು ಸಾವಿರಕ್ಕಿಂತಲೂ ಹೆಚ್ಚು ವಚನ, ತ್ರಿಪದಿಗಳನ್ನು ಈತ ರಚಿಸಿದ್ದಾನೆ. ಸರ್ವಜ್ಞನು ವೀರಶೈವಧರ್ಮಕ್ಕೆ ಸೇರಿದವನು. ಹಾಗಿದ್ದರೂ ಮತಾತೀತ, ದೇಶಾತೀತ. ಮಾನವಿತೆಯ ಸಾಕಾರಮೂರ್ತಿ. ಜಾತ್ಯತೀತ ವಿಶಾಲದೃಷ್ಟಿ, ಸಹೃದಯತೆ ಆತನದು. ನೇರನುಡಿ, ಸತ್ಯನಿಷ್ಠುರ ವ್ಯಕ್ತಿತ್ವ ನಿರ್ಭೀತ ವಿರಕ್ತ. ಸಮಾಜದ ರೋಗ ರುಜಿನಗಳನ್ನು ಬಯಲಿಗೆಳೆದು, ಅವುಗಳಿಗೆ ಚಿಕಿತ್ಸಕ ವಿಮರ್ಶೆ ಮಾಡುತ್ತಾ ನಾಡಿನಾದ್ಯಂತ ಸಂಚರಿಸಿದವನು. ಆಶುಕವಿಯಾದ ಈತ ಪರಿವ್ರಾಜಕ. ಅವನ ರಚನೆಗಳು ತ್ರಿಪದಿಯ ಸಾಲುಗಳು ಒಂದೊಂದು ಸ್ವಯಂ ಪೂರ್ಣವಾದ ಮುಕ್ತಕ, ಸುಭಾಷಿತ. ನೀತಿ, ತತ್ವ, ವಿವೇಕ, ವಿಡಂಬನೆಯ ಚಾಟಿ, ಅನುಭವದ ರಸಾಯನವಿದೆ. ಮಿತ್ರಸಂಹಿತಾ ಕಾಂತಸಂಹಿತಾ, ಪ್ರಭುಸಂಹಿತಾಗಳು ತ್ರಿಪದಿ ರಚನೆಯಲ್ಲಿ ಅಭಿವ್ಯಕ್ತಗೊಂಡಿವೆ. ಇವನ ರಚನೆಗಳಲ್ಲಿ ಕಾವ್ಯ ಗುಣಗಳಿವೆ. ಶೈಲಿಸರಳ, ಸುಲಭ, ಉಪಮೆ ದೃಷ್ಟಾಂತಗಳ ಮೂಲಕ ಜನಸಾಮಾನ್ಯರಿಗೆ ತಲುಪುವಂತೆ, ಅನುದಿನದ ವಿಷಯವನ್ನು ತ್ರಿಪದಿಗಳ ಮೂಲಕ ರಚಿಸಿದ್ದಾನೆ. ಜನಪದರ ಗಾದೆ, ಒಗಟುಗಳಂತೆ ಸರ್ವಜ್ಞನ ತ್ರಿಪದಿ ರಚನೆ ಮನೆಮಾತಾಗಿವೆ. ಸಂತಕವಿಗಳಾದ ತಮಿಳಿನ ತಿರುವಳ್ಳುರ್, ತೆಲುಗಿನ ವೇಮನನಂತೆ ಜನತೆಯಕವಿಯಾಗಿ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನ ಪಡೆದಿದ್ದಾನೆ. ಸರ್ವರೊಳಗೆ ಒಂದೊಂದು ನುಡಿಕಲಿತು ವಿದ್ಯೆಯ, ಸಾಹಿತ್ಯದ ಮೇರು ಪರ್ವತವಾಗಿದ್ದಾನೆ. ಸಮಾಜ, ಮಾನವರ ನಡೆ, ನುಡಿ, ಸ್ವಭಾವಗಳನ್ನು ಚಿತ್ರಿಸಿ, ಅವರು ಉತ್ತಮ ಸತ್ಪಾಥದಲ್ಲಿ ನಡೆಯುವಂತೆ ಉಪದೇಶಿತ ತ್ರಿಪದಿಗಳ ಮೂಲಕ ಚಾಟಿ ಬೀಸಿದ್ದಾನೆ. ಇಂದಿನ ಪರಿಸ್ಥಿತಿಯಲ್ಲಿ ತಂದೆ ತಾಯಿಗಳನ್ನು ಹೆತ್ತಮಕ್ಕಳು ಕಾಣುವ ಪರಿವಿಭಿನ್ನವಾಗಿದೆ. ಅಗೌರವ, ದ್ವೇಷ, ಕೋಪ, ತಾಪಗಳಿಂದ ಸಣ್ಣಸಣ್ಣ ಕಾರಣಕ್ಕೂ ಸಿಡಿಯುವ ಮಕ್ಕಳಿಗೆ ಉಪದೇಶದಂತೆ 'ತಾಯಿಗಿಂತ ಬಂದುವಿಲ್ಲ. ನಾಯಿಗಿಂತ ಪ್ರಾಣಿಯಿಲ್ಲ' ಎಂಬ ಗಾದೆ ಮಾತನ್ನು ನೆನಪಿಸಿ, ಹೆತ್ತವರೆಗೆ ಗೌರವ ಕೊಡುವುದರ ಜೊತೆಗೆ, ಪರಸ್ತ್ರೀಯರನ್ನು ತಾಯಿಯಂತೆ, ಸಹೋದರಿಯಂತೆ ಪ್ರೀತಿ, ಗೌರವಾದರಗಳಿಂದ ಕಾಣಬೇಕು ಎಂಬುದು ಆತನ ಆಶಯ. ಈತ ಜ್ಞಾನಿ, ವೈದ್ಯ, ರೈತ, ಕೃಷಿಕ, ಪಂಡಿತ, ಪಾಮರ, ಸನ್ಯಾಸಿ, ತ್ರಿಕಾಲ ಜ್ಞಾನಿ. ಈ ಜಗತ್ತು ಗೋಲಾಕಾರವಾಗಿದೆ. ಅದೇ ಒಂದು ಲಿಂಗ. ಸೃಷ್ಟಿಯ ಮೂಲ. ಲಿಂಗವುಳ್ಳವನ ಭೋಗದಿಂದ ಈ ಜಗತ್ತಿನ ಸೃಷ್ಟಿ, ಜನನವಾಗಿದೆ. ಅದು ಪುರುಷ, ಪ್ರಕೃತಿಯ ಸಂಮಿಲನದಿಂದ ದೇವರು ಒಬ್ಬನೆ ಒಂದೇ ದೈವಜಗಕೆ. ಸೂರ್ಯ ಚಂದ್ರ. ಕಡಲು, ಭೂಮಿ ಒಂದೆ. ದೈವದ, ದೇವರ ಹೆಸಲಿನಲ್ಲಿ ಅನಾಚಾರ ನಡೆಯಬಾರದು. ನಾವು ವಾಸಿಸುವ ಪರಿಸರದಲ್ಲಿ ದಾನ, ಧರ್ಮ, ಮಾನವತೆಗಳಿರಬೇಕು. ನೊಂದವರಿಗೆ ಸಮಾಜಮುಖಿಯಾದ ನೈಜ ಸ್ಥಾಯಿಭಾವ. ಸಮಚಿತ್ತದ ಕರುಣೆ ಬೇಕು. ದಾನಮಾಡುವಾಗ ಅಮೃತಸಮಾನವಾಗಿ ನೀಡಬೇಕು. ವಿಷಬೆರೆತ ಕೆಡಕನ್ನುಂಟುಮಾಡುವ ಮನಸ್ಸಿರಬಾರದು. ಪ್ರಕೃತಿ ದೈವದ ಮುಂದೆ ಮತ್ತ್ಯಾವದೈವ ಇಲ್ಲ. ಪ್ರಾಪಂಚಿಕಸೃಷ್ಟಿ, ಅದ್ಭುತವಾದುದು. ಪ್ರಾಕೃತಿಕ ಸಂಪತ್ತನ್ನು ಕುರಿತು ಸರ್ವಜ್ಞ ಹೀಗೆ ಹಾಡಿದ್ದಾನೆ, ತ್ರಿಪದಿ ಕಟ್ಟಿದ್ದಾನೆ.

ಚಿತ್ರವನು ನವಿಲಿನೊಳು ವಿಚಿತ್ರವನು ಗಗನದೊಳು
ಪತ್ರ ಪುಷ್ಪಗಳನು ವಿವಿಧ ವರ್ಣಗಳಿಂದ
ಚಿತ್ರಿಸಿದವರಾರು ಸರ್ವಜ್ಞ.

ಅಕಾಶದಲ್ಲಿ ಎಷ್ಟೊಂದು ಬಣ್ಣಗಳಿವೆ.
ಹೂಗಳಲ್ಲಿ ಎಷ್ಟೊಂದು ಬಣ್ಣಗಳಿವೆ. ಈ ಮಣ್ಣು,
ಪ್ರಕೃತಿಯ ಗುಣವೇ ವಿವಿಧ ಬಣ್ಣಗಳಿಂದ
ಕೂಡಿದ ಸಸ್ಯ ಶ್ಯಾಮಲೆ ಸಂಪತ್ತು.

ಇಂಗಿನೊಳು ನಾತವನು ತೆಂಗಿನೊಳಗೆಳನೀರ
ಭೃಂಗ ಕೋಕಿಲೆಯ ಕಂಠದೊಳು ಗಾಯನವ
ತುಂಬಿದವರಾರು ಸರ್ವಜ್ಞ.

ಎಷ್ಟೊಂದು ಪ್ರಾಕೃತಿಕ ಅದ್ಭುತಗಳಿವೆ. ಒಂದೇ ಭೂಮಿಯಲ್ಲಿ ಸೃಷ್ಟಿಯಾದ ನಿಂಬೆ ಹುಳಿ, ಮಾದಲಸಿಹಿ, ಬೇವುಕಹಿ, ಅಡಕೆ ಕಹಿ, ತೆಂಗು, ಬಾಳೆ, ಸೀಬೆ, ಚಕ್ಕೋತ, ಏಳನೀರು ಸಿಹಿ, ಅಕ್ಕಿಭತ್ತ ಸಿಹಿ, ರಾಗಿ ಸಿಹಿರಹಿತವಾದ ರೋಗ ನಿರೋಧಕ ಸವಿ. ಮರದ ಬಾಯ್ ಬೇರೆಂದು ನೀರುಣಿಸಿದರೆ. ಮೇಲೆ ಪಲ್ಲವಿಸಿತು ನೋಡಾ ಎಂದು ಅಲ್ಲಮರು ಹೇಳಿದ್ದಾರೆ. ಮಾನವರ ನಡೆ,ನುಡಿ, ಶುಚಿ ಸನ್ನಡತೆಗಳಿಂದ ಇರಬೇಕು. ಅದಿಲ್ಲದಿರೆ ಸಮಾಜ ಘಾತುಕ ಅವಗಡಗಳು ಸಂಭವಿಸುತ್ತವೆ. ಒಡಲೆಂಬ ಹುತ್ತಕ್ಕೆ ನುಡಿದ ನಾಲಿಗೆ ಸರ್ಪವಾಗಬಾರದು.

ಕಚ್ಚೆ ಕೈ ಬಾಯಿಗಳು ಇಚ್ಚೆಯಲಿಇದ್ದಿಹರೆ
ಅಚ್ಚುತನು ಅಪ್ಪ ಅಜನಪ್ಪ ಲೋಕದಲಿ
ನಿಶ್ಚಿಂತನಪ್ಪ ಸರ್ವಜ್ಞ.

ಪ್ರತಿಯೊಬ್ಬರು ಸನ್ನಡತೆಯಿಂದ ನಡೆದುಕೊಂಡು ಶಾಂತಿ, ಸಹಬಾಳ್ವೆಗೆ ಸಹಕಾರಿಯಾಗಬೇಕು. ಅಂದರೆ ಪ್ರಕೃತಿಯೇ ಎಲ್ಲೆಲ್ಲಿಯೂದೈವದ ರೂಪದಲ್ಲಿ ಇರುವ ಹಾಗೆ.

ಸಣ್ಣನೆಯ ಮಳಲೊಳಗೆ ನುಣ್ಣನೆ ಶಿಲೆಯೊಳಗೆ
ಬಣ್ಣಿಸುತ ಬರೆದ ಪಟದೊಳಗೆ ಇರುವಾತ
ತನ್ನೊಳಗೆ ಇರನೆ ಸರ್ವಜ್ಞ.

ಈ ಶರೀರ ಕ್ಷಣಿಕವಾದುದು. ಬಾಳುವೆ ಪರಸ್ಪರ ಸುಖ, ಸಂವೃದ್ಧಿ, ನೆಮ್ಮದಿಯಿಂದ ನಡೆಯಬೇಕು. ಇಲ್ಲವಾದಲ್ಲಿ ನಾಶ, ಅವನತಿಯ ಫಲಿತವೇ ಶಾಸ್ತಿ.

ಎಣ್ಣೆ ಬೆಣ್ಣೆಯ ಋಣವು ಅನ್ನ ವಸ್ತ್ರದ ಋಣವು
ಹೊನ್ನು ಹೆಣ್ಣಿನ ಋಣವು ತೀರಿದಾಕ್ಷಣದಿ
ಮಣ್ಣುಪಾಲೆಂದ ಸರ್ವಜ್ಞ.

ನಾವು ಎಷ್ಟು ಸಂಪಾದಿಸಿದರೂ, ಒಳಿತುಮಾಡಿದರೂ ಕೆಡುಕು ಮಾಡಿದರೂ, ಯಾವುದೇ ಪದವಿ ಅನುಭವಿಸಿದರೂ ಕಾಲನ ಕರೆಗೆ ಗೌರವ ಕೊಟ್ಟು ಹೋಗಲೇಬೇಕು. ಈ ಸತ್ಯ ಸುಡುತ್ತಿದ್ದರೂ ಅನ್ಯಾಯ, ವಂಚನೆ, ಕರಬುತನ ಜಾತಿ, ಭ್ರಷ್ಟಚಾರ ಏಕೆ ಮಾಡಬೇಕು. ಅನ್ಯಾಯ, ಅಪಮಾರ್ಗಗಳನ್ನು ಬಿಡಬೇಕು. ಸನ್ಮಾರ್ಗವೊಂದೇ ಬದುಕಿಗೆ ಬೆಳಕು.

ಉದಾರವಾಗಿ ಅನ್ನನೀಡಬೇಕು
ಅನ್ನವೇ ದೈವ, ಅನ್ನವೇ ಆಹಾರ.
ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು
ತನ್ನಂತೆ ಪರರ ಬಗೆದಡೇ ಕೈಲಾಸ
ಭಿನ್ನಾಣವಕ್ಕು ಸರ್ವಜ್ಞ.

ವಾಂಛೆಯ ಸೇಂಚನವಿರಬೇಕು. ನನ್ನಿನುಡಿಯಾಗಬೇಕು. ಪರೋಪಕಾರ, ದಾನಧರ್ಮ ಹದವರಿತು ನಡೆಯಬೇಕು. ಇಲ್ಲವಾದಲ್ಲಿ ನಮ್ಮ ದುಡಿಮೆ, ಸಂಪತ್ತು ಕಳ್ಳರ ಪಾಲಾಗುತ್ತದೆ. ಸೊಮಾರಿಗಳ ಸೊತ್ತಾಗುತ್ತದೆ. ಅದಕ್ಕೆ ಸರ್ವಜ್ಞನ ಎಚ್ಚರ ಈ ತ್ರಿಪದಿ.

ಉಳ್ಳಲ್ಲಿ ಉಣ್ಣಲಿಲ್ಲ ಉಳ್ಳಲ್ಲಿಉಡಲಿಲ್ಲ
ಉಳ್ಳಲ್ಲಿ ದಾನ ಕೊಡದವನ ಒಡವೆಯದು
ಕಳ್ಳಂಗೆ ನೃಪಗೆ ಸರ್ವಜ್ಞ.

ಇಂದಿನ ರಾಷ್ಟ್ರೀಯ ಬ್ಯಾಂಕುಗಳಲ್ಲಿ ಅಪಾರ, ನಗದು, ನಾಣ್ಯ, ಚಿನ್ನ ಬಿಟ್ಟು ವಾರಸುದಾರರೇ ಇಲ್ಲದೇ ತೀರಿಕೊಂಡವರ ಸಂಖ್ಯೆ ಅಪಾರ. ಬಹಳ ಮಂದಿಗೆ ಅವರು ಸಂಪಾದಿಸಿದ ಸಂಪತ್ತನ್ನು ಅನುಭವಿಸಲು ಆಗಿಲ್ಲ ಕಾಯಿಲೆ, ಕಸಾಲೆ ಬಂದು, ಸಾವಿನ ದವಡೆಗೆ ಸಿಕ್ಕು ಪರಿಪರಿಯ ಪರಿಭವಗಳನು ಅನುಭವಿಸುತ, ಕಾಲದಲ್ಲಿ ಕೊನೆಯಾಗುವ ಅನೇಕ ಸಂಗತಿಗಳಿವೆ. ಈ ಕೊರೋನ ಸಂದರ್ಭದಲ್ಲಿ ಈ ಮಾತು ಹೆಚ್ಚು ಪ್ರಸ್ತುತ. ಈ ಸಮಾಜದಲ್ಲಿ ಹೆಣ್ಣು–ಗಂಡು ಎರಡು ಬಹುಮುಖ್ಯ.

ಹೆಣ್ಣಿನಿಂದಲಿ ಇಹವು ಹೆಣ್ಣಿನಿಂದಲಿ ಪರವು
ಹೆಣ್ಣಿಂದ ಸಕಲ ಸಂಪದವು
ಹೆಣ್ಣೊಲ್ಲದಣ್ಣಗಳ್ಯಾರು ಸರ್ವಜ್ಞ.

ಆದರೂ ಹೆಣ್ಣು ಬಾಳುವೆಯ ಕಣ್ಣಾಗಬೇಕು ಹುಣ್ಣಾಗಬಾರದು. ಸಹಮತದೊಂದಿಗೆ ಇಬ್ಬರು ಬಾಳುವೆ ಮಾಡಬೇಕು. ಸದಾ ನೀರಿನ ಆಸರೆಯುಳ್ಳ ಗದ್ದೆಗಳು ಬಹು ಬೆಳಸಿಗೆ ಅನುಕೂಲ.

ಹಳ್ಳಗದ್ದೆಗಳಾಗಿ ಕುಳ್ಳವೆರಡೆತ್ತಾಗಿ
ಒಳ್ಳೆಯ ಗುಣದವಳು ಸೊಸೆಯಾದರೆ ಮನೆಗೆ
ಬಳ್ಳದಲಿ ಹೊನ್ನ ಸರ್ವಜ್ಞ.

ದುಡಿಮೆಗೆ ವ್ಯಕ್ತಿ, ಎತ್ತು, ನೀರಿನ ಹರವುಳ್ಳ ಗದ್ದೆ, ಒಪ್ಪ ಓರಣ ಸಂಸಾರ ಮಾಡುವ ಹೆಣ್ಣು, ಮನೆಯಲ್ಲಿದ್ದರೆ ಅದೇ ನಿಜವಾದ ಸಂಪತ್ತು, ಸಂವೃದ್ಧಿ, ಹರುಷ, ಶಾಂತಿ. ಸರ್ವಜ್ಞ ಒಬ್ಬ ವೈದ್ಯ, ಜನಪದ ಪಂಡಿತ. ಯಾವಯಾವ ಆಹಾರ ಧಾನ್ಯ ತಿನ್ನಬೇಕೆಂಬ ಸೂಚನೆಯನ್ನು ಆತನ ವಚನಗಳಿಂದಲೇ ಅರಿಯಬೇಕು. ಅಕ್ಕಿತಿಂದರೆ ಸಕ್ಕರೆ ರೋಗ ಕಟ್ಟಿಟ್ಟ ಬುತ್ತಿ, ಆದರೂ ದಕ್ಷಿಣ ಭಾರತ, ಕರ್ನಾಟಕದಲ್ಲಿ ಅಕ್ಕಿಯೇ ಪ್ರಧಾನ ಆಹಾರ.

ಅಕ್ಕಿಯನು ಉಂಬುವನು ಹಕ್ಕಿಯಂತಾಗುವನು
ಸಿಕ್ಕು ರೋಗದಲಿ ರೊಕ್ಕವನು ವೈದ್ಯನಿಗೆ ಇಕ್ಕುತಲಿರುವ ಸರ್ವಜ್ಞ.
ಅಕ್ಕಿ ತಿನ್ನುವವರು ಹೆಚ್ಚಿರುವಾಗ,
ವೈದ್ಯರಾದರೂ ಏನು ಮಾಡಲಾದೀತು.
ಜೋಳವನು ತಿಂಬುವನು ತೋಳದಂತಾಗುವನು
ಬೇಳೆ ಬೆಲ್ಲಗಳನುಂಬುವನು ಬಹುಕಾಲ
ಬಾಳೆನೆಂದರಿಗೂ ಸರ್ವಜ್ಞ.

ಜೋಳ ಆರೋಗ್ಯವರ್ಧಕ, ಉತ್ತರ ಕರ್ನಾಟಕದವರ ಆಹಾರ ಜೋಳದ ರೊಟ್ಟಿ, ಆಹಾರ ಕಾಯಿ ಪಲ್ಯಾ, ಅವರ ಆರೋಗ್ಯವು ವೃದ್ಧಿ. ಭಾರತ ದೇಶವನ್ನು ಮಧುಮೇಹದ ತವರೆಂದು ಪತ್ರಿಕೆಯಲ್ಲಿ ವರದಿಗಳು ಬರುತ್ತಲಿವೆ. ಅದಕ್ಕೆ ಉತ್ತಮ ಆಹಾರವೆಂದರೆ ನವಣೆ, ಜೋಳ, ರಾಗಿ, ನವಣೆ ತಿಂಬುವನು ಹವಣಾಗಿರುವನು.

ರಾಗಿಯನು ತಿಂಬುವನು ನಿರೋಗಿಯಾಗುವನು
ರಾಗಿಯು ಬೋಗಿಗಳಿಗಲ್ಲ ಬಡವರಿಗಾಗಿ
ರಾಗಿ ಬೆಳದಿಹದು ಸರ್ವಜ್ಞ.


ರಾಗಿ ಎಂಬ ಆಹಾರ ಆರೋಗ್ಯವರ್ಧಕ. ರಾಗಿ ಕುರಿತು ಕನಕದಾಸರು ರಾಮಧಾನ್ಯ ಚರಿತೆ, ಎಂಬ ಕಾವ್ಯವನ್ನು ಬರೆದಿದ್ದಾರೆ. ರಾಮ ರಾಗಿಗೆ ರಾಘವನೆಂದು ಹೆಸರಿಸಿದ್ದಾನೆ. ಇದು ಸಾಮಾನ್ಯ ಜನತೆಯ ಆಹಾರ. ಸರ್ವಜ್ಞನ ಜ್ಞಾನ ವ್ಯಾಪ್ತಿ ಅಪಾರವಾದುದು. ಆತನ ಕೆಲವು ಬೆಡಗಿನ ತ್ರಿಪದಿಗಳು ಒಗಟಿನ ರೂಪದಲ್ಲಿವೆ. ಓದುಗರಿಗೆ ನಿಜವಾಗಿಯೂ ಬುದ್ಧಿ, ಬೌದ್ಧಿಕದ ಮೂಲಕ ಅರಿವಿಗೆ ಬರುತ್ತವೆ. ಒಗಟಿನ ರೂಪದಲಿ ಅರ್ಥವತ್ತಾಗಿವೆ.

1. ಚಿಪ್ಪುಂಟು ಆಮೆಯಲ್ಲ
ಜಲವುಂಟು ಪೂಜಾರಿಯಲ್ಲ
ಮೂರು ಕಣ್ಣುಂಟು ಮುಕ್ಕಣ್ಣನಲ್ಲ ಸರ್ವಜ್ಞ.**(ಉತ್ತರ: ತೆಂಗಿನಕಾಯಿ)**
2. ಊರುಂಟು ಜನರಿಲ್ಲ
ನದಿಯುಂಟು ನೀರಿಲ್ಲ.
ದಾರಿಯುಂಟು ವಾಹನವಿಲ್ಲ ಸರ್ವಜ್ಞ. **(ಉತ್ತರ: ಭೂಪಟ, ನಕ್ಷೆ)**
3. ತನ್ನ ಸುತ್ತಲೂ ಮಣಿಯ ಬೆಣ್ಣೆಕುಡಿಪಾಲಗಳ
ತಿನ್ನದಲೆ ಹಿಡಿದು ತರುತಿಹದು ಕವಿಗಳಿದ
ನನ್ನಿಯಿಂ ಪೇಳಿ ಸರ್ವಜ್ಞ. **(ಉತ್ತರ: ಮಂಜು, ಕವಳ,ಇಬ್ಬನಿ)**
4. ಹಲ್ಲು ನಾಲಗೆಯಿಲ್ಲ ಸೊಲ್ಲು ಸೋಜಿಗವಲ್ಲ
ಕೊಲ್ಲದಲೆ ಮೃಗವ ಹಿಡಿಯುವುದು ಲೋಕದೊಳಗೆಲ್ಲ
ಠಾವಿನೊಳು ಸರ್ವಜ್ಞ. **(ಉತ್ತರ: ಬಲೆ)**
5. ನೆತ್ತಿಯಲಿರೆ ಉಂಬುವುದು ಸುತ್ತಲೂ ಸುರಿಯುವುದು
ಎತ್ತಿದರೆ ಎರಡು ಹೋಳಹುದು ಕವಿಗಳಿದ
ಕುತ್ತುರುವ ಪೇಳಿ ಸರ್ವಜ್ಞ. **(ಉತ್ತರ: ರಾಗಿ ಕಲ್ಲು, ರಾಗಿಹಿಟ್ಟು)**
6. ಹತ್ತೇಳುತಲೆ ಕೆಂಪು ಮತ್ತಾರುತಲೆ
ಕಪ್ಪು ಹೆತ್ತವ್ವನೊದಲನುರಿಸುವುದು
ಕವಿಗಳಿದರರ್ಥವೆನು ಪೇಳಿ ಸರ್ವಜ್ಞ **(ಉತ್ತರ: ಬೆಂಕಿ)**
7. ಅರೆವ ಕಲ್ಲಿನ ಮೇಲೆ ಮರವು ಹುಟ್ಟಿದಕಂಡೆ
ಮರದ ಮೇಲೆರಡು ಕರಕಂಡೆ ವಾಸನೆಯು
ಬರುತಿಹುದು ಸರ್ವಜ್ಞ. **(ಉತ್ತರ: ಗಂಧತೇಯುವುದು)**
8. ಇನ್ನು ಬಲ್ಲರೆಕಾಯಿ ಮುನ್ನೂರ ಅರವತ್ತು
ಹಣ್ಣು ಹನ್ನೆರಡು ಗೊನೆ ಮೂರು
ತೊಟ್ಟೊಂದು ಚೆನ್ನಾಗಿ ಪೇಳಿ ಸರ್ವಜ್ಞ.
**(ಉತ್ತರ: 365 ದಿವಸ, 12 ತಿಂಗಳು, 3 ಋತು, ಒಂದು ವರ್ಷ)**

ಸರ್ವಜ್ಞನ ರಚನೆಗಳು ಸಾಮಾನ್ಯರ ಓದಿಗೆ ನಿಲುಕುತ್ತವೆ. ಈತ ಸಂತ, ಅನುಭಾವಿ, ಒಳಿತು ಕೆಡಕನ್ನು ಕಣ್ಣಾರೆ ಕಂಡವನು ಹೊಗಳಿಕೆ, ತೆಗಳಿಕೆಗೆ ಬಗ್ಗದವನು ತನ್ನ ಅನುಭವಕ್ಕೆ ಬಂದ ಎಲ್ಲವನ್ನು ಮೂರೇಮೂರು ಸಾಲಿನಲ್ಲಿ ರಚಿಸಿ, ಕನ್ನಡ ಕಾವ್ಯದ ಸುಂದರ ಶಿಲ್ಪವನ್ನು ಕಡೆದವನು. ಸರಳ, ಸುಂದರವಾದ ರಚನೆ, ಜನರ ಭಾಷೆ, ತ್ರಿಪದಿ ರಚನೆಗೆ ಕಾರಣವಾಗಿವೆ. ಸಮಾಜ, ಲೋಕದ ಡೊಂಕನ್ನು ಕಂಡುಂಡ ಸಂತ, ಆರೋಗ್ಯಪೂರ್ಣ ಸಮಾಜದತ್ತ ನೋಟ ಹರಿಸಿದ, ಜನರ ಶೀಲಸ್ವಭಾವ ಕಂಡುಂಡು ಮರುಗಿ ಅವುಗಳಿಗೆ ಚಿಕಿತ್ಸಕ ರಚನಾ ಮೂಲಕ ಎಚ್ಚರಿಸಿದ. ವಚನಕಾರರು, ದಾಸರ ಕೀರ್ತನೆಗಳಂತೆ, ಸರಳ ವಸ್ತು, ಜನಸಾಮಾನ್ಯರ ಭಾಷೆ ಮೂಲಕ ರಚನೆಯಾದ ಸಾಹಿತ್ಯವೆಂದರೆ ತ್ರಿಪದಿ. ಕನ್ನಡ ಸಾಹಿತ್ಯದಲ್ಲಿ ಆತನ ಹೆಸರು ಅಜರಾಮರವಾಗಿ ಉಳಿಯಲು, ಆತ ರಚಿಸಿರುವ ಮೂರೇ ಮೂರು ಸಾಲಿನ ತ್ರಿಪದಿಗಳಲ್ಲಿ ಸಿಡಿಲಿನ ಘರ್ಜನೆ, ನೇರನುಡಿ ನಿರಾಡಂಬರ, ಏಕಾಂತ ಜೀವನ, ಸ್ವತಂತ್ರವಾದ ವಿಚಾರಗಳಿವೆ. ವಚನಕಾರರದು ಕಾಯಕಯೋಗ, ಈತನದು ಕರ್ಮಯೋಗ ಪುಣ್ಯದಂತೆ ಬಂದವನು, ಜ್ಞಾನ ಪಡೆದು ಶಿವಶರಣರು ಮುಕ್ತಿಪಡೆದಂತೆ, ಸರ್ವಜ್ಞನ ಕವಿತಾ ಪ್ರೌಢಿಮೆ ಹೊರಹೊಮ್ಮಿದೆ. ಈತನದು ಋಷಿ ಸದೃಶ ಜೀವನ. ದಾಸರ ಕೀರ್ತನಗಳಂತೆ ವಚನ, ತ್ರಿಪದಿ ಸಾಲುಗಳು ಹರಳುಗಟ್ಟಿವೆ.

***ಡಾ. ವಿಶ್ವನಾಥ***

## ಅಭಿಮತ ಓದುಗರ ಅನಿಸಿಕೆ




"ಅಭಿಮತ" ಚೆನ್ನಾಗಿ ಮೂಡಿ ಬಂದಿದೆ. ಸಂಪಾದಕ ಮಂಡಳಿ, ಸಂಘದ ಪದಾಧಿಕಾರಿಗಳು ಹಾಗೂ ಸಂಘದ ಕರ್ಮಚಾರಿಗಳಿಗೆ ಅಭಿನಂದನೆಗಳು.

***ಚೆನ್ನು ಎಸ್. ಮಠದ***

ತುಂಬಾ ಚೆನ್ನಾಗಿ ಮೂಡಿ ಬಂದಿದೆ ಸರ್. ಎಲ್ಲಾ ಚಿಕ್ಕ ಪುಟ್ಟ ಸಂಸ್ಥೆಗಳಿಗೂ ಸಮಾನ ಆದ್ಯತೆ ನೀಡುತ್ತಿರುವುದು ತುಂಬಾ ಸಂತೋಷದ ವಿಷಯ.

***ರಾಮಚಂದ್ರ ಉಭಾಳೆ***

ಜನವರಿ-2022ರ ಅಭಿಮತ ಸಂಚಿಕೆಯು ಬಹು ಸುಂದರ ಹಾಗೂ ಸಮಗ್ರ ವಿಷಯ ವಸ್ತು ಪ್ರಕಟಗೊಂಡು ಮೂಡಿ ಬಂದಿದೆ.

ಈ ಬಾರಿಯ ಗಣರಾಜ್ಯೋತ್ಸವದ ಪ್ರದರ್ಶನದಲ್ಲಿ ಭಾಗವಹಿಸಿದ್ದ 'ಕರ್ನಾಟಕ : ಪಾರಂಪರಿಕ ಕರಕುಶಲ ವಸ್ತುಗಳ ತೊಟ್ಟಿಲು' ವಿಷಯದಡಿಯ ರಾಜಪಥದಲ್ಲಿ ಸಾಗಿದ ರಾಜ್ಯದ ಸ್ತಬ್ಧಚಿತ್ರಕ್ಕೆ ಸಂದ 'ದ್ವಿತೀಯ ಪ್ರಶಸ್ತಿ 'ಅಭಿಮಾನ ಹಾಗೂ ಹೆಮ್ಮೆ ಎನಿಸಿತು.

ಸರಳ ವಿವರಣೆಯ ಉಪಯುಕ್ತ ಮಾಹಿತಿಯುಳ್ಳ ಗಣರಾಜ್ಯೋತ್ಸವಕ್ಕೆ ಸಂಬಂಧಿಸಿದ ಲೇಖನ 'ಅಭಿಮತ'ದ ಸೌಂದರ್ಯ ಮತ್ತಷ್ಟು ಹೆಚ್ಚಿಸಿದೆ. ಅಂತೆಯೇ ಗಣರಾಜ್ಯೋತ್ಸವದ ಮೆರವಣಿಗೆಯಲ್ಲಿ ಭಾಗವಹಿಸಿದ ಕನ್ನಡಿಗ ಮಕ್ಕಳ ಕುರಿತಾಗಿ ಪ್ರಕಟಿಸಿರುವುದು ಸ್ಫೂರ್ತಿದಾಯಕವಾಗಿದೆ.

ದೆಹಲಿಯ ಕನ್ನಡಿಗರ ವೈವಿಧ್ಯಮಯ ಸಾಹಿತ್ಯದ ಅಭಿರುಚಿಯನ್ನು ಹೆಚ್ಚಿಸುವಲ್ಲಿ ಸಂಪಾದಕರ ಸಕಾಲಿಕ ನಿರ್ಣಯ ಪ್ರಶಂಸನೀಯವಾದರೂ ಈ ದಿಸೆಯಲ್ಲಿ ಇನ್ನಷ್ಟು ಕವನಗಳನ್ನು ಆಕರಿಸಿ, ಒಂದೆಡೆ ಪ್ರಕಟಿಸಿದರೆ ಓದುಗರಿಗೆ ಸಹಾಯಕಾರಿಯಾದೀತು.

***ಹರಿಪ್ರಿಯ. ಎಸ್***

ಗುಣಮಟ್ಟದ ಸುಧಾರಣೆ, ಜನವರಿ ಅಭಿಮತ ಸಂಚಿಕೆ ಸಾಕಷ್ಟು ದೆಹಲಿಯ ಕನ್ನಡ ಚಟುವಟಿಕೆ ಮತ್ತು ದೆಹಲಿ ಕನ್ನಡ ಪ್ರತಿಭೆಗಳ ಸಾಹಿತ್ಯವನ್ನೊಳಗೊಂಡು ಹೊರಬಂದಿದೆ. ಗಣರಾಜ್ಯೋತ್ಸವದ ಮಾಹಿತಿ ಮತ್ತು ಕರ್ನಾಟಕದ ಸ್ತಬ್ಧಚಿತ್ರದ ವಿಸ್ತೃತ ಲೇಖನ ಬರಹ ಉತ್ತಮ ಐತಿಹಾಸಿಕ ಮಾಹಿತಿಯಿಂದ ಕೂಡಿದೆ.

ಕಳೆದ ಮಾಸಿಕದಲ್ಲಿ ಕೆಂಪೇಗೌಡ ಫೌಂಡೇಷನ್ ಚಿತ್ರ ಮರುಪ್ರಕಟವಾಗಿದೆ. ಅಭಿಮತದ ಗುಣಮಟ್ಟದ ಕಡೆಗೆ ಪ್ರಕಾಶಕರು / ಸಂಪಾದಕರು ಗಮನ ಹರಿಸಿ.

***ಟಿ.ಎಂ. ಮೈಲಾರಪ್ಪ***

# ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಿಂದ ಪಿಕ್‌ನಿಕ್



ಇದು 'ಸ್ನೇಹಾ'ದ ಜೊತೆಗಿನ ನನ್ನ ಮೊದಲ ಅನುಭವ. ಫೆಬ್ರವರಿ 21 ರಂದು ಲೋದಿ ಗಾರ್ಡನ್‌ನಲ್ಲಿ ನಾವು ಎಲ್ಲಾ ಸೇರಿ ಅಂತಾಕ್ಷರಿಯೊಂದಿಗೆ ನಮ್ಮ ಕಾರ್ಯಕ್ರಮ ಪ್ರಾರಂಭಿಸಿದೆವು. ಅದಾದ ನಂತರ ವಿನೂತನವಾದ ಜಂಕ್ಷನ್-ಜಂಕ್ಷನ್ ಆಟದಲ್ಲಿ ಹಿರಿಯರಾದ ನಮ್ಮೆಲ್ಲರ ನೆಚ್ಚಿನ ಡಾ. ಅಹಲ್ಯಾ ಚಿಂತಾಮಣಿಯವರು ಪ್ರಥಮ, ಉಷಾರವರು ದ್ವಿತೀಯ ಸ್ಥಾನ ಗಳಿಸಿದರು. ಗೋಲಿಯಾಟದಲ್ಲಿ ಶೋಭಾ ಗೌಡರವರು ಪ್ರಥಮ, ನಾಗವೇಣಿಯವರು ದ್ವಿತೀಯ ಸ್ಥಾನ ಗಳಿಸಿದರು ಹಾಗೂ ತಂಬೋಲದಲ್ಲಿ ಶೋಭಾ ಗೌಡರವರು ಪ್ರಥಮ, ಮಾಲತಿಯವರು ದ್ವಿತೀಯ ಸ್ಥಾನ ಪಡೆದರು. ವಿಜೇತರಿಗೆ ಬಹುಮಾನಗಳನ್ನು ನಮ್ಮ ಅಧ್ಯಕ್ಷೆ ಸರೋಜ ಮಾಧವ ವಿತರಿಸಿದರು.

ವಿಲಾಸಿನಿಯವರು ತಾವು ಅಜ್ಜಿಯಾದ ಸಂಭ್ರಮಕ್ಕೆ ಭೋಜನಕೂಟವನ್ನು ಏರ್ಪಡಿಸಿದ್ದರು. ತುಂಬಾ ರುಚಿಕರವಾದ ಊಟ, ಆನಂತರ ವೀಳ್ಯವನ್ನು ಸವಿದು ವನ ಭೋಜನದ ಆನಂದವನ್ನು ಪಡೆದು ತೃಪ್ತರಾದೆವು. ಆ ದಿನ 'ವಿಶ್ವ ಮಾತೃ ಭಾಷಾ ದಿನ'ವಾದ ಪ್ರಯುಕ್ತ ನನ್ನ ಗೆಳತಿಯರಾದ ಪಾರ್ವತಿ ಹಾಗೂ ರತ್ನಾರವರ ಮಕ್ಕಳು ಹಾಡನ್ನು ಹಾಡಿ ನಮ್ಮನ್ನು ರಂಜಿಸಿದರು. ಒಟ್ಟಿನಲ್ಲಿ ಈ ಪಿಕ್‌ನಿಕ್ ನನಗಂತೂ ಹೊಸ ಖುಷಿ ತಂದಿತ್ತು. ಹೆಸರಿಗೆ ತಕ್ಕ ಹಾಗೆ ಎಲ್ಲರ ನಡುವೆ ಇರುವ 'ಸ್ನೇಹ' ಕಂಡು ಇನ್ನೂ ಹೆಚ್ಚಿನ ಆನಂದವಾಯಿತು. ಮುಂಬರುವ ದಿನಗಳಲ್ಲಿ ಈ ತಂಡ ಇನ್ನೂ ತುಂಬಾ ಯಶಸ್ಸನ್ನು ಕಾಣಲಿ ಎಂದು ಹಾರೈಸುವೆ.

**ರೀನಾ ಕುರ್ಮೋಲಿ**

# ಕಂದಗಲ್ಲ ಹನುಮಂತರಾಯರ ಸಾಹಿತ್ಯದಲ್ಲಿ ಭಾರತೀಯ ರಂಗಭೂಮಿಯ ಮುಕುಟವಿದೆ ರಂಗ ಸಾಹಿತ್ಯದ ಮುದ್ರೆ ಇದೆ-ಪ್ರಹ್ಲಾದರಾವ್ ದೇಸಾಯಿ

ಕರ್ನಾಟಕದ ಶೇಕ್ಸಪಿಯರ್ ಕಂದಗಲ್ಲ ಹನುಮಂತರಾಯ ಅವರ ಸಾಹಿತ್ಯದಲ್ಲಿ ಭಾರತೀಯ ರಂಗಭೂಮಿಯ ಮುಕುಟವಿದೆ. ರಂಗಸಾಹಿತ್ಯದ ಮುದ್ರೆ ಇದೆ. ಆಧ್ಯಾತ್ಮಿಕ ತರ್ಕ, ಮೀಮಾಂಸೆ, ಮಹಾಭಾರತ ಹಾಗೂ ರಾಮಾಯಣದ ಕಥೆಯನ್ನಾಧರಿಸಿ ಪ್ರಬುದ್ಧ ಸಾಹಿತ್ಯ ಕೃತಿಗಳ ಮೆರಗು ಸಹಿತ ಎಲ್ಲವೂ ನಾಟಕ ಕೃತಿ ಒಳಗೊಂಡಿವೆ ಎಂದು ಇಲಕಲ್ಲ ಸಮೀಪದ ಗುಡೂರಿನವರಾದ ಸಾಹಿತಿ ಹಾಗೂ ನಿವೃತ್ತ ತಹಶಿಲ್ದಾರರೂ ಆದ ಪ್ರಹ್ಲಾದರಾವ್ ದೇಸಾಯಿ ಅವರು ಹೇಳಿದರು. ನವದೆಹಲಿಯ 'ದಿನಕರ'ವು ಅಂತರ್ಜಾಲದ ಮೂಲಕ ಇತ್ತೀಚಿಗೆ ಆಯೋಜಿಸಿದ್ದ 'ಕರ್ನಾಟಕದ ಶೇಕ್ಸಪೀಯರ ಶ್ರೀ ಕಂದಗಲ್ಲ ಹನುಮಂತರಾಯರ ಸ್ಮರಣೆ' ಹಾಗೂ ರಂಗ ಸಾಹಿತ್ಯ ಕುರಿತ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿ, ಸುದೀರ್ಘವಾಗಿ ಮಾತನಾಡಿದರು.


ನುಡಿಸು ವೀಣೆಯನ್ನು ಬ್ರಹ್ಮ ಮಾನಸ ಪುತ್ರಿಯೇ ಮಂಜುಳ ಸ್ವರ ತರಂಗಿಣಿಯೇ, ನುಡಿಸೆನ್ನ ಕಾವ್ಯ ಮಾಧುರ್ಯ, ಗಿರಿಗಳಲಿ, ಬನದಲಿ ಮತ್ತೆ ಋಷಿಗಳು ಹೋಮ ಹವನಗಳನ್ನು ಗೈಯುವಲಿ, ಪುಣ್ಯತಮ ಭೂಮಿಯಲಿ, ಭರತ ಖಂಡದಲಿ, ವಿಶ್ವದಣುಕಿರಣವಿನಲಿ ಚೇತನಾಚೇತನಗಳು ಉದ್ದೀಪನಗೊಳ್ಳುವಲ್ಲಿ, ನುಡಿಸೆನ್ನ ಕಾವ್ಯ ಮಾಧುರ್ಯ ಇದು 'ಅದ್ಭುತ ರಾಮಾಯಣ' ನಾಟಕದ ಮಹರ್ಷಿ ವಾಲ್ಮೀಕಿ ಪಾತ್ರದ ಮೂಲಕ ಕಂದಗಲ್ಲ ಹನುಮಂತರಾಯರು ಸಾಹಿತ್ಯದ ನುಡಿಗಟ್ಟಿದು.

ನಾಟಕಗಳಲ್ಲಿ ಶಬ್ದ ಗಾರುಡಿಗತನವಿತ್ತು. ಸಾಂದರ್ಭಿಕ ಪದಪ್ರಯೋಗ ಬಳಸುವ ಕಲೆ ಕರಗತವಾಗಿತ್ತು. ಶಬ್ದ ಪ್ರೌಢಿಮೆ ವೀರಾವೇಶ, ನವರಸಗಳಿಂದ ಕೂಡಿದ ನಾಟಕ ಒಳಗೊಂಡಿತ್ತು. ಹಳ್ಳಿಯ ಕಲಾವಿದರು ಬಾಯಿಪಾಠ ಮಾಡಿದ ರಾಯರ ನಾಟಕಗಳ ಸಂಭಾಷಣೆ ರಂಗದ ಮೇಲೆ ಮಾರ್ದನಿಸಿದರೆ, ಪ್ರೇಕ್ಷಕರಿಂದ ಚಪ್ಪಾಳೆಗಳ ಕರತಾಡನವೇ ಆಗುತ್ತಿತ್ತು. ಆ ಸಂಭಾಷಣೆಗಳು ಮಾತುಗಳಾಗಿರಲಿಲ್ಲ ಅವು ವಜ್ರದ ನುಡಿಗಳು.

ತಾವೇ ಅನುಭವಿಸಿದ ಕ್ರೂರ ಬಡತನದ ಕತೆ ಒಳಗೊಂಡ ಅನನ್ಯ ರಂಗಕೃತಿ 'ಬಡತನದ ಭೂತ'. ಅಲ್ಲದೆ, ಮಾತಂಗ ಕನ್ಯೆ, ಅಕ್ಷಯಾಂಬರ, ಕುರುಕ್ಷೇತ್ರ, ರಕ್ತರಾತ್ರಿ, ಆಗಸ್ಟ್ 15ರ ನಂತರ, ವಿಜಯನಗರ ಸಾಮ್ರಾಜ್ಯ, ವರಪ್ರದಾನ, ಪಾಂಚಾಲಿ, ಪಾಂಡವ ಪಾಣಿಪತ್, ಪಾಶುಪತಾಸ್ತ್ರ ಸೇರಿದಂತೆ ಹಲವಾರು ಸಾಮಾಜಿಕ, ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ. ಇಂದು ಅವರ ನಾಟಕಗಳನ್ನು ಕಲಿಸುವ ಹಾಗೂ ಕಲಿಯುವವರು ತೀರಾ ವಿರಳ. ಪ್ರೌಢ ಭಾಷಾ ಸಾಹಿತ್ಯದ ಕಠಿಣ ಶಬ್ದ ನುಡಿಸುವ ನಟರೂ ಕಾಣಸಿಗುವುದಿಲ್ಲ. ಇವರ ಕೃತಿಗಳನ್ನು ಯುವ ಜನಾಂಗಕ್ಕೆ ತಿಳಿಸಿಕೊಡುವ ಕಾರ್ಯವಾಗಬೇಕಿದೆ. ಇಂದಿನ ಯುವಜನತೆ ಇಂತಹ ನಾಟಕಗಳಿಗೆ ಆಸಕ್ತಿವಹಿಸಬೇಕು ಎಂದು ದೇಸಾಯಿ ಹೇಳಿದರು.

### ಡಾ. ವೆಂಕಟಾಚಲ ಹೆಗಡೆ ಮಾತು

ನವದೆಹಲಿಯ ಜವಾಹರಲಾಲ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹಾಗೂ ದೆಹಲಿ ಕರ್ನಾಟಕ ಸಂಘದ ಮಾಜಿ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಮಾತನಾಡಿ, ಸಂವಾದದಲ್ಲಿ ಪಾಲ್ಗೊಂಡು ಸಂತೋಷವಾಯಿತು. ಕಂದಗಲ್ಲ ಹನುಮಂತರಾಯರ ಬಗ್ಗೆ ಸಾಕಷ್ಟು ಕೇಳಿದ್ದೆ, ಇಂದು ದೇಸಾಯಿ ಅವರ ಮೂಲಕ ಮುಖತಃ ಕೇಳುವ ಸದಾವಕಾಶ ದಿನಕರ ಒದಗಿಸಿತು. ಕಂದಗಲ್ಲ ಹನುಮಂತರಾಯರ ನಾಟಕಗಳು ದೆಹಲಿಯಲ್ಲಿ ಪ್ರಯೋಗ ಕಂಡಿವೆ.



ಕಂದಗಲ್ಲ ಹಣಮಂತರಾಯ



ಪ್ರಹ್ಲಾದರಾವ್ ದೇಸಾಯಿ

ದೇಸಾಯಿ ಅವರು ಸಾಂದರ್ಭಿಕವಾಗಿ ನಾಟಕದ ಸಾರ ಸರಳವಾಗಿ ಮನಮುಟ್ಟುವಂತೆ ತಿಳಿಸಿದರು. ಗಟ್ಟಿ ಸಾಹಿತ್ಯಯುಳ್ಳ ನಾಟಕ ವಿಷಯ ವಸ್ತು ಇಂದಿನ ಕಾಲಮಾನಕ್ಕೆ ತಿಳಿಸುವ ಕಾರ್ಯಕ್ಕೆ ಕೈಜೋಡಿಸುವುದಾಗಿ ಹೇಳಿದರು. ಉಪಮೇಯಗಳುಳ್ಳ ನಾಟಕ ರಚನಾಕ್ರಮ ರಾಯರಿಗೆ ಸಿದ್ಧಿಸಿತ್ತು. ತಾಂತ್ರಿಕತೆಯ ಸದುಪಯೋಗಪಡಿಸಿಕೊಂಡು ಅವರ ಕೃತಿಗಳನ್ನು ಹಾಗೂ ನಶಿಸಿ ಹೋಗುವ ಹಂತದಲ್ಲಿರುವ ಹಳೆಯ ತಲೆಮಾರುಗಳ ನಾಟಕ ಸಂಸ್ಕೃತಿ, ಸಂಪತ್ತನ್ನು ಸಂಗ್ರಹಿಸುವ ಕಾರ್ಯವಾಗಬೇಕಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸುತ್ತಲೂ ಕತ್ತಲು? ಪತಿ ಪ್ರೀತಿ ಬತ್ತಲು.. ಎಂಬ ರಂಗಗೀತೆಯನ್ನು ವಿದ್ಯಾಶ್ರೀ ಮೆ.ಗಂಜಿ ಅವರು ಸುಮಧುರವಾಗಿ ಹಾಡಿದರು. ದಿನಕರ ಸಂಚಾಲಕರು ಹಾಗೂ ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ, ಸಂತೋಷ ಉಪಾಧ್ಯಾಯ, ಟಿ.ಎಸ್. ರಮೇಶ ಹಾಗೂ ಶಶಿಧರ ಮುನವಳ್ಳಿ ಅವರ ಮುತುವರ್ಜಿಯ ಸಹಕಾರವಿತ್ತು.

**ಅಮರೇಶ**

# ಸಂಗೀತ ನಭದ ಧೃವತಾರೆ ಅಸ್ತಂಗತವಾಯ್ತು ಎನ್ನಲಾಗದು, "ಅಮರವಾಯ್ತು"



## ಲತಾ ಮಂಗೇಷ್ಕರ್

ಫೆಬ್ರವರಿ 6 ಬೆಳಗಿನ ಸುದ್ದಿ ಅನಿರೀಕ್ಷಿತವಾದುದೇನೂ ಅಲ್ಲವಾದರೂ, ಕೇಳಿದ ಕೂಡಲೇ ಒಂಥರಾ ಸಂಕಟ ಅನುಭವಿಸುವಂತಾಯ್ತು. ಸಂಗೀತಾರಾಧಕರ ಮನದಲ್ಲಿ ಅಚ್ಚಹಸುರಾಗಿ ನಿಲ್ಲುವಂತಹ ಎವರ್ಗ್ರೀನ್ ವ್ಯಕ್ತಿತ್ವ, ಲತಾ ಮಂಗೇಷ್ಕರ್ ಅವರದು. ನಾಟಕ ಕಂಪನಿಯ ಮಾಲೀಕರಾಗಿದ್ದ ಲತಾರ ತಂದೆ ದೀನಾನಾಥರು ಮನೆಯಲ್ಲಿ ಮಕ್ಕಳಿಗೆ ಸಂಗೀತ ಪಾಠ ಮಾಡುತ್ತಿದ್ದರು. ಒಂದು ದಿನ ಅವರ ಶಿಷ್ಯನೊಬ್ಬ ತಪ್ಪಾಗಿ ಹಾಡುತ್ತಿರುವುದನ್ನು ಅಲ್ಲಿಯೇ ಅಂಗಳದಲ್ಲಿ ಆಡುತ್ತಿದ್ದ ಲತಾ ಗ್ರಹಿಸಿ ಹುಡುಗನಿಗೆ ಸರಿಪಡಿಸಿಕೊಳ್ಳಲು ಹೇಳಿಕೊಡುತ್ತಿದ್ದ ಬಗೆ ದೀನಾನಾಥರನ್ನು ನಿಬ್ಬೆರಗಾಗಿಸಿತು. ತಮ್ಮ ಪತ್ನಿಯನ್ನು ಕರೆದು ತೋರಿಸಿ "ನೋಡು ನಮ್ಮ ಮನೆಯಲ್ಲೇ ಒಬ್ಬ ಗಾಯಕಿ ಇದ್ದಾಳೆ ನಾವು ಗಮನಿಸಿಯೇ ಇಲ್ಲ" ಎಂದು ಹೇಳಿದರು. ಮಾರನೆಯ ದಿನದಿಂದಲೇ ಅವರು ಲತಾರಿಗೆ ತಾನ್ಪುರ ಸಮೇತ ಸಂಗೀತ ಕಲಿಸಲು ಪ್ರಾರಂಭಿಸಿದರು. ತಂದೆ ಪಂಡಿತ್ ದೀನಾನಾಥರ ಅಕಾಲಿಕ ಮರಣದಿಂದ ಕಂಗಾಲಾದ ಕುಟುಂಬದಲ್ಲಿ, ಹಠಾತ್ತನೆ ಸಾಂಸ್ಕೃತಿಕ ಲೋಕಕ್ಕೆ ಕಾಲಿಕ್ಕಿದಾಗ ಲತಾದೀ ಅವರಿಗೆ ಆಗಿನ್ನೂ 13 ವರ್ಷ ವಯಸ್ಸು. ಆಯ್ಕೆಗೆ ಅವಕಾಶವೇ ಇರಲಿಲ್ಲ. ಹೇಗಾದರೂ ಕುಟುಂಬ ನಿರ್ವಹಣೆ ಮಾಡಲೇಬೇಕು, ನನ್ನ ತಾಯಿ ಮತ್ತೊಬ್ಬರ ಎದುರು ಕೈ ಚಾಚದಂತೆ ನಾನು ಏನನ್ನಾದರೂ ಮಾಡಲೇಬೇಕು ಎಂದು ಲತಾದೀ ನಿಶ್ಚಯಿಸಿಕೊಂಡು, ಅವರ ಕುಟುಂಬದ ಆಪ್ತರಾದ ಮಾಸ್ಟರ್ ವಿನಾಯಕ ಎಂಬುವರ ನವಯುಗ ಚಿತ್ರಪಟ ಮೂವೀ ಕಂಪನಿಯ ಮರಾಠಿ ಸಿನಿಮಾದಲ್ಲಿ ಹಾಡುವುದರ ಜೊತೆಗೆ ಚಿತ್ರದಲ್ಲೂ ಅಭಿನಯಿಸಿದರಾದರೂ ನಟನೆಯಲ್ಲಿ ಆಸಕ್ತಿ ಇಲ್ಲದ ಕಾರಣ ಸಂಗೀತಕ್ಕಾಗಿ ತಮ್ಮ ಸಮಯವನ್ನು ಮೀಸಲಿಡಲು ನಿರ್ಧರಿಸಿ ದೇವರಲ್ಲಿ "ನನಗೆ ಬರೀ ಹಾಡುವಂತೆ ಅನುಗ್ರಹಿಸು ನಾನು ನಟಿಸಲಾರೆ" ಎಂದು ಮೊರೆಯಿಟ್ಟರು. ಪುಣೆಯಲ್ಲಿದ್ದ ಲತಾ ಅವರ ಕುಟುಂಬ 1945 ರಲ್ಲಿ ಮುಂಬಯಿಗೆ ಸ್ಥಳಾಂತರಗೊಂಡಿತು. ಗುಲಾಂ ಹೈದರ್ ಅವರ ನೆರವಿನಿಂದ 1948ರಲ್ಲಿ 'ಮಜಬೂರ್' ಎಂಬ ಸಿನಿಮಾದಲ್ಲಿ 'ದಿಲ್ ಮೇರಾ ತೋಡಾ ಮುಝೆ ಕಹೀಂ ಕ ನ ಛೋಡಾ' ಹಾಡನ್ನು ಹಾಡಲು ಸಿಕ್ಕ ಅವಕಾಶದಿಂದಾಗಿ ಇವರಿಗೆ ಒಂದು ಗಮನಾರ್ಹತಿರುವು ದೊರಕುತ್ತದೆ.

"ಮುಂದೆ ಹೈದರ್ ತೋರಿಸಿ ಕೊಟ್ಟ ಮೆಟ್ಟಿಲುಗಳನ್ನು ಏರುತ್ತಾ ಲತಾ 1949ರಲ್ಲಿ 'ಮಹಲ್' ಚಿತ್ರಕ್ಕಾಗಿ 'ಆಯೇಗಾ ಆನೇವಾಲಾ' ಹಾಡಿದಾಗ ಅದು ಆಗ ತಾನೇ ಸ್ವತಂತ್ರವಾಗಿದ್ದ ಭಾರತದ ಮೊಟ್ಟ ಮೊದಲ ಗಮನ ಸೆಳೆಯುವ ಹಾಡಾಗಿ ಲತಾ ಅವರಿಗೆ ಪ್ರತಿಸ್ಪರ್ಧಿಯೇ ಇಲ್ಲವೆಂಬಂತೆ ಇತಿಹಾಸದಲ್ಲಿ ದಾಖಲಾರ್ಹವಾಗಿತ್ತು. ರೇಡಿಯೋ ಸಿಲೋನ್‌ಗೆ ಜನರ ಪ್ರವಾಹವೇ ಹರಿದು ಬಂತು ಪತ್ರಗಳ ಮೂಲಕ ಗಾಯಕಿ ಯಾರು...?? ಎಂದು. ಅಲ್ಲಿಯವರೆಗೂ ಬರೀ ಪಾತ್ರಧಾರಿಗಳು ಯಾರು? ಎಂದು ಕೇಳುತ್ತಿದ್ದ ಚಿತ್ರ ರಸಿಕರು ಅಲ್ಲಿಂದ ಮುಂದೆ ಗಾಯಕಿ ಯಾರು...?? ಎಂದು ಕೇಳುವಂತಾಯಿತು.

ರೇಡಿಯೋ ಸಿಲೋನ್‌ನವರು ಕೊನೆಗೂ ಅದು 'ಲತಾ ಮಂಗೇಷ್ಕರ್' ಎಂದು ಹೇಳಲೇ ಬೇಕಾಯಿತು. ನಂತರ ಲತಾ ಅವರು ಅಂದಾಜ್, ಅನಾರ್ಕಲಿ, ಮಧುಮತಿ, ಮುಗಲ್–ಇ–ಆಝುಮ್, ಹಮ್ದೋನೋ... ಹೀಗೇ ಹಾಡುತ್ತಲೇ ನೂರಾರು ಚಿತ್ರಗಳಿಗೆ ಹಾಡುತ್ತಾ... ಕಟ್ಟಕಡೆಯ ಹಾಡು 'ರಂಗ್ ದೇ ಬಸಂತಿ'ಗಾಗಿ 'ಲುಕ್ಕಾಚುಪ್ಪೀ' 2006ರಲ್ಲಿ.

ಲತಾ ಅವರ ಕೇಳಿದುದನ್ನು ತಕ್ಷಣವೇ ಕಲಿತು ಬಿಡುವ ಅಸಾಧಾರಣ ಜ್ಞಾಪಕಶಕ್ತಿ ಅಲ್ಪ ಸಮಯದಲ್ಲಿಯೇ ಪಾಂಡಿತ್ಯದೆಡೆಗೆ ಕೊಂಡೊಯ್ದು ವೃತ್ತಿಪರ ಗಾಯಕಿಯರಿಗಿಂತ ಮಿಗಿಲಾಗಿ ಸಾಧನೆ ಮಾಡುವಂತೆ ಆಯಿತು.

ಲತಾ ಅವರ 'ಅಲ್ಲಾ ತೇರಾ ನಾಮ್'– ಈ ಭಜನೆಯಂತೂ ಎಷ್ಟು ಜನಪ್ರಿಯ ವಾಯ್ತೆಂದರೆ ಶಾಲೆಗಳಲ್ಲಿ ಪ್ರಾರ್ಥನೆಯನ್ನಾಗಿ, ಮಾಡಲಾಯಿತು. ನಂತರ 1963 ರಲ್ಲಿ ಕವಿ ಪ್ರದೀಪ್ ಬರೆದ 'ಹೇ ಮೇರೆ ವತನ್ ಕೇ ಲೋಗೋ' ದೆಹಲಿಯ ರಾಮ್ ಲೀಲಾ ಮೈದಾನದಲ್ಲಿ ಜನವರಿ 26 ರಂದು ಅಂದಿನ ಪ್ರಧಾನಿ ಶ್ರೀ ಜವಾಹರಲಾಲ್ ನೆಹರೂ ಅವರ ಸಮ್ಮುಖದಲ್ಲಿ ಲತಾ ರವರು ಹಾಡಿದಾಗ ನೆಹರೂ ಕಣ್ಣೀರಿಟ್ಟರಂತೆ. ಮಗಳೇ, ನೀನು ನನ್ನನ್ನು ಅಳಿಸಿಬಿಟ್ಟೆ ಎಂದಿದ್ದರಂತೆ. ಆಗತಾನೇ ಮುಗಿದಿದ್ದ ಭಾರತ–ಚೀನಾ ಯುದ್ಧದಲ್ಲಿ ಬಹಳ ಸಂಖ್ಯೆಯಲ್ಲಿ ಮಡಿದ ಭಾರತೀಯ ಸೈನಿಕರ ನೆನಪಿನಲ್ಲಿ ಈ ಹಾಡು ಬರೆದು ಹಾಡಲ್ಪಟ್ಟಿತ್ತು. ಲತಾ ಅವರ ಧ್ವನಿಯಲ್ಲಿ ದುಃಖ ಕೂಡಾ ಭಾವಕೋಶದ ಪರಮ ಸೀಮೆಯನ್ನು ತಟ್ಟಿತ್ತು ಎಂದರೆ ತಪ್ಪಾಗಲಾರದು. ಆ ದಿನ ಶ್ರೀಮತಿ ಇಂದಿರಾ ಗಾಂಧಿ ಅವರು ಇಡೀ ಸಂಗೀತ ತಂಡವನ್ನು ತಮ್ಮಬಂಗಲೆಗೆ ಆಮಂತ್ರಿಸಿ ಸತ್ಕರಿಸಿ ತಮ್ಮ ಪುಟ್ಟ ಪುಟ್ಟ ಮಕ್ಕಳಾದ ರಾಜೀವ್ ಹಾಗೂ ಸಂಜಯ್‌ರನ್ನು ಭೇಟಿ ಮಾಡಿಸಿ ಇವರಿಬ್ಬರೂ ನಿಮ್ಮ ಪ್ರಶಂಸಕರೆಂದು ಹೇಳಿದರಂತೆ.

ಕನ್ನಡಿಗರೆಲ್ಲರಿಗೆ ವಿಶೇಷವಾದ ವಿಷಯ ಎಂದರೆ ಲತಾ ಅವರು ಕನ್ನಡದಲ್ಲಿಯೂ ಹಾಡಿರುವುದು. 1962 ರಲ್ಲಿ ತೆರೆ ಕಂಡ "ಸಂಗೊಳ್ಳಿರಾಯಣ್ಣ" ಚಿತ್ರದಲ್ಲಿ "ಬೆಳ್ಳನೆ ಬೆಳಗಾಯಿತು" ಮತ್ತು "ಎಲ್ಲಾರ ಇರತೀರೋ, ಎಂದಾರ ಬರತೀರೋ" ಎಂಬ ಎರಡು ಹಾಡುಗಳನ್ನು ಲತಾ ಹಾಡಿದ್ದಾರೆ. ಈ ಚಿತ್ರದ ನಿರ್ದೇಶಕ ಬಿ.ಟಿ. ಅಥನಿ, ನಿರ್ಮಾಪಕ ಅನಂತ ಹಿರೇಗೌಡರ್ ಮತ್ತು ಸಂಗೀತ ನಿರ್ದೇಶಕ ಲಕ್ಷ್ಮಣ್ ಬರ್ಲೇಕರ್. 2002ರಲ್ಲಿ ಶ್ರೀಸಾಧುಕೋಕಿಲ ಅವರು H2O ಚಿತ್ರಕ್ಕಾಗಿ "ಹೂವೇ ಹೂವೇ" ಹಾಡನ್ನು ಅವರಿಂದ ಹಾಡಿಸಬೇಕೆಂದು ಅವರ ಮನೆಗೆ ಹೋದಾಗ ಸ್ವತಃ ಲತಾರವರೇ ಬಂದುಬಾಗಿಲು ತೆರೆದು ಬಹಳ ಆತ್ಮೀಯವಾಗಿ ಮಾತನಾಡಿಸಿ "ಇಲ್ಲ, ನಾನೀಗ ಹಾಡುವುದನ್ನು ಬಿಟ್ಟಿದ್ದೇನೆ" ಎಂದು ಅವರ ತಂಗಿ ಆಶಾ ಅವರ ಬಳಿ ಕಳಿಸಿದ್ದರಂತೆ. ಆದರೆ ಆ ಹಾಡನ್ನು ಕೊನೆಗೆ ಹಾಡಿದ್ದು ಕವಿತಾ ಕೃಷ್ಣಮೂರ್ತಿಯವರು. ಈ ವಿಷಯವನ್ನು ಸಾಧುಕೋಕಿಲ ಅವರು" ಹಾಡುಕೋಗಿಲೆ" ಕಾರ್ಯಕ್ರಮದಲ್ಲಿ ಬಹಳ ನೋವಿನಿಂದ ಕೊನೆಗೂ ನನಗೆ ಅವರಿಂದ ಹಾಡಿಸುವ ಅವಕಾಶ ತಪ್ಪಿ ಹೋಯಿತು ಎಂದು ಹಂಚಿಕೊಂಡಿದ್ದಾರೆ. ರಾಗ, ಶ್ರುತಿ, ತಾಳಲಯ ಇವುಗಳಿಗೆ ಇನ್ನೊಂದು ಹೆಸರಾಗಿದ್ದ ಲತಾ ಅವರ ಕಂಠದಿಂದ ಅಪ್ಪಿತಪ್ಪಿಯೂ ಅಪಶ್ರುತಿ ಹೊರಡುತ್ತಿರಲಿಲ್ಲವಂತೆ. ಪರ್ಫೆಕ್ಷನ್... ಪರ್ಫೆಕ್ಷನ್... ಪರ್ಫೆಕ್ಷನ್... ಇದು ಅವರ ಉಸಿರಾಗಿತ್ತಂತೆ. ಇದೇ ಅವರನ್ನು ಉತ್ತುಂಗಕ್ಕೇರಲು ಅನುವಾಯಿತೆಂದು ಅವರನ್ನು ಬಹಳ ಹತ್ತಿರದಿಂದ ಬಲ್ಲವರು ಹೇಳಿದ್ದಾರೆ.

ಖ್ಯಾತ ಹಿನ್ನೆಲೆ ಗಾಯಕಿ ಕೆ.ಎಸ್. ಚಿತ್ರ ಅವರು ಲತಾ ಅವರೊಡನೆ ತಮಗಾದ ಅನುಭವಗಳನ್ನು ಹಂಚಿಕೊಳ್ಳುತ್ತಾ, ಮೊದಲ ಬಾರಿಗೆ ಅವರು ಲತಾರನ್ನು 1989 ರಲ್ಲಿ ಎಸ್.ಪಿ. ಬಾಲ ಸುಬ್ರಹ್ಮಣ್ಯಂ ಜೊತೆ ಸಂಧಿಸಿದಾಗ, ಲತಾ ಅವರು "ನೀವು ಹಾಡಿರುವುದನ್ನು ನಾನು ಕೇಳಿದ್ದೇನೆ" ಎಂದಾಗ ಅವರಿಗೆ ಟ್ರೋಫಿ ಸಿಕ್ಕಷ್ಟು ಸಂತಸವಾಯ್ತಂತೆ. ಮುಂದೆ 2012ರಲ್ಲಿ ಚಿತ್ರರವರ ಮಗಳ ನಿಧನದಿಂದ ನೊಂದ ಅವರು ತಮ್ಮನ್ನು ತಾವು ಮನೆಯೊಳಗೆ ಬಂಧಿಸಿಕೊಂಡಿದ್ದಾಗ ಲತಾರವರು ಅವರಿಗೆ ಫೋನ್ ಮಾಡಿ, ಸಾಂತ್ವನ ಹೇಳಿದ್ದರಂತೆ. ಅದೇ ಸಮಯಕ್ಕೆ ಸರಿಯಾಗಿ ಅವರಿಗೆ ಲತಾ ಅವರ ಹೆಸರಿನಲ್ಲಿ ಕೊಡುತ್ತಿದ್ದ ಪುರಸ್ಕಾರ ದೊರೆತು ಹೋಗಲು ನಿರಾಕರಿಸಿದಾಗ, ಲತಾ ಕರೆ ಮಾಡಿ ಸಮಾರಂಭಕ್ಕೆ ಬರಲು ಒಪ್ಪಿಸಿದರಂತೆ. ಎಸ್. ಜಾನಕಿ ಹಾಗೂ ಪಿ. ಸುಶೀಲ ತಮ್ಮ ತಮ್ಮ ಹಾಡುಗಳ ಮೂಲಕ ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಇನ್ನು ಅವರಿಗೆ ಚಿಕಿತ್ಸೆ ನೀಡುತ್ತಿದ್ದ ಡಾ॥ ಪ್ರತೀತ್ ಸಂದಾನಿ ಹೇಳುತಾರೆ, "ಈ ದಿನ ನನ್ನ ಪುಟ್ಟ ಎಂಟು ವರ್ಷದ ಮಗಳು ದುಃಖಿಸುತ್ತಾಳೆ. ಎರಡು ವರ್ಷದ ಹಿಂದೆ ಅವರು ಆಸ್ಪತ್ರೆಗೆ ದಾಖಲಾದಾಗಿನಿಂದ ಇಬ್ಬರೂ ಬಹಳ ಹತ್ತಿರವಾಗಿದ್ದರು. ವಿಡಿಯೋ ಸಂಭಾಷಣೆ ಕೂಡ ಮಾಡುತ್ತಿದ್ದರು. ನನ್ನ ಮಗಳನ್ನು ನೋಡಬೇಕು ಎಂದು ಸಹ ಅವರು ಹೇಳುತ್ತಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಈ ಬಾರಿ ಸಹ ಅವರನ್ನು ಸುರಕ್ಷಿತವಾಗಿ ಮನೆಗೆ ಕಳಿಸಬೇಕೆಂದು ಬಹಳ ಪ್ರಯತ್ನಿಸಿದೆ, ಆದರೆ ಅವರ ವಯಸ್ಸು ಸಹಕರಿಸಲಿಲ್ಲ" ಎಂದು ನೊಂದುಕೊಂಡಿದ್ದಾರೆ. ಹೋದ ವರ್ಷ ಇನ್ನೋರ್ವ ಡಾ॥ ಗೌತಮ್ ಬನ್ಸಾಲಿ ಅವರು ಲತಾ ಅವರ ಪೆಡ್ಡಾರ್ ರೋಡ್

# "ಕನ್ನಡ ಕಬೀರ ಶ್ರೀ ಇಬ್ರಾಹಿಂ ಸುತಾರ್ ಅವರು ದೆಹಲಿ ಕರ್ನಾಟಕ ಸಂಘದಲ್ಲಿ ನೀಡಿದ ಕಾರ್ಯಕ್ರಮಗಳು ಸ್ಮರಣೀಯ"

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪುರದ ಇಬ್ರಾಹಿಂ ಸುತಾರ್ 10.05.1940ರಲ್ಲಿ ಮುಧೋಳ ತಾಲೂಕಿನ ಮಹಾಲಿಂಗಪುರದ ಬಡ ಕುಟುಂಬದಲ್ಲಿ ಜನಿಸಿದರು. 1970ರಲ್ಲಿ 'ಭಾವೈಕ್ಯ ಜನಪದ ಸಂಗೀತ ಮೇಳ' ಸ್ಥಾಪಿಸಿದರು. ಕಳೆದ ಹಲವಾರು ವರ್ಷಗಳಿಂದ ನಾಡಿನಾದ್ಯಂತ, ಪ್ರವಚನ, ಭಜನೆ, ಸಾಹಿತ್ಯ ವಾಚನ ಮತ್ತು ಸಮಾಜ ಸೇವೆಯ ಮೂಲಕ ಎಲ್ಲ ಮಹಾತ್ಮರ ಸಾಹಿತ್ಯ ಬಳಕೆ ಮಾಡಿಕೊಂಡು ಭಾವೈಕ್ಯತೆ ಸಂದೇಶ ಸಾರಿದವರು. ಪ್ರಶ್ನೋತ್ತರಗಳ ಜೊತೆ ಹಾಡುಗಳನ್ನು ಹಾಡುವ ಸಂವಾದ ರೂಪದ ಭಜನೆ ಕಲಾ ಪ್ರಕಾರ ರೂಢಿಸಿಕೊಳ್ಳುವ ಮೂಲಕ ಸುತಾರ್ ಅವರು ಅಭಿವ್ಯಕ್ತಪಡಿಸುತ್ತಿದ್ದರು.

ದೆಹಲಿಯ ಕರ್ನಾಟಕ ಸಂಘದ ವೇದಿಕೆಯಲ್ಲಿ ಇದೇ ಕಲಾ ಪ್ರಕಾರಗಳನ್ನು ಹಾಡುತ್ತಾ ಹಾಗೂ ಆ ಹಾಡಿನ ಸಾರವನ್ನು ಸರಳ ಹಾಗೂ ಸುಲಲಿತವಾಗಿ ಮನಮುಟ್ಟುವಂತೆ ಪ್ರಸ್ತುತಪಡಿಸಿದ್ದನ್ನು ಸ್ಮರಿಸಬಹುದಾಗಿದೆ. ಈ ವೇದಿಕೆ ಮೂಲಕ ವಿಶ್ವಗುರು ಬಸವಣ್ಣನವರ 'ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ'. ಈ ವಚನವೂ ಸೇರಿದಂತೆ, ದಾನ ಮಾಡುವುದರ ಮಹತ್ವದ ಕುರಿತಂತೆ ಹಲವು ವಿಷಯಗಳನ್ನಿಟ್ಟುಕೊಂಡು ಅವರು ನಡೆಸಿಕೊಟ್ಟಿರುವ ಕಾರ್ಯಕ್ರಮಕ್ಕೆ ಬಹಳಷ್ಟು ದೆಹಲಿ ಕನ್ನಡಿಗರು ಸಾಕ್ಷಿಯಾಗಿದ್ದಾರೆ.

ಇವತ್ತಿನ ಸಂದರ್ಭದಲ್ಲಿ ಇಂತಹ ಸರ್ವಧರ್ಮ ಸಿದ್ಧಾಂತ ಸಾಧಕರು ಬಹಳ ಕಡಿಮೆ, ಪದ್ಮಶ್ರೀ ಇಬ್ರಾಹಿಂ ಸುತಾರ್ ಅವರು ಅಂತಹ ಸಾಧಕರಾಗಿದ್ದರು. ವಚನ ಮತ್ತು ಸೂಫಿ ಪರಂಪರೆಯನ್ನು, ಸಂವಾದ, ಸಮ್ಮೇಳನ, ಭಜನೆ ಮತ್ತು ಪ್ರವಚನಗಳ ಮೂಲಕ ಸಾರಿದ ಸಾಧಕರವರು. ಅವರಿಗೆ ರಾಜ್ಯ ಹಾಗೂ ರಾಷ್ಟ್ರಮಟ್ಟದ ಹಲವಾರು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. 1995 ರಲ್ಲಿ ಕರ್ನಾಟಕ ಸರ್ಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, 2018ರಲ್ಲಿ ಭಾರತ ಸರ್ಕಾರದಿಂದ ಪದ್ಮಶ್ರೀ ಪ್ರಶಸ್ತಿ ಗೌರವಕ್ಕೆ ಪಾತ್ರರಾದ 'ಕನ್ನಡ ಕಬೀರ' ಇವರು.

ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮ ನೀಡುತ್ತಿರುವ ಇಬ್ರಾಹಿಂ ಸುತಾರ್ (ಬಲಗಡೆಯಿಂದ ಮೂರನೆಯವರು)



ಶ್ರೀಯುತರು ತಮ್ಮ ಎಪ್ಪತ್ತಾರನೇ ವಯಸ್ಸಿನಲ್ಲಿ ಹೃದಯಾಘಾತದಿಂದ ನಿಧನರಾಗಿರುವುದು ಅತೀವ ದುಃಖದ ಸಂಗತಿ. ಅಂತಹ ಮಹನೀಯರ ಅಗಲಿಕೆ ನಾಡಿಗೆ ನುಡಿಗೆ ದೊಡ್ಡ ನಷ್ಟ. ದೆಹಲಿ ಕರ್ನಾಟಕ ಸಂಘದಲ್ಲಿ ಅವರು ನೀಡಿದ ಕಾರ್ಯಕ್ರಮಗಳು ಸ್ಮರಣೀಯವಾಗಿವೆ. ಅಂತಹ ವಿಶಾಲ ಚಿಂತಕರು, ಸ್ಥಿತಪ್ರಜ್ಞರು ಮತ್ತೆ ಮತ್ತೆ ಹುಟ್ಟಿ ಬರಲಿ ಎಂದು ಅವರ ಕೊಡುಗೆಗಳನ್ನು ನೆನೆಯುತ್ತ ದೆಹಲಿ ಕರ್ನಾಟಕ ಸಂಘ ಅವರಿಗೆ ಭಾವ ಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ◻

# ಅಗಲಿದ ಕನ್ನಡ ಚಿತ್ರ ರಂಗದ ಹಿರಿಯ ನಟ 'ಕಲಾತಪಸ್ವಿ' ರಾಜೇಶ್



ಕನ್ನಡದ ಪ್ರತಿಭಾವಂತ ನಟ, ಕಲಾತಪಸ್ವಿ ರಾಜೇಶ್ ಅವರು 1935ರ ಏಪ್ರಿಲ್ 15ರಂದು ಬೆಂಗಳೂರಿನಲ್ಲಿ ಜನಿಸಿದರು. ಇವರ ನಿಜನಾಮ ಮುನಿಚೌಡಪ್ಪ ಚಿಕ್ಕ ವಯಸ್ಸಿನಲ್ಲಿಯೇ ನಟನೆಯಲ್ಲಿ ಆಸಕ್ತಿ ಬೆಳೆಸಿಕೊಂಡ ಮುನಿಚೌಡಪ್ಪ ರಂಗಭೂಮಿ ಪ್ರವೇಶಿಸಿದರು. ಹೆತ್ತವರಿಗೆ ತಿಳಿಯದೇ ಸುದರ್ಶನ ನಾಟಕ ಮಂಡಳಿಗೆ ಸೇರಿದರು. ರಂಗಭೂಮಿಯಲ್ಲಿ ಜನಪ್ರಿಯಗೊಂಡರು. ತಮ್ಮದೆ ಆದ ಶಕ್ತಿ ನಾಟಕ ಮಂಡಳಿಯನ್ನು ಆರಂಭಿಸಿದರು. ನಿರುದ್ಯೋಗ ಬಾಳು ಎನ್ನುವ ನಾಟಕ ಜನಮೆಚ್ಚುಗೆ ಪಡೆಯಿತು. ಕಿತ್ತೂರ ರಾಣಿ ಚೆನ್ನಮ್ಮ, ವಿಷಸರ್ಪ, ಬಡವನ ಬಾಳು, ನಂದಾದೀಪ, ಚಂದ್ರೋದಯ ಇತ್ಯಾದಿ ನಾಟಕಗಳ ಮೂಲಕ ಅವರು ಜನಪ್ರಿಯತೆಯನ್ನು ಪಡೆದುಕೊಂಡರು. ರಂಗಭೂಮಿಯಲ್ಲಿ ವಿದ್ಯಾಸಾಗರ ಹೆಸರಿನಿಂದ ಗುರುತಿಸಿಕೊಂಡರು. ಇವರು ಲೋಕೋಪಯೋಗಿ ಇಲಾಖೆಯಲ್ಲಿ ಶೀಘ್ರಲಿಪಿ ಹಾಗೂ ಬೆರಳಚ್ಚುಗಾರರಾಗಿ ಕೆಲಸ ನಿರ್ವಸಿದ್ದರು. ಪ್ರಸಿದ್ಧ ನಿರ್ಮಾಪಕ ಬಿ.ಎಸ್ ನಾರಾಯಣ್ ನಿರ್ಮಿಸಿರುವ ಸಿ.ವಿ. ಶಿವಶಂಕರ್ ಅವರು ನಿರ್ದೇಶಿರುವ 'ನಮ್ಮ ಊರು' ಚಿತ್ರ ಭರ್ಜರಿ ಯಶಸ್ಸು ತಂದು ಕೊಟ್ಟಿತು. ಅಷ್ಟೆ ಅಲ್ಲದೆ ರಾಜೇಶ್ ಅವರಿಗೆ ಅಪಾರ ಜನಪ್ರಿಯತೆಯನ್ನು ತಂದಿತು.ಇವರು ನಾಯಕ ಪ್ರಧಾನ ಪಾತ್ರಗಳು ಹಾಗೂ ವೈವಿಧ್ಯಮಯ ಪೋಷಕ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ.

ಗಂಗೆ ಗೌರಿ, ಸತೀ ಸುಕನ್ಯ, ಬೆಳುವಲದ ಮಡಿಲಲ್ಲಿ, ಕಪ್ಪು ಬಿಳುಪು, ಬೃಂದಾವನ, ಬೋರೆಗೌಡ ಬೆಂಗಳೂರಿಗೆ ಬಂದ, ಮರೆಯದ ದೀಪಾವಳಿ, ಪ್ರತಿಧ್ವನಿ, ಕಾವೇರಿ, ದೇವರಗುಡಿ, ಬದುಕು ಬಂಗಾರವಾಯ್ತು, ಸೊಸೆ ತಂದ ಸೌಭಾಗ್ಯ, ಮುಗಿಯದ ಕಥೆ, ಬಿಡುಗಡೆ, ದೇವರ ದುಡ್ಡು, ಕಲಿಯುಗ, ಪಿತಾಮಹ, ಮುಂತಾದ ಚಿತ್ರಗಳಲ್ಲಿ ರಾಜೇಶ್ ಅವರು ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ.

ಪ್ರತಿಧ್ವನಿ, ದೇವರಗುಡಿ, ಬದುಕು ಬಂಗಾರವಾಯ್ತು ಚಿತ್ರಗಳಲ್ಲಿ ಅವರು ನಾಯಕನಾಗಿ ಅಭಿನಯಿಸದಿದ್ದರೂ ಬಹಳ ಕಾಲ ನೆನಪಿನಲ್ಲಿ ಉಳಿಯುತ್ತಾರೆ. ಕರ್ಣ ಚಿತ್ರದಲ್ಲಿ ಡಾಕ್ಟರ್ ಆಗಿ ಅಭಿನಯಿಸಿದ ಅವರ ಗಾಂಭೀರ್ಯ ಕೂಡಾ ನೆನಪಿನಲ್ಲಿ ಉಳಿಯುವಂತದ್ದು.

ಬೆಳುವಲದ ಮಡಿಲಲ್ಲಿ ಬೆವರು ಹನಿ ಬಿದ್ದಾಗ,ನಾನೇ ಎಂಬ ಭಾವ ನಾಶವಾಯಿತೋ, ರವಿವರ್ಮನ ಕುಂಚದ ಕಲೆ, ಈ ದೇಶ ಚೆನ್ನ ಈ ಮಣ್ಣು ಚೆನ್ನ,ಕಂಗಳು ವಂದನೆ ಹೇಳಿವೆ ಮುಂತಾದ ಜನಪ್ರಿಯ ಹಾಡುಗಳನ್ನು ನೆನೆದಾಗ ತಟ್ಟನೆ ರಾಜೇಶ್ ಕಣ್ಮುಂದೆ ಬಂದು ನಿಲ್ಲುತ್ತಾರೆ. ಮತ್ತೆ ಮತ್ತೆ ಜೀವಂತವಾಗುತಾರೆ. ಕಲಾತಪಸ್ವಿ ಎನ್ನುವ ರಾಜೇಶ್ ಜೀವನ ಚರಿತ್ರೆ ಪುಸ್ತಕ ಹೊರಬಂದಿದೆ. ರಾಜೇಶ್ ಅವರಿಗೆ ಹಲವಾರು ಪ್ರಶಸ್ತಿ ಗೌರವಗಳು ಅರಸಿ ಬಂದಿವೆ. ಕನ್ನಡ ಚಿತ್ರರಂಗಕ್ಕೆ ಅವರು ನೀಡಿರುವ ಕೊಡುಗೆಯನ್ನು ಗಮನಿಸಿ, ಧಾರವಾಡ ವಿಶ್ವವಿದ್ಯಾಲಯವು ಡಾಕ್ಟರೇಟ್ ಗೌರವವನ್ನು ಸಲ್ಲಿಸಿದೆ.

ದಿನಾಂಕ 19.02.2022ರಂದು ನಿಧನರಾದ ನಟ ರಾಜೇಶ್‌ರವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ. ◻

(ಹಿಂದಿನ ಪುಟದಿಂದ) ಬಂಗಲೆಯಲ್ಲಿ ಭೇಟಿಯಾದಾಗ ಲತಾ ಅವರು "ಈ ಕೊರೊನಾ ಮಾರಕದಿಂದಾಗಿ ಬಡವರ ಜೀವನ ಎಷ್ಟೊಂದು ಕಷ್ಟವಾಗಿದೆ. ಅವರಿಗೆ ನಾನೇದಾರೂ ಸಹಾಯ ಮಾಡಬೇಕು" ಎಂದು ಕೇಳಿಕೊಂಡರಂತೆ. ಡಾಕ್ಟರ್ ಹೇಳುತ್ತಾರೆ "ನೈಟಿಂಗೇಲ್ ಧ್ವನಿಯ ಜೊತೆ ಅವರಲ್ಲಿ ಗೋಲ್ಡನ್ ಹಾರ್ಟ್ ಕೂಡ ಇತ್ತು ಎಂದು.

ಲತಾ ಮಂಗೇಷ್ಕರ್ ಅವರ ನಿಧನವನ್ನು ಬ್ರೀಚ್‌ಕ್ಯಾಂಡಿ ಆಸ್ಪತ್ರೆಯಲ್ಲಿ ಘೋಷಿಸಿದಾಗ ಆಸ್ಪತ್ರೆ ಸಿಬ್ಬಂದಿಗಳು ನರ್ಸ್‌ಗಳು ಭಾವುಕರಾಗಿ ದುಃಖದ ಕಟ್ಟೆಯೊಡೆದುಗೋಳಿಟ್ಟರಂತೆ. ಪ್ರಧಾನಿ ನರೇಂದ್ರ ಮೋದಿಯವರು ಸಹ "ಸಂಗೀತದ ಜೊತೆ ದೇಶದ ಬಗ್ಗೆಯೂ ಕಾಳಜಿ ಇದೆ ಲತಾಜೀಗೆ, ಭಾರತ ಇನ್ನೂ ಅಭಿವೃದ್ಧಿ ಹೊಂದಬೇಕು, ಇನ್ನೂ ಸುಭದ್ರವಾಗಬೇಕೆಂದೂ, ಬಲಿಷ್ಠವಾಗಬೇಕೆಂದೂ ಭೇಟಿಯಾದಾಗಲೆಲ್ಲ ಹೇಳುತ್ತಲೇ ಇರುತ್ತಿದ್ದರು" ಎಂದು ಹೇಳಿದ್ದಾರೆ. ಜೀವನದ ಎಲ್ಲಾ ಭಾವರಸಗಳನ್ನೂ ತಮ್ಮ ಕಂಠದಿಂದ ಹೊರಹೊಮ್ಮಿಸಿ ಅವರ ಅಳುವ ಹಾಡು ಕೇಳಿ ನಾವೂ ದುಃಖಿಸಿದ್ದೇವೆ ಅವರ ನಗುವ ಹಾಡು ಕೇಳಿ ನಾವೂ ನಕ್ಕಿದ್ದೇವೆ, ಒಂದು ಸುಮಧುರವಾದ ಹೂವಿನ ತೆರದಲ್ಲಿ ತಮ್ಮ ಬದುಕನ್ನು ಸಾರ್ಥಕ ಗಳಿಸಿಕೊಂಡ ಲತಾದೀ ಎಂದಿಗೂ ಭರತ ಖಂಡದಿಂದ ಮರೆಯಾಗಲಾರರು. ಅವರ ಧ್ವನಿಯಲ್ಲಿದ್ದ ಆದ್ಯೆವಿಕತೆ, ಡಿವಿನಿಟಿ ಎಂದೇನು ಕರೆಯುತ್ತೇವೆ, ಆ ಪವಿತ್ರತೆ ಮರೆಯಲು ಸಾಧ್ಯವೇ...? ಲತಾ ಅವರು ಬಹುವಾಗಿ ಮೆಚ್ಚುತ್ತಿದ್ದ ಪಾಕಿಸ್ತಾನೀಗಾಯಕಿ ನೂರ್‌ಜಹಾನ್ ಹೇಳುವಂತೆ "ಅರೇ, ಲತಾತೋ ಲತಾ ಹೈ, ಉಸ್ಕೆ ಜೈಸೆ ಕೋಯಿ ದೂಸ್ರಾ ನಾ ಪೈದಾ ಹುವಾ ಹೈ ನಾ ಹೀ ಪೈದಾ ಹೋಗಾ" ಎನ್ನುವ ಮಾತು ಅಕ್ಷರಶಃ ಸತ್ಯ.

ಬರೀ ಭಾರತದಲ್ಲಷ್ಟೇ ಅಲ್ಲ, ವಿಶ್ವದ ಎಲ್ಲಾ ದಿಕ್ಕುಗಳಲ್ಲಿ ಇವರಿಗೆ ಅಭಿಮಾನಿಗಳಷ್ಟೇ ಅಲ್ಲ ಇವರನ್ನು ಏಕಲವ್ಯ ತನ್ನ ಮಾನಸ ಗುರುವಾಗಿಸಿಕೊಂಡ ದ್ರೋಣಾಚಾರ್ಯರಂತೆ ಮಾನಸ ಗುರುವನ್ನಾಗಿ ಸ್ವೀಕರಿಸಿ ತಮ್ಮ ಜೀವನದ ಕ್ಯಾಸೆಟ್ ಗುರು, ಸೌಂಡ್ ಟ್ರ್ಯಾಕ್ ಎಂದು ಲಕ್ಷಾಂತರ ಸಂಗೀತ ರಸಿಕರು ನೆನಪಿಸಿಕೊಳ್ಳುತ್ತಾರೆ. ಹೀಗೆ ಲತಾ ದೀದಿ ನಮ್ಮೆಲ್ಲರ ಹೃನ್ಮನಗಳಲ್ಲಿ ಎಂದೆಂದಿಗೂ ನೆಲೆಸಿರುತಾರೆ. ಇಡೀ ವಿಶ್ವದಲ್ಲಿ ಭಾರತದ ಸ್ಥಾನವನ್ನು ಅಗ್ರಗಣ್ಯಗೊಳಿಸಿದ ಇಬ್ಬರು ಮಹಿಳೆಯರಲ್ಲಿ ಒಬ್ಬರು 'ಇಂದಿರಾ ಗಾಂಧಿ', ಇನ್ನೊಬ್ಬರು 'ಲತಾ ಮಂಗೇಷ್ಕರ್'. ಇಂತಹ ಅಮರ ಜೀವಕ್ಕೆ ಜನ್ಮವಿತ್ತ ತಾಯಿ ಭಾರತಿ ಧನ್ಯಳು. ಇಂತಹ ದೇಶದಲ್ಲಿ ಜನ್ಮವೆತ್ತಿದ ನಾವೆಲ್ಲರೂ ಸಹ ಧನ್ಯರು. ◻

**ಜೈ ಭಾರತ ಮಾತೆ ವಂದೇಮಾತರಂ**

*ಶ್ರೀಮತಿ ಉಮಾ ಶ್ರೀನಿವಾಸ್*

# ದೆಹಲಿ ಕನ್ನಡ ಶಾಲೆಯ ಮಕ್ಕಳಿಂದ-ಬೇಂದ್ರೆ ನಮನ



ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಶಬ್ದಗಾರುಡಿಗ, ಪದಮಾಂತ್ರಿಕ, ಕನ್ನಡದ ಗುರುದೇವ, ಯುಗದ ಮಹಾಕವಿ, ಧಾರವಾಡದ ಅಜ್ಜ ಎಂದೇ ಖ್ಯಾತರಾದ ಜ್ಞಾನಪೀಠ ಪುರಸ್ಕೃತ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ 127ನೇ ಜನ್ಮ ದಿನದ ಅಂಗವಾಗಿ ಬೇಂದ್ರೆ ನಮನ ಕಾರ್ಯಕ್ರಮವನ್ನು ಫೆ. 5 ರಂದು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜು, ಬೆಂಗಳೂರು ಇಲ್ಲಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸತ್ಯಮಂಗಲ ಮಹಾದೇವ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ 'ನೂರುಮರ! ನೂರುಸ್ವರ! ಒಂದೊಂದು ಅತಿಮಧುರ' ಎನ್ನುವ ಬೇಂದ್ರೆಯವರ ಕವಿತೆಯಂತೆ ಹೊರನಾಡಿನಲ್ಲಿರುವ ನೀವೆಲ್ಲರೂ ಸೇರಿ ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ಭಾರತದ ಭವಿಷ್ಯಗಳಾದ ಮಕ್ಕಳಿಗಾಗಿ ಆಯೋಜಿಸಿರುವುದು ಅಭಿನಂದನೀಯ ಎಂದು ಹೇಳಿದರು.

ಬೇಂದ್ರೆ ಎಂದರೆ ಒಂದು ಸಂಭ್ರಮ. ಶಬ್ದಗಳನ್ನು ಸಮರ್ಥವಾಗಿ ಬಳಸಿ ಎಲ್ಲರೂ ಸವಿಯುವ ಹಾಗೆ ಬರೆದವರು. ತನ್ನ ದುಃಖವನ್ನು ತನ್ನ ಒಡಲೊಳಗಿಟ್ಟು ಸಹೃದಯರಿಗೆ ಸವಿಯನ್ನು ಉಣಿಸಿದವರು. ಬಡತನದ ಬೇಗೆಯನ್ನು ಭಾವಗೀತೆಯಾಗಿಸಿ ಜನಸಾಮಾನ್ಯರ ಭಾವನೆಯನ್ನು ಕಾವ್ಯವಾಗಿಸಿದವರು. ತಾಯಿಯ ಹೆಸರನ್ನು ಕಾವ್ಯನಾಮವನ್ನಾಗಿ ಇಟ್ಟುಕೊಂಡು ಜೀವನದುದ್ದಕ್ಕೂ ಮಾತೃತ್ವಶಕ್ತಿಯನ್ನು ಧ್ಯಾನಿಸಿದ ಬೇಂದ್ರೆ ಅವರ ಚಿಂತನೆಗಳು ರೂಪಕ ಮಾತ್ರವಲ್ಲ ಬದುಕಿನ ಶೈಲಿಯಾಗಿತ್ತು ಎಂದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಮಾತನಾಡಿ ಕವಿ, ದಾರ್ಶನಿಕ ಬೇಂದ್ರೆ ಈ ಯುಗದ ಒಬ್ಬ ಮಹಾಕವಿ. ಕವಿಗಳಿಗೆ, ಸಾಹಿತಿಗಳಿಗೆ ಸ್ಫೂರ್ತಿಯ ಸೆಲೆ. ಇಡೀ ಜೀವನದ ತುಂಬಾ ನಿಸ್ವಾರ್ಥ ಸೇವೆಯನ್ನುಗೈದ 'ಧಾರವಾಡದ ಅಜ್ಜ' ಅವರ ಕೆಲವೊಂದು ಮಕ್ಕಳ ಕವಿತೆ, ಕಥೆಗಳು ಮಕ್ಕಳ ಮನಸ್ಸನ್ನು ಪರಿವರ್ತಿಸುತ್ತವೆ. ರಸವೆ ಜನನ, ವಿರಸವೆಮರಣ, ಸಮರಸವೆ ಜೀವನ ಎಂದು ಹೇಳಿದ ಧೀಮಂತ ಕವಿ ಬೇಂದ್ರೆ ಅವರನ್ನು ವಿದ್ಯಾಸಂಸ್ಥೆಯಲ್ಲಿ ಇಂತಹ ಕಾರ್ಯಕ್ರಮದ ಮೂಲಕ ನೆನೆಸಿಕೊಳ್ಳುತ್ತಿರುವುದು ಆ ಮೂಲಕ ಮಕ್ಕಳಲ್ಲಿ ಅವರ ಬದುಕು ಬರಹದ ಅರಿವು, ಚಿಂತನೆಗಳನ್ನು ಮೂಡಿಸುತ್ತಿರುವುದು ಅನುಕರಣೀಯ ಎಂದರು.

ಕಾರ್ಯಕ್ರಮದಲ್ಲಿ ಶಾಲೆಯ ವಿದ್ಯಾರ್ಥಿಗಳು ಬೇಂದ್ರೆಯವರ ಭಾವಗೀತೆ, ಕವಿತೆ ನುಡಿಮುತ್ತುಗಳನ್ನು ಪ್ರಸ್ತುತಪಡಿಸಿದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪದಾಧಿಕಾರಿಗಳು ಮತ್ತು ಸದಸ್ಯರು, ಶಿಕ್ಷಕವೃಂದ, ಪೋಷಕರು ಹಾಗೂ ಸಾಹಿತ್ಯಾಸಕ್ತರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶಾಲಾ ಪ್ರಾಂಶುಪಾಲರಾದ ಪ್ರಶಾಂತಕುಮಾರ್ ಸ್ವಾಗತಿಸಿದರು. ಶಿಕ್ಷಕರಾದ ಲಾವಣ್ಯ ಎಂ.ಎಸ್. ಅತಿಥಿಗಳನ್ನು ಪರಿಚಯಿಸಿದರು. ಅರವಿಂದ ಬಿಜ್ಜೈ ವಂದಿಸಿದರು. ಅಕ್ಕಮಹಾದೇವಿಯವರು ಕಾರ್ಯಕ್ರಮವನ್ನು ನಿರೂಪಿಸಿದರು. ❑

***ಅರವಿಂದ ಬಿಜ್ಜೈ***

# ಎಸ್.ಆರ್. ರಾಜಪ್ಪ ಅವರಿಗೆ ಕರ್ನಾಟಕ ಭವನದಿಂದ ಬೀಳ್ಕೊಡುಗೆ

ನವದೆಹಲಿಯ ಕರ್ನಾಟಕ ಭವನದಲ್ಲಿ ಸುಮಾರು 3 ದಶಕಗಳಿಗೂ ಹೆಚ್ಚು ಕಾಲ ಸರ್ಕಾರಿ ಸೇವೆ ಸಲ್ಲಿಸಿರುವುದು ನನ್ನ ತಂದೆ ತಾಯಿ ಹಾಗೂ ಹಿತೈಷಿಗಳ ಆಶೀರ್ವಾದದಿಂದ ಎಂದು ಇದೇ ಫೆ. 28ರಂದು ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿದ ಎಸ್. ಆರ್. ರಾಜಪ್ಪ ಅವರು ತಮ್ಮ ಮನದಾಳದ ಮಾತನ್ನು ವ್ಯಕ್ತಪಡಿಸಿದರು.

ಕರ್ನಾಟಕ ಭವನದ ಪೂರಕ ಕಟ್ಟಡದಲ್ಲಿ ಆಯೋಜಿಸಿದ್ದ ಬೀಳ್ಕೊಡುಗೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ತಮಗೆ ಬೆನ್ನೆಲುಬಾಗಿ ನಿಂತು, ತಮ್ಮ ಏಳಿಗೆಯನ್ನು ಬಯಸಿ, ಆಶೀರ್ವಾದವನ್ನಿತ್ತ ತನ್ನ ತಂದೆ ತಾಯಿ ಹಾಗೂ ಹಿತೈಷಿಗಳನ್ನು ನೆನೆದು ಭಾವುಕರಾದರು. ನನ್ನದೊಂದು ಪುಟ್ಟ ಅಳಿಲು ಸೇವೆ ಸಲ್ಲಿಸುವ ಭಾಗ್ಯ ನನಗೆ ದೊರೆತಿರುವುದು ಸಂತೋಷ ಹಾಗೂ ಹೆಮ್ಮೆ ತಂದಿದೆ. ಸನ್ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಸಚಿವರು, ರಾಜ್ಯದ ಹಿರಿಯ ಅಧಿಕಾರಿಗಳು ಹಾಗೂ ಗಣ್ಯಾತಿಗಣ್ಯರ ಸೇವೆ ಸಲ್ಲಿಸುವ ಸದಾವಕಾಶ ಕರ್ನಾಟಕ ಭವನ ತಮಗೆ ಕಲ್ಪಿಸಿಕೊಟ್ಟಿದ್ದು ತಮ್ಮ ಸುಕೃತ ಫಲವೇ ಸರಿ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ನವದೆಹಲಿಯ ಕರ್ನಾಟಕ ಭವನದ ವಿಶೇಷ ನಿವಾಸಿ ಆಯುಕ್ತರಾದ ವಿಜಯ ರಂಜನ್ ಸಿಂಗ್ ಅವರು ಮಾತನಾಡಿ, ತಾವು ವಯೋನಿವೃತ್ತಿ ನಂತರವೂ ಗುರುಹಿರಿಯರ ಆಶೀರ್ವಾದದಿಂದ ತಮ್ಮ ಜೀವನ ಹಸನಾಗಲಿ, ಸುಖಮಯವಾಗಿರಲಿ ಎಂದು ರಾಜಪ್ಪ ಕುಟುಂಬದವರಿಗೆ ಶುಭ ಹಾರೈಸಿದರು. ಅವರಂತೆ ಅವರ ವೃತ್ತಿ ಜೀವನದ ಅನುಭವಗಳು



ಇತರ ಸಹೋದ್ಯೋಗಿಗಳಿಗೆ ಮಾದರಿಯಾಗಲಿ ಎಂದು ಹೇಳಿದರು.

ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾದ ಎಚ್. ಪ್ರಸನ್ನ ಅವರು ಮಾತನಾಡಿ, ರಾಜಪ್ಪ ಅವರು ಶಿಸ್ತಿನ ಜೊತೆಗೆ ವೃತ್ತಿ ಕಾರ್ಯದಕ್ಷತೆ ಹಾಗೂ ಕಾರ್ಯಕ್ಷಮತೆಯನ್ನು ಮೈಗೂಡಿಸಿಕೊಂಡು ಕಾರ್ಯನಿರ್ವಹಿಸುತ್ತಿದ್ದರು. ಇವರ ಸ್ವಭಾವ ಎಲ್ಲಾ ಸಹೋದ್ಯೋಗಿಗಳಿಗೆ ಅಚ್ಚುಮೆಚ್ಚಾಗಿದೆ. ರಾಜಪ್ಪ ಅವರ ನಿವೃತ್ತ ಜೀವನ ಸುಖಮಯವಾಗಿರಲಿ ಎಂದು ಆಶಿಸಿದರು.

ಕರ್ನಾಟಕ ಭವನದ ಉಪ ಸಮನ್ವಯಾಧಿಕಾರಿ ಆರ್ ರೇಣುಕುಮಾರ್, ವ್ಯವಸ್ಥಾಪಕ ಅನಂತ ಹಾಗೂ ತ್ಯಾಗೇಶ್ ಮೂರ್ತಿ ಮಾತನಾಡಿ, ವಯೋ ನಿವೃತ್ತಿ ಹೊಂದುತ್ತಿರುವ ರಾಜಪ್ಪ ಅವರಿಗೆ ಶುಭಾಶಯ ಕೋರಿದರು.

ಕಾರ್ಯಕ್ರಮ ನಿರ್ವಹಿಸಿದ ಕರ್ನಾಟಕ ಭವನದ ವ್ಯವಸ್ಥಾಪಕ ರಾಘವೇಂದ್ರ ಅವರು ಮಾತನಾಡಿ, ರಾಜಪ್ಪ ಮೂಲತಃ ಚಿಕ್ಕಮಗಳೂರು ಜಿಲ್ಲೆಯ ತರಿಕೆರೆ ತಾಲೂಕಿನ ಅಜ್ಜಂಪುರದವರಾಗಿದ್ದು ಇವರೊಂದಿಗೆ ತಮ್ಮ ಒಡನಾಟ 24 ವರ್ಷಗಳಿಂದಲೂ ಇದೆ ಎಂದು ಹೇಳುತ್ತಾ ಶ್ರೀಯುತರ ನಿವೃತ್ತಿಯ ನಂತರದ ಜೀವನ ಸುಖಮಯ ಹಾಗೂ ಆರೋಗ್ಯಯುತವಾಗಿ ಇರಲೆಂದು ಹಾರೈಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ಭವನದ ಅಪರ ನಿವಾಸಿ ಆಯುಕ್ತರಾದ ಸಿಮಿ ಮರಿಯಮ್ ಜಾರ್ಜ್, ಅಪರ ನಿವಾಸಿ ಆಯುಕ್ತರಾದ ಆಕ್ರಿತಿ ಬನ್ಸಾಲ್, ಕರ್ನಾಟಕ ಭವನದ ಅಧಿಕಾರಿಗಳು, ಸಿಬ್ಬಂದಿ ವರ್ಗದವರು ಹಾಗೂ ಎಸ್.ಆರ್. ರಾಜಪ್ಪ ಅವರ ಕುಟುಂಬದವರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ **ಮಾತೃ ಇಲಾಖೆಗೆ ಮರಳುತ್ತಿರುವ ಮಾಧುರಿ ಸಿಂಗ್** ಅವರನ್ನು ಸನ್ಮಾನಿಸಿ, ಅವರ ವೃತ್ತಿ ಜೀವನ ಸುಖಮಯವಾಗಿರಲಿ ಎಂದು ಆತ್ಮೀಯವಾಗಿ ಬೀಳ್ಕೊಡಲಾಯಿತು. ❑

***ಅಮರೇಶ***

Delhi Karnataka Sangha Abhimata
March-2022, Vol. No.32, Issue No. 6, Price Rs.1/-
RNI Regn. No. 53405/91, DL-SW-01/4016/22-24
Date of Publication : Mar 8th / 9th, Posting Date : 10th / 11th, Total Pages-24, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P



ದೆಹಲಿ ಕನ್ನಡ ಮಹಿಳೆಯರಿಂದ ನಾಡಗೀತೆ ಗಾಯನ



ಡಾ. ಕೆ. ರಾಮೇಶ್ವರಪ್ಪ ಅವರ ಜಾನಪದ ಜೀವದ್ವನಿ ತಂಡದೊಂದಿಗೆ ಹಾಡಿ ಕುಣಿದ ದೆಹಲಿ ಕನ್ನಡಿಗರು


ಕುಮಾರಿ ಸುದೀತಿ ಅಂಬಳೆ, ಕುಮಾರಿ ಶ್ರೀದಾ ಅಂಬಳೆ–ಪ್ರಾರ್ಥನೆ



ಕುಮಾರಿ ಅವನಿ ನೆಲ್ಲಿ ಯೋಗ ಪ್ರದರ್ಶನ


ಕುಮಾರಿ ಸಪ್ನಾ ಅಟ್ಟಾವರ್ ನೃತ್ಯ ಪ್ರದರ್ಶನ